ವೈದ್ಯ ಬರಹಗಾರರ ಸಮಿತಿ ಸಾರಥ್ಯದಲ್ಲಿ

# ವೈದ್ಯ ಸಂಪದ

ಕನ್ನಡ ಬಳಸಿ ವೈದ್ಯ ಸಾಹಿತ್ಯ ಬೆಳೆಸಿ

ಸಂಪುಟ: 2 ಸಂಚಿಕೆ: 6 ದ್ವೈಮಾಸಿಕ ನವೆಂಬರ್–ಡಿಸೆಂಬರ್ 2023 ಪುಟಗಳು: 62

ಭಾರತೀಯ ವೈದ್ಯಕೀಯ ಸಂಘ ಕರ್ನಾಟಕ ರಾಜ್ಯ ಶಾಖೆಯ ಸದಸ್ಯರ ಆಂತರಿಕ ವಿತರಣೆಗಾಗಿ ಮಾತ್ರ



## ಕರ್ನಾಟಕ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು

ಹೆಸರಾಯಿತು ಕರ್ನಾಟಕ
ಉಸಿರಾಗಲಿ ಕನ್ನಡ

## ಸಂಪದದೊಳಗೆ...


ಸಂಪಾದಕೀಯ – ಡಾ ಸುರೇಶ ಸಗರದ ಪುಟ 3

ರಾಜ್ಯಾಧ್ಯಕ್ಷರ ನುಡಿ (22–23) – ಡಾ ಎಸ್ ಬಿ ಲಕ್ಕೋಳ್ ಪುಟ 4

ಸಮಿತಿಯ ಅಧ್ಯಕ್ಷರ ನುಡಿ – ಡಾ ಶಿವಾನಂದ ಕುಬಸದ ಪುಟ 5

ರಾಜ್ಯಾಧ್ಯಕ್ಷರ ನುಡಿ (23–24) – ಡಾ ಶ್ರೀನಿವಾಸ ಎಸ್ ಪುಟ 6

ಚಿತ್ರ ಕಲೆ – ಡಾ ಶಾಂತಲಾ ಪುಟ 7

ಸ್ತ್ರೀ ಎಂದರೇ ಶೇಕಡ 33 ಅಷ್ಟೇ ಸಾಕೇ? (ಪ್ರಚಲಿತ) – ಡಾ ದಯಾನಂದ ಲಿಂಗೇಗೌಡ ಪುಟ 8

ಜಗಮರೆಸುವ ಮಾಯಾನಿಲಗಳು (ಪ್ರಚಲಿತ) – ಡಾ ಅಶ್ವಿನಿ ಹೆಚ್ ರಾಮಾಸ್ವಾಮಿ ಪುಟ 11

ಸಿಹಿ ಮುತ್ತುಗಳೊಡನೆ ......... (ಕಥೆ) – ಡಾ ರಮೇಶ್ ಬಾಬು ಕೆ ಪುಟ 13

ನಿಫಾ ವೈರಸ್ – (ಕಾಯಿಲೆ / ಚಿಕಿತ್ಸೆ) – ಡಾ ರತ್ನಾಕರ ಪುಟ 18

ಶಿಕ್ಷಣ (ವೈದ್ಯೇತರ) – ಡಾ ಶ್ರೀನಿವಾಸ ಹರಪನಹಳ್ಳಿ ಪುಟ 21

ಆ ಹುಡುಗ (ವೈದ್ಯೇತರ) – ಡಾ ಜಯಲಕ್ಷ್ಮಿ ನಾಯಕ್ ಪುಟ 24

ಇದೂ ಒಂಥರಾ ಅಧ್ಯಾತ್ಮ (ವೈದದ್ಯೇತರ) – ಡಾ ಶ್ರೀಪಾದ ಆರ್ ಕುಲಕರ್ಣಿ ಪುಟ 26

ಓ ಒಲವೇ (ವಿದ್ಯಾರ್ಥಿ ಲೋಕ) – ಅಕ್ಷಯ ಕುಮಾರ್ ಪುಟ 28

ಏಕಾದ್ರಿಷ್ಟಾ (ವಿದ್ಯಾರ್ಥಿ ಲೋಕ) – ಶ್ರೇಯಾ ಸಗರದ ಪುಟ 29

ವಿಪಶ್ಯನ (ಅಧ್ಯಾತ್ಮ ಮತ್ತು ಆರೋಗ್ಯ) – ಡಾ ವೀಣಾ ಎನ್ ಸುಳ್ಯ ಪುಟ 30

ಆಧುನಿಕ ನಂಜುರಾಹಿತ್ಯ ಪಿತಾಮಹ (ವೈದ್ಯ ಲೋಕದ ವಿಸ್ಮಯ) – ಡಾ ನಾ ಸೋಮೇಶ್ವರ ಪುಟ 34

ವಿಶ್ವ ಸಂಧಿವಾತ ದಿನ (ಆರೋಗ್ಯ ದಿನಾಚರಣೆ) – ಡಾ ಮಹಾಬಲೇಶ್ವರ ಎಂ ಪುಟ 38

ಸಮಿತಿಯ ಮತ್ತು ಶಾಖೆಗಳ ಕನ್ನಡ ಕಾರ್ಯಕ್ರಮಗಳ ವರದಿ – ಡಾ ವೀಣಾ ಎಸ್ ಭಟ್ ಪುಟ 41

ಕಾವ್ಯ ಸಂಪದ – ಡಾ ತನುಶ್ರೀ ಹೆಗಡೆ ಪುಟ 47

ಕಾವ್ಯ ಸಂಪದ – ಡಾ ಅರವಿಂದ ಪಟೇಲ್ ಪುಟ 48

ಕಾವ್ಯ ಸಂಪದ – ಡಾ ಗಡ್ಡಿ ದಿವಾಕರ್ ಪುಟ 49

ಕಾವ್ಯ ವಿಶ್ಲೇಷಣೆ – ಡಾ ಗೋವಿಂದ ಹೆಗಡೆ ಪುಟ 50

ಕೃತಿ ಪರಿಚಯ – ಡಾ ಅಣ್ಣಯ್ಯ ಕುಲಾಲ್ ಉಳ್ತೂರು ಪುಟ 54

ಕ್ಷ–ಕಿರಣ ವಿಭಾಗ ಮತ್ತು ಭಾರತ (ಅನಿವಾಸಿ ಲೋಕ) – ಡಾ ರಾಜಶ್ರೀ ಪಾಟೀಲ್ ಪುಟ 56

ಪದಬಂಧ 12 / ಪದಬಂಧ 11 ಕ್ಕೆ ಉತ್ತರ – ಡಾ ರಮೇಶ ಬಾಬು ಕೆ ಪುಟ 59

ಚಿತ್ರ ಸಂಪದ – ಡಾ ಅರವಿಂದ ಪಟೇಲ / ಡಾ ಸುನಂದಾ ಕುಲಕರ್ಣಿ ಪುಟ 60


**ಲೇಖಕರಿಗೆ ಮಾಹಿತಿ:**

ಲೇಖನಗಳನ್ನು ವಿಭಾಗೀಯ ಸಂಪಾದಕರಿಗೆ ಮೇಲ್ ಮೂಲಕ ಕಳುಹಿಸಬೇಕು.
ಲೇಖನಗಳನ್ನು ವರ್ಡ್ ಫೈಲ್ ನಲ್ಲಿ ನುಡಿ ಫಾಂಟ್‌ಗಳನ್ನು ಬಳಸಿ ಬರೆಯಬೇಕು.
ಲೇಖನ ಕಳುಹಿಸಿದ ನಂತರ ವಿಭಾಗೀಯ ಸಂಪಾದಕರಿಗೆ ಸಂದೇಶ ಅಥವಾ ವಾಟ್ಸಾಪ್ ಮೂಲಕ ತಿಳಿಸಿ.
ಪ್ರಕಟಿಸಿದ ಲೇಖನಗಳಿಗೆ ಲೇಖಕರೇ ಹೊಣೆ.

**ಡಾ ಶ್ರೀನಿವಾಸ್ ಎಸ್**
ರಾಜ್ಯಾಧ್ಯಕ್ಷರು
**ಡಾ ವಿ ವಿ ಚಿನಿವಾಲರ್**
ನಿಯೋಜಿತ ಅಧ್ಯಕ್ಷರು
**ಡಾ ಬಿ ಪಿ ಕರುಣಾಕರ್**
ಕಾರ್ಯದರ್ಶಿ
**ಡಾ ಶಿವಾನಂದ ಕುಬಸದ**
ಅಧ್ಯಕ್ಷರು, ಕನ್ನಡ ವೈದ್ಯ ಬರಹಗಾರರ ಸಮಿತಿ
drsmkubsad@gmail.com | +919448012767

ಪ್ರಧಾನ ಸಂಪಾದಕರು: **ಡಾ ಸುರೇಶ ಸಗರದ**
drssagarad@hotmail.com | 9448139339
ವಿಭಾಗೀಯ ಸಂಪಾದಕರು
ಪ್ರಚಲಿತ:
**ಡಾ ಎಚ್ ಎಸ್ ಮೋಹನ್**
drhsmohan@gmail.com | +919448173670
ಕಥೆ:
**ಡಾ ದಿವ್ಯಾ ಕೆ ಎನ್**
divyaural@yahoo.co.in | +919886157094
ಕೃತಿ ಪರಿಚಯ:
**ಡಾ ಅಣ್ಣಯ್ಯ ಕುಲಾಲ್ ಉಳ್ತೂರು**
drkulalannayya@gmail.com | +919448012028
ಕಾಯಿಲೆ / ಚಿಕಿತ್ಸೆ:
**ಡಾ ಉಮಾ ಮಹೇಶ್ವರಿ ಎಸ್**
uma_sura@ yahoo.in | +918277070611
ವೈದ್ಯೇತರ:
**ಡಾ ವಿನಯ ಶ್ರೀನಿವಾಸ್**
vinaya_s@rocketmail.com | +919844083284
ವ್ಯಕ್ತಿ ವಿಷಯ / ಸಂದರ್ಶನ:
**ಡಾ ಅರವಿಂದ ಪಟೇಲ್**
aravindculture@gmail.com | +919448918764
ವೈದ್ಯ ಲೋಕದ ವಿಸ್ಮಯ:
**ಡಾ ನಾ ಸೋಮೇಶ್ವರ**
naasomeswara@gmail.com | +919880465661
ವಿದ್ಯಾರ್ಥಿ ಲೋಕ:
**ಡಾ ಶುಭ್ರತ ಕೆ ಎಸ್**
shubrataks@gmail.com | +919448149927
ಅನಿವಾಸಿ ಲೋಕ:
**ಡಾ ಶಿವಶಂಕರ್ ಎನ್ ಮೇಟಿ**
drmeti123@gmail.com | +447894354400
ನಾಲ್ಕನೇಯ ಆಯಾಮ (ಅಧ್ಯಾತ್ಮಿಕ ಮತ್ತು ಆರೋಗ್ಯ):
**ಡಾ ವೀಣಾ ಎನ್ ಸುಳ್ಯ**
drnveena@gmail.com | +919448215940
ಭಾರತೀಯ ವೈದ್ಯಕೀಯ ಸಂಘದ ಕನ್ನಡ ಕಾರ್ಯಕ್ರಮಗಳು
**ಡಾ ವೀಣಾ ಎಸ್ ಭಟ್**
veenaseetharambhat@gmail.com | +919480353878
ಪದಬಂಧ/ ಪದಕೋಶ/ಚಿಣ್ಣರ ಲೋಕ/ಹನಿಗವನ:
**ಡಾ ಸುಮಾ ಗುಡಿ**
gudi.suma@gmail.com | 9880616349
ಆರೋಗ್ಯ ದಿನಾಚರಣೆ:
**ಡಾ ರಶ್ಮಿ ಕುಂದಾಪುರ**
dr.rashmi.kundapur@gmail.com |+919880496567
ಸಂಘಟನೆ:
**ಡಾ ಮಧುಸೂದನ ಕಾರಿಗನೂರು**
madhusudhanva@gmail.com | +919448237145
ಕಾನೂನು ಮತ್ತು ವೈದ್ಯಕೀಯ:
**ಡಾ ಶಿವರಾಜ್ ಕೆ**
sahanachildrenhospital729@gmail.com | +919535830729
ಕಾವ್ಯ ಸಂಪದ / ವಿಮರ್ಶೆ:
**ಡಾ ಗೋವಿಂದ ಹೆಗಡೆ**
hegadegs@gmail.com | ±919353118024
ಚಿತ್ರ ಸಂಪದ:
**ಡಾ ಪ್ರಿಯಾ ಭಾಲ್ಕಿ / ಡಾ ಅರವಿಂದ ಪಟೇಲ್**
drpriyabhalki@gmail.com |+919980888922
ವಿಳಾಸ:
**ವೈದ್ಯ ಸಂಪದ**
ಐ ಎಮ್ ಎ ಹೌಸ್, ಐ ಎಮ್ ಎ ವೃತ್ತ,
ಆಲೂರು ವೆಂಕಟರಾವ್ ರಸ್ತೆ, ಬೆಂಗಳೂರು 560018
ದೂರವಾಣಿ: 080 26703255, vaidyasampadaeditor@gmail.com


# ಸಂಪಾದಕೀಯ...



**ಡಾ. ಸುರೇಶ ಸಗರದ**

ಆತ್ಮೀಯ ವೈದ್ಯ ಸಂಪದ ಓದುಗರೇ,

ಎಲ್ಲರಿಗೂ ಕರ್ನಾಟಕ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು. ಕರ್ನಾಟಕ ಎಂದು ಮರು ನಾಮಕರಣಗೊಂಡು ಸುವರ್ಣ ಮಹೋತ್ಸವವನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ ಪ್ರತಿ ಕನ್ನಡಿಗನು ಕನ್ನಡದ ಅಸ್ಮಿತೆಗಾಗಿ ಸಂಕಲ್ಪಿಸುವ ಸಮಯ. ಸರಕಾರ ಕನ್ನಡಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು, ನಿಯಮಗಳನ್ನು ಆಚರಣೆಗೆ ತಂದಿದ್ದರೂ ಇನ್ನೂ ಕನ್ನಡದ ಕೆಲಸ ಬಾಕಿ ಇದೆ ಎನಿಸುತ್ತದೆ. ಸಮಗ್ರ ಕರ್ನಾಟಕದ, ಕನ್ನಡದ ಮತ್ತು ಕನ್ನಡಿಗರ ಹಿತದೃಷ್ಟಿಯಿಂದ ಕಾನೂನಾತ್ಮಕ ಕ್ರಮಗಳೊಂದಿಗೆ ಭಾವನಾತ್ಮಕ ಕ್ರಮಗಳೂ ಅವಶ್ಯಕ.




ವೈದ್ಯರ ಕಡ್ಡಾಯ ಗ್ರಾಮೀಣ ಸೇವೆಯನ್ನು ಹಿಂಪಡೆಯಲು ಕರ್ನಾಟಕ ಸರಕಾರ ನಿರ್ಧರಿಸಿದೆ. ಗ್ರಾಮೀಣ ಪ್ರದೇಶದಲ್ಲಿ ವೈದ್ಯರ ಕೊರತೆಯನ್ನು ನೀಗಿಸುವುದು ಈ ಕಾಯಿದೆಯ ಮುಖ್ಯ ಉದ್ದೇಶವಾಗಿತ್ತು. ಆದರೆ ಮುಖ್ಯ ಉದ್ದೇಶ ಈಡೇರದೆ ಸರಕಾರದ ಮೇಲೆ ಆರ್ಥಿಕ ಹೊರೆ ಹೆಚ್ಚಾಗಿದೆ ಎಂದು ಕಂಡು ಬಂದಿದೆ. ಕಾಯಿದೆಗಳನ್ನು ರೂಪಿಸುವಾಗ ಸಮಗ್ರ ಚಿಂತನೆ ಮತ್ತು ದೂರದೃಷ್ಟಿಯ ಅವಶ್ಯಕತೆ ಇರುತ್ತದೆ. ಪದವಿ ಪಡೆದವರ ಸಂಖ್ಯೆ ಅವಶ್ಯಕತೆಗಿಂತ ಅಧಿಕವಾಗಿದೆ. ಇದರಿಂದಾಗಿ ಪದವೀಧರರನ್ನು ಜಿಲ್ಲಾ ಕೇಂದ್ರಗಳಲ್ಲಿ, ವೈದ್ಯಕೀಯ ಮಹಾ ವಿದ್ಯಾಲಯಗಳಲ್ಲಿ ನಿಯೋಜಿಸಲಾಗಿದೆ. ವೈದ್ಯಕೀಯ ಮಹಾ ವಿದ್ಯಾಲಯಗಳ ಅಂಗರಚನಾ ಮತ್ತು ಶರೀರ ಶಾಸ್ತ್ರ ವಿಭಾಗಗಳಲ್ಲಿಯೂ ನಿಯೋಜಿಸಲಾಗಿರುವುದು ಕಂಡು ಬಂದಿದೆ. ಇದು ಈ ಕಾಯಿದೆಯ ಮುಖ್ಯ ಉದ್ದೇಶದ ವಿರುದ್ಧವಾಗಿದೆ. ಕಾಯಿದೆಯನ್ನು ಮಾರ್ಪಾಡು ಮಾಡುವುದರ ಮೂಲಕ ಮೂಲ ಉದ್ದೇಶಗಳನ್ನು ಈಡೇರಿಸಲು

45ನೇ ಪುಟಕ್ಕೆ



**ಡಾ॥ ಶಿವಕುಮಾರ ಬಿ. ಲಕ್ಕೋಳ**
ಅಧ್ಯಕ್ಷರು (2022–23)
ಭಾರತೀಯ ವೈದ್ಯಕೀಯ ಸಂಘ ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು

# ಕರ್ನಾಟಕ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು

**ಆತ್ಮೀಯ ಓದುಗರೇ,**

ಎಲ್ಲಾ ಕನ್ನಡ ಮನಸ್ಸುಗಳಿಗೆ ರಾಜ್ಯೋತ್ಸವದ ಶುಭಾಶಯಗಳು. ಭಾರತೀಯ ವೈದ್ಯಕೀಯ ಸಂಘ ಕಳೆದ ಹಲವು ವರುಷಗಳಿಂದ ಕನ್ನಡ ಪರ ಚಟುವಟಿಕೆಗಳನ್ನು ನಿರಂತರವಾಗಿ ಆಚರಿಸಿಕೊಂಡು ಬರುತ್ತಿದೆ. ಕನ್ನಡ ವೈದ್ಯ ಬರಹಗಾರರ ಸಮಿತಿಯ ನೇತೃತ್ವದಲ್ಲಿ ಕವಿಗೋಷ್ಠಿ, ಕೃತಿ ಬಿಡುಗಡೆ, ಹಿರಿಯ ವೈದ್ಯರ ಕುರಿತು ಬದುಕು–ಬರೆಹ, ಸಾಹಿತಿಳೊಂದಿಗೆ ಸಂಜೆ, ದತ್ತಿ ಉಪನ್ಯಾಸಗಳು ಇತ್ಯಾದಿ ಕಾರ್ಯಕ್ರಮಗಳ ಮೂಲಕ ಕನ್ನಡದ ಸೇವೆಯನ್ನು ನಿರಂತರವಾಗಿ ಮಾಡಲು ಪ್ರಯತ್ನಿಸುತ್ತಿದೆ. 2022 ರ ಜನವರಿಯಿಂದ ಮೂಡಿ ಬರುತ್ತಿರುವ ಈ ನಮ್ಮ ಕನ್ನಡ ದ್ವೈ ಮಾಸಿಕ ವೈದ್ಯ ಸಂಪದವೂ ಅದೇ ಹಾದಿಯಲ್ಲಿ ಪ್ರಮುಖ ಮೈಲಿಗಲ್ಲು. ಕಳೆದ ಒಂದು ವರುಷದ ಒಡನಾಟ ಮತ್ತು ಕನ್ನಡ ಪರ ಚಟುವಟಿಕೆಗಳಲ್ಲಿ ಭಾಗವಹಿಸಲಿದ್ದು ಸಂತಸದ ವಿಷಯ. ಸೆಪ್ಟೆಂಬರ್ 2 ಮತ್ತು 3 ರಂದು ಆಯೋಜಿಸಿದ್ದ ಕನ್ನಡ ವೈದ್ಯ ಬರಹಗಾರರ ರಾಜ್ಯ ಸಮ್ಮೇಳನ ಅದ್ಭುತ ಯಶಸ್ಸಿನ ಮೂಲಕ ನಮ್ಮ ನೆನಪಿನಲ್ಲಿ ಉಳಿದಿದೆ. ಅತ್ಯಂತ ಉತ್ಸಾಹದಿಂದ ಆಯೋಜಿಸಿದ ಶಿವಮೊಗ್ಗ ಶಾಖೆಗೆ ಅಭಿನಂದನೆಗಳು.

ಮಹಿಳಾ ವೈದ್ಯರ ರಾಜ್ಯ ಸಮ್ಮೇಳನ ಯಶಸ್ವಿಯಾಗಿ ಗಂಗಾವತಿಯಲ್ಲಿ ಆಯೋಜಿಸಲಾಗಿತ್ತು. ಮಹಿಳೆಯರ ವೈದ್ಯಕೀಯ ಸಮಸ್ಯೆಗಳಿಗೆ ಪ್ರಾಮುಖ್ಯತೆ ನೀಡಲು ಚರ್ಚೆಗಳ ಅವಶ್ಯಕತೆ ಇದೆ. ಮಹಿಳೆಯರ ಆರೋಗ್ಯ ಸಮಸ್ಯೆಗಳಿಗೆ ಪ್ರತ್ಯೇಕ ಮಾರ್ಗದರ್ಶಿ ರೂಪಿಸಲು ಈ ಸಮ್ಮೇಳನಗಳು ಸಹಾಯಕವಾಗಬೇಕು. ಮಹಿಳಾ ವೈದ್ಯರ ಬೆಳವಣಿಗೆಗೆ ಸಹ ಇದು ಪೂರಕವಾಗಿ ಕಾರ್ಯ ನಿರ್ವಹಿಸಬೇಕು.

ಬೀದರನಲ್ಲಿ ಆಯೋಜಿಸಿದ ಭಾರತೀಯ ವೈದ್ಯಕೀಯ ಸಂಘದ ರಾಜ್ಯ ಸಮ್ಮೇಳನ ಮೆಡಿಕಾನ 89 ರಲ್ಲಿ ಭಾಗವಹಿಸಿದ ಎಲ್ಲಾ ಸದಸ್ಯರಿಗೆ ಧನ್ಯವಾದಗಳು. ಪ್ರಪ್ರಥಮ ಬಾರಿಗೆ ರಾಜ್ಯ ಸಮ್ಮೇಳನವನ್ನು ಯಶಸ್ವಿಯಾಗಿ ಆಯೋಜಿಸಿದ ಬೀದರ ಶಾಖೆಗೆ ಅಭಿನಂದನೆಗಳು. ಎಲ್ಲಾ ಸಂಪನ್ಮೂಲ ವೈದ್ಯರಿಗೆ ಮತ್ತು ಪ್ರಶಸ್ತಿ ವಿಜೇತರಿಗೆ ಹಾರ್ದಿಕ ಅಭಿನಂದನೆಗಳು. ರಾಜ್ಯ ಸಮ್ಮೇಳನದಲ್ಲಿ ಸಕ್ರಿಯವಾಗಿ ಭಾಗವಹಿಸಿ ಯಶಸ್ವಿಗೊಳಿಸುವ ಮೂಲಕ ಸಂಘದ ಬೆಳವಣಿಗೆಗೆ ಕಾರಣವಾಗಬೇಕಾಗಿದೆ. ಮುಕ್ತ ಚರ್ಚೆಯ ಮೂಲಕ ಒಗ್ಗಟ್ಟನ್ನು ಪ್ರದರ್ಶಿಸಿ ಮುಂಬರುವ ಮತ್ತು ಪ್ರಸ್ತುತ ಸಮಸ್ಯೆಗಳನ್ನು ನಿವಾರಿಸಿಕೊಳ್ಳಬಹುದು.

ನೀಟ್ ಪರೀಕ್ಷೆಯಲ್ಲಿ ಅರ್ಹತಾ ಮಟ್ಟವನ್ನು ಶೂನ್ಯಕ್ಕೆ ಇಳಿಸಿರುವುದು ಚರ್ಚೆಯ ವಿಷಯವಾಗಿದೆ. ಪ್ರಿ ಕ್ಲಿನಿಕಲ್ ಮತ್ತು ಉಳಿಯುವ ಸೀಟಗಳನ್ನು ತುಂಬಲು ಒಂದು ಬಾರಿ ಅರ್ಹತಾ ಮಟ್ಟವನ್ನು ಕಡಿಮೆ ಮಾಡಲಾಗಿದೆ ಎಂದು ರಾಷ್ಟ್ರೀಯ ವೈದ್ಯಕೀಯ ಆಯೋಗವು ಸ್ಪಷ್ಟೀಕರಣ ನೀಡಿದೆ. ಈ ಕುರಿತು ಭಾರತೀಯ ವೈದ್ಯಕೀಯ ಸಂಘ ಕರ್ನಾಟಕ ರಾಜ್ಯ ಶಾಖೆ ಅಕ್ಷೇಪಣೆಯನ್ನು ಸಲ್ಲಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಮನವಿ ಮಾಡಿದೆ.

23–24 ರ ಹೊಸ ತಂಡಕ್ಕೆ ಶುಭಾಶಯ ಕೋರುತ್ತಾ ಸದಾ ಹಚ್ಚೇವು ಕನ್ನಡದ ದೀಪಾ ಎಂಬ ಆಶಯದೊಂದಿಗೆ

**ಡಾ॥ ಶಿವಕುಮಾರ ಬಿ. ಲಕ್ಕೋಳ**



**ಡಾ ಶಿವಾನಂದ ಕುಬಸದ**
ಅಧ್ಯಕ್ಷರು
ಕನ್ನಡ ವೈದ್ಯ ಬರಹಗಾರರ ಸಮಿತಿ 2022-23

# ಕಡ್ಡಾಯ ಗ್ರಾಮೀಣ ಸೇವೆ, ಒಂದಿಷ್ಟು ನಿರಾಳತೆ..

**ಆತ್ಮೀಯ ಓದುಗರೇ,**

ಸರ್ವರಿಗೂ ಕನ್ನಡ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು.

ಸರಿಯಾಗಿ ಐವತ್ತು ವರ್ಷಗಳ ಹಿಂದೆ ನಮ್ಮ ನಾಡು 'ಕರ್ನಾಟಕ' ಎಂದು ನಾಮಕರಣಗೊಂಡಿದ್ದು ನಮಗೆಲ್ಲ ಹೆಮ್ಮೆಯ ಹಾಗೂ ಸಂತಸದ ಸಂಗತಿ. 1905ರಲ್ಲಿ ಕನ್ನಡ ಕುಲಪುರೋಹಿತ ಶ್ರೀ ಆಲೂರು ವೆಂಕಟರಾಯರು ಪ್ರಾರಂಭಿಸಿದ ಚಳುವಳಿ ಕನ್ನಡ ಭಾಷೆ ಮಾತಾಡುವವರ ರಾಜ್ಯ ಉದಯಿಸಲು ಕಾರಣವಾದ ಸಂಗತಿ ಸರ್ವವೇದ್ಯ. ನವಂಬರ್ 1, ನಮಗೆಲ್ಲ ಅಸ್ಮಿತೆ ನೀಡಿದ ದಿನ. ಅದಕ್ಕೆ ಕಾರಣರಾದವರನ್ನೆಲ್ಲ ನೆನೆಯುತ್ತ 'ಕನ್ನಡ ಬಳಸಿ, ಕನ್ನಡ ಉಳಿಸುವ' ಕೈಂಕರ್ಯಕ್ಕೆ ಇನ್ನೊಮ್ಮೆ ಬದ್ಧರಾಗೋಣ.

ಇತ್ತೀಚಿಗೆ ಕರ್ನಾಟಕ ಸರಕಾರದ ಮಂತ್ರಿ ಮಂಡಲವು ಇನ್ನು ಮುಂದೆ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು ತಮ್ಮ ಪದವಿಯ ನಂತರ ಗ್ರಾಮೀಣ ಸೇವೆಯನ್ನು ಮಾಡುವುದು ಕಡ್ಡಾಯವಿಲ್ಲ, ಎಂದು ತಿಳಿಸಿದೆ. ಇದು ವೈದ್ಯ ವಿದ್ಯಾರ್ಥಿಗಳಿಗೆ ಒಂದಿಷ್ಟು ನಿರಾಳತೆ ನೀಡಿದ ತೀರ್ಮಾನ. 'ಕೌಶಲ್ಯವನ್ನು ದುರ್ಬಳಕೆ ಮಾಡಿಕೊಳ್ಳಬಾರದು' ಅದಕ್ಕೆ ಈ ತೀರ್ಮಾನಕ್ಕೆ ಬರಲಾಗಿದೆ, ಎಂದು ಕಾನೂನು ಸಚಿವರು ಹೇಳಿದ್ದಾರೆ. ಸರಕಾರದ ಈ ತೀರ್ಮಾನ ಸ್ವಾಗತಾರ್ಹ. ಹಾಗೆ ನೋಡಿದರೆ ಇದರಿಂದ ವೈದ್ಯರಿಗಿಂತ ಸರಕಾರಕ್ಕೇನೆ ಹೆಚ್ಚಿನ ನಿರಾಳತೆ. ಯಾಕೆಂದರೆ, ಸರಕಾರದ ಅಂಕಿ ಅಂಶಗಳ ಪ್ರಕಾರ 2023-24ರ ಶೈಕ್ಷಣಿಕ ವರ್ಷದಲ್ಲಿ 3251 ವಿದ್ಯಾರ್ಥಿಗಳು ಗ್ರಾಮೀಣ ಸೇವೆಗೆ ನೋಂದಾಯಿಸಿಕೊಂಡಿದ್ದರು. ಆದರೆ ಗ್ರಾಮೀಣ ಭಾಗದಲ್ಲಿ ಖಾಲಿ ಇದ್ದ ಹುದ್ದೆಗಳು ಬರೀ 1897 ಮಾತ್ರ. ಉಳಿದವರಿಗೆ ಸೇವೆ ಕಲ್ಪಿಸಬೇಕೆಂದರೆ ಅಷ್ಟು ಹೆಚ್ಚುವರಿ ಹುದ್ದೆಗಳನ್ನು ಸೃಷ್ಟಿಸಬೇಕಿತ್ತು. ಇದರಿಂದ ಸರಕಾರದ ಬೊಕ್ಕಸಕ್ಕೆ ಬರೊಬ್ಬರಿ 188.58 ಕೋಟಿ ರೂಪಾಯಿಗಳ ಹೆಚ್ಚಿನ ಹೊರೆ ಬೀಳುತ್ತದೆ. ಆದ್ದರಿಂದಲೇ 'ಇನ್ನು ಮುಂದೆ ಅರ್ಹತೆಯ ಆಧಾರದ ಮೇಲೆ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ' ಎಂದು ಸರಕಾರ ತೀರ್ಮಾನಿಸಿದೆ. ಈ ಹಿಂದೆ ಇದ್ದಂತಹ ಕಡ್ಡಾಯ ಕಾನೂನಿನಿಂದಾಗಿ ಅನೇಕ ವೈದ್ಯವಿದ್ಯಾರ್ಥಿಗಳು ಅನುಭವಿಸಿದ ಸಂಕಷ್ಟಗಳನ್ನು ಗಮನಿಸಿದರೆ ಇದೊಂದು ತುಂಬ ಸ್ವಾಗತಾರ್ಹ ನಿರ್ಣಯ. ಮುಂಬರುವ ಅಧಿವೇಶನದಲ್ಲಿ ಕಾನೂನು ತಿದ್ದುಪಡಿ ಮಾಡುವುದರೊಂದಿಗೆ ಒಂದು ಕಠಿಣ ಕಾನೂನು ಕೊನೆಗೊಳ್ಳಲಿದೆ.

ಕನ್ನಡ ವೈದ್ಯ ಬರಹಗಾರರ ಅಧ್ಯಕ್ಷನಾಗಿ ಇದು ನನ್ನ ಕೊನೆಯ 'ಅಧ್ಯಕ್ಷೀಯ ಮಾತು'. ಇಡೀ ಒಂದು ವರ್ಷ ಆ ಸ್ಥಾನದಲ್ಲಿದ್ದದ್ದು ನನ್ನ ಬದುಕಿನ ಭಾಗ್ಯಗಳಲ್ಲೊಂದು. ಅದಕ್ಕೆ ಕಾರಣೀಕರ್ತರಾದ ಎಲ್ಲರಿಗೂ ಮನದಾಳದ ಕೃತಜ್ಞತೆಗಳು. ವರ್ಷವಿಡೀ ಸಾಗಿದ ಕನ್ನಡದ ಕೈಂಕರ್ಯ, ಶಿವಮೊಗ್ಗೆಯ ವಾರ್ಷಿಕ ಸಮ್ಮೇಳನದಲ್ಲಿ ಸಂಪನ್ನಗೊಂಡಿದ್ದು ನನ್ನನ್ನು ವಿನೀತನನ್ನಾಗಿಸಿದೆ. ಅಷ್ಟು ಮಟ್ಟಿನ ಅರ್ಹತೆಗೆ ನಾನು ಪಾತ್ರನಾಗಿದ್ದೆ, ಎಂದು ಭಾವಿಸಿದ ಎಲ್ಲರಿಗೂ ನನ್ನ ವಂದನೆಗಳು.

ಬನ್ನಿ, ಮತ್ತೆ ಮತ್ತೆ ಕನ್ನಡವಾಗೋಣ.

ಭಾರತೀಯ ವೈದ್ಯಕೀಯ ಸಂಘ ಚಿರಾಯುವಾಗಲಿ ;

ಸಿರಿಗನ್ನಡಂ ಗೆಲ್ಗೆ !!

**– ಡಾ.ಶಿವಾನಂದ ಕುಬಸದ**
ಅಧ್ಯಕ್ಷರು



**ಡಾ ಶ್ರೀನಿವಾಸ ಎಸ್**
ರಾಜ್ಯಾಧ್ಯಕ್ಷರು (23–24)
ಭಾರತೀಯ ವೈದ್ಯಕೀಯ ಸಂಘ, ಕರ್ನಾಟಕ ರಾಜ್ಯ ಶಾಖೆ.

# ಕರ್ನಾಟಕ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು

ಆತ್ಮೀಯ ಓದುಗರೇ

**ಕರ್ನಾಟಕ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು.**

28000 ಸದಸ್ಯರನ್ನು ಹೊಂದಿದ ದೇಶದ ಎರಡನೇ ದೊಡ್ಡ ಸಂಘಟನೆ ಕರ್ನಾಟಕ ರಾಜ್ಯ ಶಾಖೆ. ಈ ಸಂಘಟನೆಯ ನೇತೃತ್ವವಹಿಸುವ ಅವಕಾಶ ಕಲ್ಪಿಸಿದ ನಿಮಗೆಲ್ಲಾ ನಾನು ಚಿರಋಣಿ. ಭಾರತೀಯ ವೈದ್ಯಕೀಯ ಸಂಘ ತನ್ನ ಸದಸ್ಯರ ಹಿತ ಕಾಯುವುದರ ಜೊತೆ ಸಾಮಾಜಿಕ ಹೊಣೆಗಾರಿಕೆಯನ್ನೂ ಹೊಂದಿದೆ. ಅದನ್ನು ಸಮಸಮವಾಗಿ ನಮ್ಮ ಸಂಸ್ಥೆ ನಿಭಾಯಿಸುತ್ತಾ ಬಂದಿದೆ. ವೈದ್ಯ ವೃತ್ತಿಯ ಸವಾಲುಗಳನ್ನು ಸಮರ್ಥವಾಗಿ ಒಗ್ಗಟ್ಟಿನಿಂದ ಎದುರಿಸಲು ಸಂಸ್ಥೆಯನ್ನು ಬಲಗೊಳಿಸಬೇಕಿದೆ. ಸದಸ್ಯರಲ್ಲದ ವೈದ್ಯರನ್ನು ಸದಸ್ಯರಾಗಿಸಲು ಪ್ರೇರೇಪಿಸಬೇಕಿದೆ. ಸಂಖ್ಯಾ ಬಲ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ವೈದ್ಯರ ಆಯಸ್ಸು ಸಾಮಾನ್ಯರಿಗಿಂತ 10 ವರುಷ ಕಡಿಮೆ ಎನ್ನುವ ಕಳವಳಕಾರಿ ವಿಷಯ ಗಮನಕ್ಕೆ ಬಂದಿದೆ. ಅತ್ಯಂತ ಹೆಚ್ಚಿನ ಒತ್ತಡದ ವೃತ್ತಿಗಳಲ್ಲಿ ವೈದ್ಯ ವೃತ್ತಿ ಒಂದಾಗಿರುವುದೇ ಇದಕ್ಕೆ ಪ್ರಮುಖ ಕಾರಣ. ಇತ್ತೀಚಿನ ಬದಲಾದ ವಾತಾವರಣವೂ ಕಾರಣವಾಗಿದೆ. ವೃತ್ತಿ ಜೀವನದಲ್ಲಿ ಒತ್ತಡವನ್ನು ಕಡಿಮೆ ಮಾಡುವ ಕ್ರಮಗಳನ್ನು ಅಳವಡಿಸಿಕೊಳ್ಳಬೇಕಾಗಿದೆ.

ಬೀದರನಲ್ಲಿ ಆಯೋಜಿಸಲಾಗಿದ್ದ ರಾಜ್ಯ ಸಮ್ಮೇಳನದಲ್ಲಿ ಭಾಗವಹಿಸಿ ಯಶಸ್ವಿ ಗೊಳಿಸಿದ ಎಲ್ಲಾ ಸದಸ್ಯರಿಗೆ ಮತ್ತು ಬೀದರ ಶಾಖೆಯ ಪದಾಧಿಕಾರಿಗಳಿಗೆ ಹಾರ್ದಿಕ ಅಭಿನಂದನೆಗಳು.

ಕನ್ನಡ ವೈದ್ಯ ಬರಹಗಾರರ ಸಮಿತಿ ಕಳೆದ ಕೆಲವು ವರುಷಗಳಿಂದ ಅನೇಕ ಕನ್ನಡ ಪರ ಚಟುವಟಿಕೆಗಳ ಮೂಲಕ ಗಮನ ಸೆಳೆದಿದೆ. ಈ ವರುಷವೂ ಎಲ್ಲಾ ಕನ್ನಡ ಪರ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಲಾಗುವುದು. ವೈದ್ಯ ಸಂಪದದ ಬೆಳವಣಿಗೆಗೆ ಅವಶ್ಯವಿರುವ ಎಲ್ಲಾ ಸಹಕಾರ ನೀಡಲು ಕಾರ್ಯಕಾರಿ ಮಂಡಳಿ ಬದ್ಧವಾಗಿದೆ.

ಕನ್ನಡ ಪರ ಚಟುವಟಿಕೆಗಳ ವಿಸ್ತರಣೆಗೆ ನೀವು ಸಲಹೆ ಸಹಕಾರಗಳನ್ನು ನೀಡಿ ಎಂದು ಕೇಳಿಕೊಳ್ಳುತ್ತಾ


ನಿಮ್ಮ ಸಲಹೆಗಳಿಗಾಗಿ ಕಾಯ್ದಿರುವ

**ಡಾ ಶ್ರೀನಿವಾಸ ಎಸ್**
ರಾಜ್ಯಾಧ್ಯಕ್ಷರು (23–24)
ಭಾರತೀಯ ವೈದ್ಯಕೀಯ ಸಂಘ,
ಕರ್ನಾಟಕ ರಾಜ್ಯ ಶಾಖೆ.



**ಡಾ ಶಾಂತಲಾ,**
ಸ್ತ್ರೀ ಆರೋಗ್ಯ ಮತ್ತು ಪ್ರಸೂತಿ ತಜ್ಞೆ
ಬೆಂಗಳೂರು

## ಚಿತ್ರಕಲೆ




ಆರಂಭ



ಪಾಪಿ ಫೀಲ್ಡ್



ವುಡ್ಸ್




ಹೆಣ್ಣು ಅಂದರೆ



ಪುರುಷ ಸೂಕ್ತ



**ಡಾ ದಯಾನಂದ ಲಿಂಗೇಗೌಡ**
ರೇಡಿಯೋಲಾಜಿಸ್ಟ್,
ಟಾಟಾ ಮೆಡಿಕಲ್ ಸೆಂಟರ್, ಕೊಲ್ಕತ್ತಾ

ಪ್ರಚಲಿತ...

# ಸ್ತ್ರೀ ಎಂದರೇ ಶೇಕಡ 33 ಅಷ್ಟೇ ಸಾಕೇ?



**ಡಾ ಎಚ್ ಎಸ್ ಮೋಹನ್**
ವಿಭಾಗೀಯ ಸಂಪಾದಕರು

ಇಡೀ ಭೂಮಂಡಲದ ಸೃಷ್ಟಿಗಳಲ್ಲಿ ಎಲ್ಲಾ ಜೀವಿಗಳಲ್ಲಿ ಗಂಡು ಹೆಣ್ಣಿನ ಲಿಂಗಾನುಪಾತ ಏಕ ಸಮವಾಗಿಲ್ಲ. ಕೆಲವೊಂದು ಜೀವಿಗಳಲ್ಲಿ ಹೆಣ್ಣಿನ ಸಂಖ್ಯೆ ಹೆಚ್ಚಿದ್ದರೆ, ಕೆಲವೊಂದು ಜೀವಿಗಳಲ್ಲಿ ಗಂಡುಗಳ ಸಂಖ್ಯೆ ಹೆಚ್ಚಿದೆ. ಉದಾಹರಣೆಗೆ ಜೇನು ಹುಳುವಿನ ಗೂಡಿನಲ್ಲಿ ಸರಾಸರಿ ಒಂದು ಗಂಡು ಜೇನು ಹುಳುವಿಗೆ ಸರಾಸರಿ 1000 ಹೆಣ್ಣು ಜೇನು ಇರುತ್ತವೆ.

ಮಾನವನ ಲಿಂಗಾನುಪಾತದಲ್ಲಿ ಜೇನು ಹುಳುಗಳ ಲಿಂಗಾನುಪಾತದಷ್ಟೂ ಕಾಣುವಷ್ಟು ಅಸಮಾತೋಲನ ಕಾಣದಿದ್ದರೂ, ಮಾನವನಲ್ಲಿ ಲಿಂಗಾನುಪಾತ ಸರಿಸಮವಾಗಿಲ್ಲ. ಹುಟ್ಟಿನಲ್ಲಿ ಮಾನವ ಹಸ್ತಕ್ಷೇಪ ಆಗುವುದಕ್ಕೆ ಮೊದಲಿನ ಕಾಲದಲ್ಲಿ, ಗಂಡು ಮಕ್ಕಳ ಸಂಖ್ಯೆ ಹೆಣ್ಣು ಮಕ್ಕಳ ಸಂಖ್ಯೆಗಿಂತ ಹೆಚ್ಚಾಗಿರುವುದು ಕಂಡುಬರುತ್ತದೆ. ಭಗೋಳಿಕವಾಗಿ ಸಣ್ಣ ಪುಟ್ಟ ವ್ಯತ್ಯಾಸ ವಿದ್ದರೂ, ದೊಡ್ಡ ಮಟ್ಟದಲ್ಲಿ ಹೇಳುವುದಾದರೆ, ಇದೇ ರೀತಿಯ ಲಿಂಗಾನುಪಾತ ಇಡೀ ಪ್ರಪಂಚದಾದ್ಯಂತ ಕಾಣಸಿಗುತ್ತದೆ. ಇಂದಿಗೂ ಹೆಣ್ಣು ಮಕ್ಕಳು ಹೆಚ್ಚಾಗಿರುವ ರಾಷ್ಟ್ರಗಳ ಸಂಖ್ಯೆ ಅತ್ಯಂತ ಕಡಿಮೆ ಮತ್ತು ಅಂತಹ ರಾಷ್ಟ್ರಗಳು ಬಹಳ ಕಡಿಮೆ ಜನಸಂಖ್ಯೆಯುಳ್ಳ ರಾಷ್ಟ್ರಗಳು. ಉದಾಹರಣೆಗೆ ನೇಪಾಳ ದಂತ ಸಣ್ಣ ರಾಷ್ಟ್ರದಲ್ಲಿ ಗಂಡು ಮಕ್ಕಳ ಸಂಖ್ಯೆಗಿಂತ ಹೆಣ್ಣು ಮಕ್ಕಳ ಸಂಖ್ಯೆ ಹೆಚ್ಚಿದೆ. ಆದರೆ ಬಹುತೇಕ ರಾಷ್ಟ್ರಗಳಲ್ಲಿ ಇಂದಿಗೂ ಕೂಡ ಗಂಡು ಮಕ್ಕಳ ಸಂಖ್ಯೆ ಹೆಣ್ಣು ಮಕ್ಕಳ ಸಂಖ್ಯೆಗಿಂತ ಹೆಚ್ಚು ಇದೆ. ಅಂದರೆ ಹೆಣ್ಣು ಮತ್ತು ಗಂಡಿನ ಹುಟ್ಟಿನ ಲಿಂಗಾನುಪಾತವನ್ನು ಸಮ ಸಮಕ್ಕೆ ತರುವ ಉದ್ದೇಶ ಯಾರಿಗಾದರೂ ಇದ್ದರೆ ಅದು ಪ್ರಕೃತಿಗೆ ವಿರುದ್ಧ.

ಭಾರತದ ಇತಿಹಾಸದಲ್ಲಿ ಲಿಂಗಾನುಪಾತವನ್ನು ಗಮನಿಸುವುದಾದರೆ ಇಲ್ಲಿ ಗಂಡು ಮಕ್ಕಳ ಸಂಖ್ಯೆ ಹೆಣ್ಣು ಮಕ್ಕಳ ಸಂಖ್ಯೆಗಿಂತ ಹೆಚ್ಚಿದೆ. 1970 ರಲ್ಲಿ, ಇನ್ನೂ ನಿರ್ದಿಷ್ಟವಾಗಿ ನೋಡುವುದಾದರೆ, ಗರ್ಭಪಾತ ಕಾನೂನು ಅಂಗೀಕಾರವಾಗುವ ಮೊದಲು ಕೂಡ 100 ಹೆಣ್ಣು ಮಕ್ಕಳಿಗೆ 105 ಗಂಡು ಮಕ್ಕಳ ಸಂಖ್ಯೆ ಇತ್ತು. 1980ರ ನಂತರ, ಅಂದರೆ ಭಾರತಕ್ಕೆ ಅಲ್ಟ್ರಾ ಸೌಂಡ್ ಸ್ಕ್ಯಾನಿಂಗ್ ಬಂದ ನಂತರ ಈ ಲಿಂಗಾನುಪಾತದಲ್ಲಿ ಸ್ವಲ್ಪ ವ್ಯತ್ಯಾಸ ಕಂಡು ಬಂತು. (ಅತಿ ಹೆಚ್ಚು ಲಿಂಗಾನುಪಾತ 2010 ರಲ್ಲಿ ದಾಖಲಾಗಿದೆ. 100 ಹೆಣ್ಣು ಮಕ್ಕಳಿಗೆ 111 ಗಂಡು ಮಕ್ಕಳು)



ಈ ವ್ಯತ್ಯಾಸಕ್ಕೆ ಪ್ರಸವಪೂರ್ಣ ಪತ್ತೆ ಮಾತ್ರ ಕಾರಣ ಎಂದು ದೂರುವುದು ಸರಿ ಕಾಣುವುದಿಲ್ಲ. ಏಕೆಂದರೆ ಈ ಕಾಲಘಟ್ಟದಲ್ಲಿ ಜನಸಂಖ್ಯಾ ನಿಯಂತ್ರಣ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗಿದೆ. ಒಂದು ತಾಯಿ 10 ಇರುವ ಕಾಲದಲ್ಲಿ ಇದ್ದ ಲಿಂಗಾನುಪಾತವನ್ನು, ಒಂದು ತಾಯಿಗೆ ಒಂದು ಅಥವಾ ಎರಡು ಮಕ್ಕಳನ್ನು ಹೆರುವ ಕಾಲದಲ್ಲಿ ಲಿಂಗಾನುಪಾತಕ್ಕೆ ಹೋಲಿಸುವುದು ಸಮಾಜಸವಲ್ಲ. ಅಂದರೆ ಜನಸಂಖ್ಯಾ ನಿಯಂತ್ರಣ ಕಾರ್ಯಕ್ರಮಗಳಿಂದಲೂ ಕೂಡ ಈ ಲಿಂಗ ಅನುಪಾತ ವ್ಯತ್ಯಾಸವಾಗಿರುವ ಸಾಧ್ಯತೆ ಇದೆ. ಲಿಂಗಾನುಪಾತಕ್ಕೆ ಇನ್ನೂ ಹಲವಾರು ಸಾಮಾಜಿಕ ಕಾರಣಗಳು ಇರಬಹುದು. ಉದಾಹರಣೆಗೆ ಆರೋಗ್ಯ ಕ್ಷೇತ್ರದಲ್ಲಿ ಕ್ರಾಂತಿಗಳು ಹೆಣ್ಣು ಮಕ್ಕಳಿಗಿಂತ ಹೆಚ್ಚು

ಆಗುತ್ತಿದ್ದ, ಗಂಡು ಮಕ್ಕಳ ಅಕಾಲಿಕ ಮೃತ್ಯುಗಳನ್ನು ತಡೆಯುತ್ತಿರಬಹುದು.

ಪ್ರಸವಪೂರ್ವ ಲಿಂಗಪತ್ತೇ ಯನ್ನು ನಿರ್ಬಂಧಿಸುವ ಕಾನೂನನ್ನು 1994ರಲ್ಲಿ ಜಾರಿಗೆ ತರಲಾಯಿತು. ಈ ಕಾನೂನಿನ ಉದ್ದೇಶ ಸರಿಯಾಗಿದ್ದರೂ ಇದರ ಜಾರಿಯಲ್ಲಿ ಹಲವಾರು ದೋಷಗಳು ಸೇರಿಕೊಂಡಿವೆ. ಇಂದಿರಾ ಗಾಂಧಿ ಕಾಲದ ಜನಸಂಖ್ಯಾ ನಿಯಂತ್ರಣ ಕಾರ್ಯಕ್ರಮ ಹೇಗೆ ಸದ್ದುದೇಶ ಹೊಂದಿದ್ದರು ಕೂಡ, ಜಾರಿಗೊಳಿಸುವಲ್ಲಿ ಹಲವಾರು ಎಡವಟ್ಟುಗಳನ್ನು ಮಾಡಿಕೊಂಡಿತೊ,ಹಾಗೆಯೇ ಪಿಎನ್ಡಿಟಿ ಕಾನೂನು ಕೂಡ ಆಧುನಿಕ ನಸ್ಬಂದಿ ಕಾರ್ಯಕ್ರಮದಂತೆ ಜಾರಿಯಾಗಿದೆ.

ಈ ಕಾನೂನಿನ ಹುಚ್ಚ ಹುಚ್ಚಾಟಗಳಿಗೆ ಕೆಲವೊಂದು ಉದಾಹರಣೆಗಳನ್ನು ಕೊಡುತ್ತೇನೆ. ಪಿ ಎನ್ ಡಿ ಟಿ ಆಕ್ಟ್ ಪ್ರಕಾರ ಪ್ರತಿಯೊಂದು ಗರ್ಭಿಣಿ ಸ್ತ್ರೀಯರ ಸ್ಕ್ಯಾನಿಂಗ್ ಮಾಡಲು, ಸ್ಕ್ಯಾನಿಂಗ್ ಗೆ ಕಳಿಸಿದ ವೈದ್ಯರ




ಶಿಫಾರಸು ಪತ್ರ ಬೇಕೇ ಬೇಕು . ಅಂದರೆ ಸ್ಕ್ಯಾನಿಂಗ್ ಮಾಡುವ ರೇಡಿಯೊಲೊಜಿಸ್ಟಳು ಕೂಡ ಎಂಬಿಬಿಎಸ್ ಮಾಡಿದ ವೈದ್ಯರುಗಳು ಎಂಬುದನ್ನು ಈ ಕಾನೂನು ಮರೆತಿದೆ. ಇದರ ಜೊತೆಗೆ ಗರ್ಭಿಣಿಯರ ಆಧಾರ್ ಕಾರ್ಡ್, ಗುರುತಿನ ಪತ್ರ ಜೊತೆಗೆ ನಾವು ಲಿಂಗ ಪತ್ತೆ ಮಾಡಲು ಕೇಳಿಲ್ಲ, ಮಾಡಿಲ್ಲ ಎಂದು ಎಂದು ಸಹಿ ಹಾಕಿದ ಫಾರಂಗಳು, ರಿಜಿಸ್ಟರ್ ಗಳು ಹೀಗೆ ಹಲವಾರು ಪತ್ರಗಳನ್ನು ಪ್ರತಿ ಗರ್ಭಿಣಿಯರಿಗೂ ತಯಾರು ಮಾಡಿ ಕೊಂಡಿರಬೇಕು. ಈ ಎಲ್ಲಾ ಧಾಖಲೆಯ ಪ್ರತಿಗಳನ್ನು ಪ್ರತಿ ತಿಂಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಕಳಿಸಿಕೊಡಬೇಕು. ಇದರಲ್ಲಿ ಯಾವುದೇ ನ್ಯೂನ್ಯತೆ ಕಂಡು ಬಂದರೆ ತಕ್ಷಣವೇ ಆ ಸ್ಕ್ಯಾನಿಂಗ್ ಸೆಂಟರ್ ಗಳನ್ನು ಮುಚ್ಚಿಸುವ ಅಧಿಕಾರ ವನ್ನು ಈ ಅಧಿಕಾರಿಗಳಿಗೆ ಕೊಡಲಾಗಿದೆ. ನಿಜವಾಗಲೂ ಯಾವುದಾದರೂ ಸ್ಕ್ಯಾನಿಂಗ್ ಮಾಡುವ ವೈದ್ಯರಿಗೆ ಲಿಂಗಪತ್ತೆ ದುರುದ್ದೇಶವಿದ್ದರೆ, ಈ ಎಲ್ಲಾ ದಾಖಲೆ ಪತ್ರಗಳನ್ನು ಸರಿಯಾಗಿ ಇಟ್ಟುಕೊಂಡು ಲಿಂಗ ಪತ್ತೆ ಮಾಡಬಹುದು. ಈ ದಾಖಲೆ ಪತ್ರಗಳನ್ನು ಸೃಷ್ಟಿಮಾಡುವುದರಿಂದ , ಹೇಗೆ ಪ್ರಸವಪೂರ್ವ ಲಿಂಗಪತ್ತೆ ಯನ್ನು ತಡೆಯಲಾಗುತ್ತದೆ ಎಂಬುದನ್ನು ನನಗೆ ಇದುವರೆಗೂ ಅರ್ಥವಾಗಿಲ್ಲ. ದಾಖಲೆಗಳು ಸರಿ ಇಲ್ಲ ಎಂಬ ತಾಂತ್ರಿಕ ಕಾರಣಗಳಿಗೋಸ್ಕರ ಅಧಿಕಾರಿಗಳ ಕಿರುಕುಳ ಅತಿಯಾಗಿದೆ. ಬರಿ ದಾಖಲೆ ಪತ್ರಗಳನ್ನು ಸರಿಯಾಗಿ ಇಟ್ಟಿಲ್ಲ ಎಂಬ ತಾಂತ್ರಿಕ ಕಾರಣಗಳನ್ನು ಒಡ್ಡಿ , ಇಡಿ ಸ್ಕ್ಯಾನಿಂಗ್ ಸೆಂಟರ್ ಗಳನ್ನು ಮುಚ್ಚುವ ಬೆದರಿಕೆ ಹಾಕಿ ಕೋಟ್ಯಾಂತರ ರೂಪಾಯಿ ಹಣವನ್ನು ಸುಲಿಗೆ ಮಾಡುವ ವ್ಯವಸ್ಥೆ ನಡೆದಿದೆ. ಈ ಕಾನೂನು ಅಧಿಕಾರಿಗಳಿಗೆ ಹಣ ಮಾಡುವ ಒಂದುಸುಲಭದ ವ್ಯವಸ್ಥೆಯನ್ನು ಮಾಡಿಕೊಟ್ಟಿದೆ. ಎಲ್ಲಾ ದಾಖಲೆಗಳು ಸರಿಯಿದ್ದರೂ ಕೂಡ ನಿಯಮತವಾಗಿ ಮೇಜಿನ ಕೆಳಗಿನ ಆದಾಯವನ್ನು ಅಧಿಕಾರಿಗಳಿಗೆ ಕೊಡದಿದ್ದರೆ ಅಪಾಯ ಕಟ್ಟಿಟ್ಟಬುತ್ತಿ. ಎಲ್ಲಾ ಕಾಗದ ಪತ್ರಗಳ ಗಳನ್ನು ಒಂದೇ ಪತ್ರದಲ್ಲಿ ಅಳವಡಿಸಿ, ಸರಳೀಕರಣ ಅವಕಾಶಗಳಿದ್ದರೂ, ಅದನ್ನು ಮಾಡದೇ ದಿನದಿಂದ ದಿನಕ್ಕೆ ಹೆಚ್ಚು ಕಾಗದ ಪ್ರಮಾಣ ಪತ್ರಗಳನ್ನು ಹೆಚ್ಚಿಸುತ್ತಿರುವುದರ ಉದ್ದೇಶ ಎಲ್ಲರಿಗೂ ಅರ್ಥವಾಗುವಂಥದ್ದು.

ಈ ಕಾನೂನಿನ ಪ್ರಕಾರ ಸ್ಕ್ಯಾನಿಂಗ್ ಮಾಡುವ ವೈದ್ಯರುಗಳು ಎರಡು ಕೇಂದ್ರಗಳಿಗಿಂತ ಹೆಚ್ಚು ಆಸ್ಪತ್ರೆಗಳಲ್ಲಿ ಕೆಲಸ ಮಾಡುವ ಆಗಿಲ್ಲ ಎಂಬ ನಿಯಮ ಇದೆ. ಒಬ್ಬ ವೈದ್ಯರನ್ನು ಎರಡಕ್ಕಿಂತ ಹೆಚ್ಚು ಕೇಂದ್ರಗಳಲ್ಲಿ ಕೆಲಸ ಮಾಡುವುದನ್ನು ತಡೆಯುವುದರಿಂದ ಹೇಗೆ ಲಿಂಗಾನುಪಾತದಲ್ಲಿ ಬದಲಾವಣೆಗಳನ್ನು ತರಬಹುದು ಎಂಬುದನ್ನು ದಯವಿಟ್ಟು ಯಾರಾದರೂ ಅಧಿಕಾರಿಗಳು ವಿವರಿಸಿದರೆ ಒಳ್ಳೆಯದು. ಒಂದು ಕಡೆ ಪರಿಣಿತ ವೈದ್ಯರುಗಳು ಸಿಗುವುದಿಲ್ಲ ಎಂಬ ದೂರು ಒಂದು ಕಡೆಯಾದರೆ, ಲಭ್ಯವಿರುವ ವೈದ್ಯರುಗಳು ಹೆಚ್ಚು ಕೇಂದ್ರದಲ್ಲಿ ಕೆಲಸ ಮಾಡುವುದನ್ನು ತಡೆಯುವ ಕಾನೂನು ಇನ್ನೊಂದು ಕಡೆ. ಗ್ರಾಮೀಣ ಭಾಗದಲ್ಲಿ ಇದು ಕೃತಕ ಅಭಾವ ವನ್ನು ಸೃಷ್ಟಿಸುತ್ತಿದೆ. ಅದು ಅಲ್ಲದೆ ಸಂವಿಧಾನದ ಮೂಲ ಆಶಯಗಳಿಗೆ ವಿರುದ್ಧ .



ಈ ಕಾನೂನಿನ ಪ್ರಕಾರ ವೈದ್ಯಕೀಯ ಸ್ಕ್ಯಾನಿಂಗ್ ಮಷೀನ್ ಗಳನ್ನು ನಿಗದಿತ ಪಡಿಸಿದ ಜಾಗದಲ್ಲಿ ಮಾತ್ರ ಇಟ್ಟು ಸ್ಕ್ಯಾನಿಂಗ್‌ಳನ್ನು ಮಾಡಬೇಕು. ಆ ಸ್ಕ್ಯಾನಿಂಗ್ ಮಷೀನ್ಗಳನ್ನು ಬೇರೆ ಸ್ಥಳಕ್ಕೆ ಬೇರೆ ಕೋಣೆಗಳಿಗೆ ವರ್ಗಾವಣೆ ಮಾಡುವಂತಿಲ್ಲ. ಈ ಮೊದಲು ಕೆಲವೊಂದು ವೈದ್ಯರುಗಳು ಸಾಗಿಸಬಹುದಾದ ಸಣ್ಣ ಮಷೀನ್ ಗಳನ್ನು ತಮ್ಮ ಕಾರಿನ ಹಿಂಬದಿಯಲ್ಲಿ ಇಟ್ಟುಕೊಂಡು , ಹಲವಾರು ಆಸ್ಪತ್ರೆಗಳಿಗೆ ಭೇಟಿ ನೀಡಿ ತಮ್ಮ ಸೇವೆಯನ್ನು ದೇಶದ ಮೂಲೆ ಮೂಲೆಗೂ ಕೂಡ ತಲುಪುವಂತೆ ಮಾಡಿದ್ದರು. ಈ ಕಾನೂನಿನಿಂದ ಅದಕ್ಕೂ ಕಲ್ಲು ಬಿದ್ದಿದೆ. ಅದೂ ಅಲ್ಲದೆ ಇಂದು ಒಂದೇ ಆಸ್ಪತ್ರೆಯ ಒಳಗೆ ವಿವಿಧ ಕೋಣೆಗಳಿಗೆ ಹೋಗಿ, ತಪಾಸಣೆ ಮಾಡುವುದು ಕೂಡ ಕಾನೂನು ಪ್ರಕಾರ ಸರಿಯಲ್ಲ .

ಅದು ಅಲ್ಲದೆ ಸ್ಕ್ಯಾನಿಂಗ್ ಎಂಬುದು ಕೇವಲ ಗರ್ಭಿಣಿ ಸ್ತ್ರೀಯರಿಗೆ ಮಾತ್ರ ಸೀಮಿತವಾಗಿಲ್ಲ . ಈ ಉಪಕರಣದಿಂದ ದೇಹದ ವಿವಿಧ ಭಾಗಗಳ ಸ್ಕ್ಯಾನಿಂಗ್ ಮಾಡಬಹುದು , ಆದ್ದರಿಂದ ಐವಿ ನಳಿಕೆ ಹಾಕುವ ದಾದಿಯರಿಂದ ಇಡಿದು ಆಪರೇಷನ್ ಮಾಡುವ ವೈದ್ಯರುಗಳು ಈ ಮಷಿನ್ ಗಳನ್ನು ಉಪಯೋಗಿಸುತ್ತಾರೆ. ಇಂದು ಮೊಬೈಲ್ ಗಳಲ್ಲೂ ಕೂಡ ಅಲ್ಟ್ರ ಸೌಂಡ್ ಸ್ಕ್ಯಾನಿಂಗ್ ಮಾಡುವ ತಂತ್ರಜ್ಞಾನ ಬಂದಿದೆ. ಇಷ್ಟೊಂದು ಬದಲಾವಣೆಗಳು ವೈದ್ಯಕೀಯ ಕ್ಷೇತ್ರಗಳಲ್ಲಿ ಆಗುತ್ತಿದ್ದರು, ಸ್ಕ್ಯಾನಿಂಗ್ ಗಳನ್ನು ನಿಗದಿಪಡಿಸುವ ಸ್ಥಳದಲ್ಲಿ ಮಾತ್ರ ಮಾಡಬೇಕು ಎಂಬುದು ಹಾಸ್ಯಸ್ಪದ ಅಷ್ಟೇ ಅಲ್ಲ . ಇದು ರೋಗಿಗಳಿಗೆ ಹಲವಾರು ಸೇವೆಗಳಲ್ಲಿ ತೊಂದರೆಗಳನ್ನು ಉಂಟುಮಾಡುತ್ತದೆ. ಈ ಕಾನೂನು ಇಂದಿನ ಅರೋಗ್ಯ ಕ್ಷೇತ್ರಕ್ಕೆ ಪೂರಕವಲ್ಲ ವಾದ್ದರಿಂದ ಇದರ ಪಾಲನೆ ಸಾಧ್ಯವಿಲ್ಲದ ಪರಿಸ್ಥಿತಿ ಒದಗಿದೆ .

ಪಿ ಎನ್ ಡಿ ಟಿ ಆಕ್ಟ್ ಬರುವುದಕ್ಕೆ ಬರುವ ಸಮಯದಲ್ಲಿ ಇದ್ದ ಲಿಂಗಾನುಪಾತ ಮತ್ತು ಈಗಿನ ಲಿಂಗಾನುಪಾತವನ್ನು ಗಮನಿಸಿದರೆ ಹೆಚ್ಚು ವ್ಯತ್ಯಾಸವೇನು ಕಾಣುತ್ತಿಲ್ಲ. ಅಂದರೆ ಈ ಪಿಎನ್ ಡಿಟಿ ಕಾನೂನು ಸಾಧಿಸಿದ್ದು ಅಷ್ಟೇ ಇದೆ . ಇಷ್ಟಾಗಿದ್ದರೂ ಕೂಡ ಕಾಲದಿಂದ ಕಾಲಕ್ಕೆ ಪಿಎನ್ ಡಿಟಿ ಕಾನೂನನ್ನು ಉಗ್ರವಾಗಿ ಜಾರಿಗೆ ತರುವ ಕ್ರಮ ನಿಯಮತವಾಗಿ ನಡೆಯುತ್ತಿದೆ. ಇದಕ್ಕೆ ಅವೈಜ್ಞಾನಿಕವಾಗಿ ಯಾವುದೋ ಒಂದು ಜಿಲ್ಲೆಯಲ್ಲಿ ಲಿಂಗಾನುಪಾತ ಕಡಿಮೆಯಾಗುತ್ತಿರುವುದನ್ನು ಬೆರಳು ತೋರಿಸಲಾಗುತ್ತದೆ. ಹೇಗೆ ರಾಷ್ಟ್ರೀಯ ಲಿಂಗಾನುಪಾತ ಒಂದು ಕುಟುಂಬಕ್ಕೆ ಅನ್ವಯ ಮಾಡಲಾಗುವುದಿಲ್ಲವೋ, ಹಾಗೆ ಆ ರಾಷ್ಟ್ರೀಯ ಲಿಂಗಾನುಪಾತವನ್ನು ಒಂದು ಸೀಮಿತ ಭೌಗೋಳಿಕ ಪ್ರದೇಶದಲ್ಲಿ ಸಾಧಿಸಿ ತೋರಿಸುತ್ತೇವೆ ಎಂದುಕೊಳ್ಳುವುದು ಅತ್ಯಂತ ಅವೈಜ್ಞಾನಿಕ ಅಷ್ಟೇ ಅಲ್ಲ , ಇದರ ಭ್ರಷ್ಟಾಚಾರದ ದುರುದ್ದೇಶ.

ಈ ರೀತಿ ಅವೈಜ್ಞಾನಿಕವಾದ ಈ ಕಾಲಕ್ಕೆ ಸಲ್ಲದ ಕಾನೂನನ್ನು ತರುವುದನ್ನು ಬಿಟ್ಟು , ಪ್ರಸವಪೂರ್ಣ ಲಿಂಗಪತ್ತೆ ಯನ್ನು ಕಡ್ಡಾಯಗೊಳಿಸಲಿ. ಹಾಗೆ ಲಿಂಗಪತ್ತೆ ಮಾಡಿದ ಹೆಣ್ಣು ಮಕ್ಕಳ ಭ್ರೂಣವನ್ನು ಹೆರಿಗೆಯಾಗುವವರೆಗೂ ಹಿಂಬಾಲಿಸಿ ನೋಡಿಕೊಂಡರೆ, ಎಲ್ಲಿ ಹೆಣ್ಣು ಮಕ್ಕಳ ಭೂಣ ಹತ್ಯೆಯನ್ನು ಯಾಗುತ್ತಿದೆ ಎಂದು ಗಮನಕ್ಕೆ ಬರುತ್ತದೆ .

ಕೊನೆ ಮಾತು,: ಇತ್ತೀಚೆಗೆ ಸಂಸತ್ತಿನಲ್ಲಿ ಮಹಿಳೆಯರಿಗೆ ಶೇಕಡ 33 ಮೀಸಲಾತಿಯನ್ನು ಕೊಡುವ ಕಾನೂನನ್ನು ಅಂಗೀಕರಿಸಲಾಗಿದೆ. ಶೇಕಡ 50 ಇರುವ ಮಹಿಳೆಯರಿಗೆ ಶೇಕಡ 33 ಮೀಸಲಾತಿ ಮಾತ್ರ ಏಕೆ ಎಂಬುದು ನಿಜವಾಗಲೂ ಅರ್ಥವಾಗದ ವಿಷಯ.



**ಡಾ ಅಶ್ವಿನಿ ಹೆಚ್ ರಾಮಾಸ್ವಾಮಿ**
ಅರಿವಳಿಕೆ ತಜ್ಞರು, ಕಿಮ್ಸ್, ಹುಬ್ಬಳ್ಳಿ

ಪ್ರಚಲಿತ

# ಜಗಮರೆಸುವ ಮಾಯಾನಿಲಗಳು



**ಡಾ ಎಚ್ ಎಸ್ ಮೋಹನ್**
ವಿಭಾಗೀಯ ಸಂಪಾದಕರು

ಅರಿವಳಿಕೆ ವಿಜ್ಞಾನ ವೈದ್ಯಕೀಯ ಜಗತ್ತಿನ ಬೆಳೆಯುತ್ತಿರುವ ಯುವ ವಿಭಾಗ. ತಂತ್ರಜ್ಞಾನ ಮತ್ತು ಆಮ್ಲಜನಕದ ಜೊತೆ ವಿವಿಧ ರಾಸಾಯನಿಕ ಅನಿಲಗಳು ಹಾಗು ದ್ರವಾನಿಲಗಳೂಸಹ ಇದೇ ಕ್ಷೇತ್ರದಲ್ಲಿ ಹೆಚ್ಚಾಗಿ ಕಂಡು ಬರುತ್ತದೆ.

ನೈಟ್ರಸ್ ಆಕ್ಸೈಡ್ 1773 ರಲ್ಲಿ ಜೋಸೆಫ್ ಪ್ರೀಸ್ಟ್ಲಿ ಆವಿಷ್ಕರಿಸಿದ ಅನಿಲವಾದರೂ ಅದನ್ನು ಮೋಜಿಗೆ ಉಪಯೋಗಿಸುತ್ತಿದ್ದುದೇ ಹೆಚ್ಚು. ಹಂಫ್ರಿ ಡೇವಿ ಇದನ್ನು ನಗೆ ಅನಿಲ ಎಂದೂ ಕರೆದದ್ದುಂಟು. ಇದರ ನೋವು ನಿವಾರಕ ಶಕ್ತಿ ಹಲ್ಲು ಕೀಳುವುದಕ್ಕಷ್ಟೇ ಸೀಮಿತವಾಗಿತ್ತು. ಈಥರ್ ಎಂಬ ದ್ರವಾನಿಲ 16 ನೇ ಶತಮಾನದಿಂದಲೂ ಅಸ್ತಿತ್ವದಲ್ಲಿದ್ದರೂ ಅದರಲ್ಲಿನ ನೋವು ನಿವಾರಕ ಶಕ್ತಿಯನ್ನು ಜಗತ್ತಿಗೆ ತಿಳಿಯಪಡಿಸಲು ಅರಿವಳಿಕೆಯ ಪಿತಾಮಹ ಡಬ್ಲ್ಯೂ .ಟಿ .ಜಿ ಮಾರ್ಟನ್ನೇ ಬರಬೇಕಾಯಿತು. 1847ರಲ್ಲಿ ಬಾಸ್ಟನ್ ಮಸ್ಸಾಚುಸೆಟ್ಸ್ ಆಸ್ಪತ್ರೆಯ ಸಭಾಂಗಣದಲ್ಲಿ ಈಥರ್ ದ್ರವಾನಿಲವನ್ನು ರೋಗಿಯು ಸೇವಿಸುವಂತೆ ಮಾಡಿ ನೂರಾರು ವೈದ್ಯರ ಮುಂದೆ ರೋಗಿಯ ಕುತ್ತಿಗೆಯಲ್ಲಿದ್ದ ಗೆಡ್ಡೆಯನ್ನು ಶಸ್ತ್ರಚಿಕಿತ್ಸೆಯ ಮೂಲಕ ತೆಗೆದಾಗ ಅನಾವರಣ ಗೊಂಡದ್ದು ಅರಿವಳಿಕೆ ಶಾಸ್ತ್ರ ಮತ್ತು ನೋವಿಲ್ಲದ ಜಗತ್ತು. ಇದರ ಜೊತೆ ಜೊತೆಗೆ ಜೇಮ್ಸ್ ಯಾಂಗ್ ಸಿಮ್ಸನ್ ಕ್ಲೋರೋಫಾರ್ಮನ್ನು ಬಳಸಲು ಶುರು ಮಾಡಿದ. ಜಾನ್ ಸ್ನೋ ಇದೇ ದ್ರವಾನಿಲವನ್ನು ವಿಕ್ಟೋರಿಯಾ ರಾಣಿಯ ಹೆರಿಗೆಯ ಸಮಯದಲ್ಲಿ ಆಕೆ ಸೇವಿಸುವಂತೆ ಮಾಡಿ ಆಕೆಗೆ ಪ್ರಸವ ವೇದನೆಯ ಅರಿವೇ ಆಗದಂತೆ ಮಾಡಿದ್ದು ಇತಿಹಾಸದ ಪುಟಗಳಲ್ಲಿ ಹೆರಿಗೆಯ ನೋವಿನ ಬಗ್ಗೆ ಇದ್ದ ಮೂಢನಂಬಿಕೆಯನ್ನು ಹೋಗಲಾಡಿಸುವುದಲ್ಲದೆ ಸ್ತ್ರೀಯರಿಗೆ ವರದಾನದಂತೆ ಗೋಚರಿಸಿತು. ತದನಂತರ ಈ ದ್ರವಾನಿಲಗಳನ್ನು ಬಳಸಲು ವಿವಿಧ ಉಪಕರಣಗಳಾದ ಗಾಜಿನ ಬಾಟಲಿಗಳು, ಮೂಗು ಬಾಯಿಗಷ್ಟೇ ಸೀಮಿತವಾಗುವಂಥ ಮಾಸ್ಕುಗಳು, ರಬ್ಬರ್ ಸರ್ಕ್ಯೂಟುಗಳ ಅವಿಷ್ಕಾರಗಳಾದವು. ಕೇವಲ ಈಥರ್ ಕೊಟ್ಟರೆ ಸಾಲದು ಜೊತೆಗೆ ಆಮ್ಲಜನಕವನ್ನೂ ಕೊಟ್ಟರೆ ರೋಗಿಯು ಸುರಕ್ಷಿತ ಎಂದು ತಿಳಿದು ಅದನ್ನು ಪೂರೈಸಲು ವಿವಿಧ ಗಾತ್ರದ ಸಿಲಿಂಡರುಗಳು ಬಳಕೆಗೆ ಬಂದವು. ಜೊತೆಗೆ ಫ್ಲೋಮೀಟರುಗಳು, ಅರಿವಳಿಕೆ ಯಂತ್ರಗಳು ಹೀಗೆ ಪರಿಷ್ಕರಣೆಯ ರಥ ಸಾಗುತ್ತಲೇ ಹೋಯಿತು. ಇವೆರಡರ ಜೊತೆ ನೈಟ್ರಸ್ ಆಕ್ಸೈಡ್ ಕೊಟ್ಟಾಗ ಈಥರ್ ಪ್ರಮಾಣವನ್ನು ಕಮ್ಮಿ ಮಾಡಿ ರೋಗಿಗೆ ಇನ್ನೂ ಹೆಚ್ಚಿನ ಅರಿವಳಿಕೆ ನೀಡಬಹುದು ಎಂದು ತಿಳಿದು ಈ ಮೂರನ್ನು ನಿರ್ದಿಷ್ಟ ಪ್ರಮಾಣದಲ್ಲಿ ಕೊಡುವುದು ರೂಢಿಗೆ ಬಂತು.



18 ನೇ ಶತಮಾನದಲ್ಲಿ ಬಳಕೆಯಲ್ಲಿದ್ದ ಈಥೈಲ್ ಕ್ಲೋರೈಡ್ ಮತ್ತು ಎಥಿಲಿನ್ ದ್ರವ್ಯಗಳು 1894 ರಲ್ಲಿ ವೈದ್ಯಕೀಯ ಬಳಕೆಗೆ ಪುನರಾವಿಷ್ಕಾರಗೊಂಡವು. ಇವುಗಳ ಸ್ಫೋಟಕ ಶಕ್ತಿ ಮತ್ತು ಅಸಹನೀಯ ವಾಸನೆ ಇವುಗಳನ್ನು ಮಾರುಕಟ್ಟೆಯಲ್ಲಿ ಹೆಚ್ಚುಕಾಲ ಉಳಿಸಲಿಲ್ಲ. ಇವುಗಳ ನಿರ್ಗಮನದ ಬೆನ್ನಲ್ಲೇ 1929ರಲ್ಲಿ ಬಂದಿದ್ದು ಸೈಕ್ಲೋಪ್ರೋಪೇನ್. ಕೆಲಕಾಲ ರಾರಾಜಿಸಿದರೂ ಇದರ ಸ್ಫೋಟಕತೆ, ಕೆಮ್ಮನ್ನುಂಟು ಮಾಡುವ ಗುಣ, ಹೆಚ್ಚಿನ ಲಾಲಾರಸದ ಉತ್ಪತ್ತಿ ಇದರ ಜನಪ್ರಿಯತೆಗೆ ಅಡ್ಡ ಬಂತು.

ಈಥರ್‌ಗೂ ಸಹ ಈ ಎಲ್ಲ ಗುಣವಿದ್ದುದರಿಂದ ತಜ್ಞರು ತಮ್ಮ ಆವಿಷ್ಕಾರದ ಕಾರ್ಯವನ್ನು ಮುಂದುವರೆಸಿದ್ದರು. ಎರಡನೇ ಮಹಾಯುದ್ಧದ ಸಮಯದಲ್ಲಿ ಸ್ಫೋಟಕವಲ್ಲದ ದ್ರವದ ಹುಡುಕಾಟದಲ್ಲಿ ಟ್ರೈಲಿನ್ ಜಗತ್ತಿಗೆ ಪರಿಚಿತವಾಯ್ತು. ಆದರೆ ಈ ಅನಿಲ ಸೋಡಾ ಲೈಮ್ (ಒಂದು ರೀತಿಯ ಸುಣ್ಣದ ಹರಳುಗಳು, ರೋಗಿಯ ನಿಶ್ವಾಸದಲ್ಲಿ ಹೊರ ಬರುವ ಕಾರ್ಬನ್ ಡೈ ಆಕ್ಸೈಡ್ ಅನಿಲವನ್ನು ಹೀರಿಕೊಳ್ಳುತ್ತದೆ) ಹರಳುಗಳ ಜೊತೆ ಸೇರಿ ಕೆಲವು ವಿಷಾನಿಲಗಳನ್ನು ಹೊರ ಸೂಸುವುದಲ್ಲದೆ ಅನಿಲಗಳ ಒಟ್ಟು ತಾಪಮಾನವನ್ನು ಏರಿಸುತ್ತಿತ್ತು. ಹೀಗಾಗಿ ಇದನ್ನು ಕೈಬಿಡಬೇಕಾಯಿತು. ಇದಾದ ಹತ್ತು ವರ್ಷಗಳ ನಂತರ ದ್ರವಾನಿಲಗಳ ಕ್ಷೇತ್ರದಲ್ಲಿ ಕ್ರಾಂತಿಯ ಸ್ವರೂಪದಂತೆ ಫ್ಲೋರಿನ್ ಹೊಂದಿದ ಹೈಡ್ರೋಕಾರ್ಬನ್ಗಳು ಅರಿವಳಿಕೆ ಕ್ಷೇತ್ರಕ್ಕೆ ಕಾಲಿಟ್ಟವು. 1956ರಲ್ಲಿ ಹ್ಯಾಲೊಥೇನ್, 1960ರಲ್ಲಿ ಮೀಥಾಕ್ಸಿಫ್ಲ್ಯೂರೆನ್, 1963ರಲ್ಲಿ ಎನ್‌ಫ್ಲೋರೆನ್ ಹಾಗು 1965ರಲ್ಲಿ ಐಸೊಫ್ಲೋರೆನ್ ಚಾಲ್ತಿಗೆ ಬಂದವು. ಇದಾದ 27ವರ್ಷಗಳ ನಂತರ 92ರಲ್ಲಿ ಡೆಸ್‌ಫ್ಲೋರೆನ್ ಹಾಗೂ 94ರಲ್ಲಿ ಸೆವೊಫ್ಲೋರೆನ್ ಕಾಲಿಟ್ಟಿತು. ಕ್ಸೆನಾನ್ ಜಡಾನಿಲ 1950ರಲ್ಲೇ ಬೆಳಕಿಗೆ ಬಂದರೂ ಇದರ ದುಬಾರಿ ಬೆಲೆ ಇದನ್ನು ಜನಪ್ರಿಯತೆಯಿಂದ ದೂರವಿಟ್ಟಿತು. ಪ್ರತಿ ದ್ರವಾನಿಲಗಳಿಗೂ ಅದರದೇ ಆದ ವೈಶಿಷ್ಟ್ಯತೆ ಹಾಗೂ ನ್ಯೂನ್ಯತೆಗಳಿವೆ. ಹ್ಯಾಲೊಥೇನ್ ಪಿತ್ತಜನಕಾಂಗಕ್ಕೆ ತೊಂದರೆ ಉಂಟು ಮಾಡಿದರೆ, ಸೆವೊಫ್ಲೋರೆನ್ ಸೋಡಾ ಲೈಮ್ ಜೊತೆ ಸೇರಿ ಮೂತ್ರಜನಕಾಂಗಕ್ಕೆ ಹಾನಿ ಉಂಟು ಮಾಡಬಹುದು. ಡೆಸ್‌ಫ್ಲೋರೆನ್ ದ್ರವದ ಕುದಿಯುವ ಬಿಂದು ಕೊಠಡಿಯ ತಾಪಮಾನಕ್ಕಿಂತಲೂ ಕಡಿಮೆಯಿರುವುದರಿಂದ ಇದನ್ನು ಉಪಯೋಗಿಸಲು ಬೇರೆ ಯಂತ್ರಗಳು ಹಾಗೂ ಹೆಚ್ಚಿನ ಜಾಗರೂಕತೆಯನ್ನು ವಹಿಸಬೇಕಾಗುತ್ತದೆ. ಅಧಿಕ ಪ್ರಮಾಣದ ಎನ್‌ಫ್ಲೋರೆನ್ ಅಪಸ್ಮಾರವನ್ನು ಉಂಟು ಮಾಡುತ್ತದೆ. ಐಸೊಫ್ಲೋರೆನ್ ನ ಶುದ್ಧೀಕರಿಸಿ ತಯಾರು ಮಾಡುವುದೇ ಸಾಹಸ. ಹೀಗಾಗಿ ಅರಿವಳಿಕೆ ಕ್ಷೇತ್ರ ಒಂದು ಆದರ್ಶ ಅನಿಲದ ಹುಡುಕಾಟದಲ್ಲಿ ಇನ್ನೂ ಇದೆ.



ಈ ಅನಿಲಗಳ ಬಳಕೆಯಿಂದ ಕೆಲವೊಂದು ಸಾಮಾನ್ಯ ತೊಂದರೆಗಳೂ ಕಂಡು ಬರಬಹುದು. ಉದಾಹರಣೆಗೆ ಇದರ ಪರಿಣಾಮದಿಂದ ರೋಗಿಯು ಅರಿವಳಿಕೆಯಿಂದ ಎಚ್ಚರವಾಗುವುದು ತಡವಾಗಬಹುದು, ವಾಂತಿ, ನಡುಕಗಳು ಉಂಟಾಗಬಹುದು. ಹೆಚ್ಚಿನ ಪ್ರಮಾಣದಲ್ಲಿ ಹೃದಯದ ಬಡಿತ ಕಮ್ಮಿಯಾಗಬಹುದು, ರಕ್ತದೊತ್ತಡ ಕಮ್ಮಿಯಾಗಬಹುದು. ಈ ಎಲ್ಲ ಸಾಧ್ಯತೆಗಳಿಗೆ ಪರಿಹಾರವೆಂದರೆ ಇದರ ಸಮರ್ಪಕ ಬಳಕೆ. ಏಕೆಂದರೆ ಇದರ ಬಳಕೆಯಲ್ಲಿ ರೋಗಿಯನ್ನು ನೋವಿಲ್ಲದ ಮತ್ತು ಜಗತ್ತಿನ ಅರಿವೇ ಇಲ್ಲದ ಲೋಕಕ್ಕೆ ಕರೆದೊಯ್ದು ಶಸ್ತ್ರ ಚಿಕಿತ್ಸೆಯ ನಕಾರಾತ್ಮಕ ಅನುಭವವನ್ನು ತೊಡೆದು ಹಾಕುತ್ತದೆ ಹಾಗಾಗಿ ಇದರ ಪರ್ಯಾಯವಿಲ್ಲ.

ಆಪರೇಷನ್ ರೂಮಿನಲ್ಲಿ ಇದರ ತ್ಯಾಜ್ಯ ನಿರ್ವಹಣೆ ಅತ್ಯಂತ ಮಹತ್ವದ್ದು. ಇತ್ತೀಚಿನ ಯಂತ್ರಗಳಲ್ಲಿ ಇದನ್ನು ಸುರಕ್ಷಿತವಾಗಿ ಪರಿಸರಕ್ಕೆ ತಲುಪಿಸಲು ವೆಂಟಿಲೇಟರ್ ಗೆ ಅಳವಡಿಸಿದ ಒಂದು ನಾಳದ ಮುಖಾಂತರ ಈ ಅನಿಲಗಳು ಆಸ್ಪತ್ರೆಯ ಮೇಲ್ಛಾವಣಿಯಿಂದ ಒಂದಷ್ಟು ಅಂತರದಲ್ಲಿ ಪರಿಸರದ ಗಾಳಿಯೊಂದಿಗೆ ವಿಲೀನವಾಗುತ್ತವೆ. ಇದರಿಂದ ಆಸ್ಪತ್ರೆಯ ಸಿಬ್ಬಂದಿಗೆ ಹಾನಿ ತಪ್ಪಿಸಿದರೂ ಪರಿಸರಕ್ಕೆ ಹಾನಿ ತಪ್ಪಿದ್ದಲ್ಲ. ಇದರ ಪರ್ಯಾಯವಾಗಿ ಅರಿವಳಿಕೆಯಲ್ಲಿ ವಿವಿಧ ತಂತ್ರಗಳು ರೂಪುಗೊಳ್ಳುತ್ತಿದ್ದು ಇದರ ಬಳಕೆ ಕನಿಷ್ಟಕ್ಕೆ ಬರುವ ಸಾಧ್ಯತೆಗಳಿವೆ.

ಇವುಗಳ ಬಳಕೆ ಪರಿಸರದಲ್ಲಿ ಕಾರ್ಬನ್ ಡೈ ಆಕ್ಸೈಡ್, ಮೀಥೇನ್, ನೈಟ್ರಸ್ ಆಕ್ಸೈಡ್ ಹಾಗೂ ಫ್ಲೋರೋಕಾರ್ಬನ್ಗಳನ್ನೂ ಸೇರಿಸುತ್ತದೆ. ಇವೆಲ್ಲವೂ ಗ್ರೀನ್ ಹೌಸ್ ಅನಿಲಗಳು. ಇವು ಪರಿಸರದ ಉಷ್ಣತೆಯನ್ನು ಹಿಡಿದಿಟ್ಟುಕೊಂಡು ಜಾಗತಿಕ ತಾಪಮಾನವನ್ನು ಏರಿಸುತ್ತವೆ. ಜಾಗತಿಕ ಮಟ್ಟದಲ್ಲಿ ಇಂಗಾಲದ ಹೆಜ್ಜೆ ಗುರುತಿನಲ್ಲಿ ಆರೋಗ್ಯದ ಇಲಾಖೆಯ ಕೊಡುಗೆ ಸರಿಸುಮಾರು 5.5%. ಅರಿವಳಿಕೆಯ ಅನಿಲಗಳೂ ಸಹ ಇದರಲ್ಲಿ ಸದಸ್ಯರೇ. ಮೋಟಾರ್ ಕಾರ್ ಉಗುಳುವ ಇಂಗಾಲದ ಡೈ ಆಕ್ಸೈಡ್ ಗೆ ಹೋಲಿಸಿದಾಗ ಸಿಗುವ ಅಂಕಿಅಂಶ ಬೆರಗಾಗಿಸುತ್ತದೆ. ಒಂದು ಘಂಟೆಯ ಸೆವೊಫ್ಲೋರೆನ್ ಉಪಯೋಗ ಕಾರ್ 6 .5 ಕಿ ಮೀ ಓಡಿದರೆ ಉಂಟಾಗುವ ಇಂಗಾಲದ ಡೈ ಆಕ್ಸೈಡ್ ಗೆ ಸಮ. ಅದೇ ರೀತಿ ಐಸೊಫ್ಲೋರೆನ್ – 14 ಕಿಮಿ, ನೈಟ್ರಸ್ ಆಕ್ಸೈಡ್ – 95ಕಿಮಿ.ಮತ್ತು ಡೆಸ್‌ಫ್ಲೋರೆನ್ 320 ಕಿಮಿ ಓಡಿದ ಕಾರ್ ಹೊರ ಸೂಸಿದ ಇಂಗಾಲದ ಡೈ ಆಕ್ಸೈಡ್ ಗೆ ಸಮ.

ಹಲವಾರು ನ್ಯೂನತೆಗಳಿದ್ದರೂ ಈ ಅನಿಲಗಳನ್ನು ಅರಿವಳಿಕೆ ರಂಗದಿಂದ ಬೇರ್ಪಡಿಸಲು ಇನ್ನೂ ಸಾಕಷ್ಟು ವರ್ಷಗಳೇ ಬೇಕಾಗಬಹುದು. ಅಲ್ಲಿಯವರೆಗೂ ಈ ಅನಿಲಗಳೇ ವ್ಯಕ್ತಿಗೆ ಮರೆಸುವ, ನೋವಿಲ್ಲದ ಅನುಭವ ಕೊಡುವ, ಶಸ್ತ್ರ ಚಿಕಿತ್ಸೆಯ ಅನುಭವವನ್ನು ಸಿಹಿಯಾಗಿಸುವ ಅರಿವಳಿಕೆ ಸಾಮ್ರಾಜ್ಯದ ಅನಭಿಷಕ್ತ ದೊರೆಗಳು.



**ಡಾ. ರಮೇಶ ಬಾಬು ಕೆ**
ನಿವೃತ್ತ ಪ್ರಾಧ್ಯಾಪಕರು, ಹುಬ್ಬಳ್ಳಿ

ಕಥಾ ವಿಭಾಗ

# ಸಿಹಿ ಮುತ್ತುಗಳೊಡನೆ...



**ಡಾ. ದಿವ್ಯಾ ಕೆ. ಎನ್**
**ವಿಭಾಗೀಯ ಸಂಪಾದಕರು**

'ಇನ್ನು ಹೋಗಿ, ನಿಮ್ಮ ಕೆಲಸ ನೋಡಿಕೊಳ್ಳಿ' ನಮಗೆ ಸಾಕಷ್ಟು ಬಿಸಿ ತಾಕಿಸಿದ ನಂತರ ಬಾಸ್ ನಮ್ಮ ಕೈಬಿಟ್ಟಾಗ, ಆ ಕ್ಷಣಕ್ಕಾಗಿಯೇ ಕಾಯುತ್ತಿದ್ದ ನಾನು ಮತ್ತು ನನ್ನಿಬ್ಬರು ಸಹೋದ್ಯೋಗಿಗಳು ಆತುರಾತುರವಾಗಿ ಬಾಸ್ ಚೇಂಬರ್ ನಿಂದ ಹೊರಬಂದು ನಮ್ಮ ನಮ್ಮ ಮೇಜಿನ ಕಡೆ ನಡೆದೆವು. ನನ್ನ ಮೇಜಿನ ಬಳಿ ಬಂದು ನನ್ನ ಕುರ್ಚಿಯ ಮೇಲೆ  ಕುಳಿತುಕೊಳ್ಳುವುದಕ್ಕೂ, ನನ್ನ ಮೊಬೈಲ್ ಕಂಪಿಸಲಾರಂಭಿಸುವುದಕ್ಕೂ ಸರಿ ಹೋಯಿತು. ಜೇಬಿನಿಂದ ಮೊಬೈಲ್ ತೆಗೆದು ನೋಡಿದಾಗ ಶಶಿ ಕರೆ ಮಾಡಿದ್ದಾಳೆಂದು ತಿಳಿಯಿತು.

'ಹಲೋ.....' ಎಂದು ನಾನು ಹೇಳುತ್ತಲೇ,

'ಅದ್ಯಾಕೆ ನೀವು ಫೋನ್ ತೆಗೆದುಕೊಳ್ತಾ ಇಲ್ಲ. ಈಗಾಗಲೇ ಮೂರು ಸಾರಿ ಮಾಡಿದ್ದೆ. ಎಲ್ಲಿದ್ದಿರಿ?' ಎಂದು ಅವಳು ಕೇಳುವಾಗ ಅವಳ ದನಿಯಿಂದಲೇ ಏನೋ ಎಡವಟ್ಟಾಗಿದೆ ಎಂದು ತಿಳಿಯಿತು. ಬಾಸ್ ನಮ್ಮ ಜೊತೆ ಮಾತನಾಡುತ್ತಿದ್ದಾಗ ಒಂದು ಕರೆ ಬಂದಿತ್ತು. ಫೋನ್ ಕರೆ ಕೇಳುತ್ತಲೇ, ಮೊದಲೇ ಗರಂ ಆಗಿದ್ದ ಬಾಸ್,


'ನನ್ನ ಚೇಂಬರ್ ಗೆ ಬಂದಾಗ ಮೊಬೈಲ್ ಆಫ್ ಮಾಡ್ಬೇಕು ಅಂತ ಗೊತ್ತಿಲ್ವೇನ್ರಿ?' ಎಂದು ರೇಗಿದ್ದರು. ತಕ್ಷಣವೇ ಮೊಬೈಲ್  ಕತ್ತು ಹಿಸುಕಿ ಸೈಲೆಂಟ್ ಮೋಡ್ ನಲ್ಲಿಟ್ಟಿದ್ದೆ. ಹಾಗಾಗಿ ಮುಂದೆ ಬಂದ ಎರಡು ಕರೆಗಳೂ ನನ್ನ ಗಮನಕ್ಕೆ ಬಂದಿರಲಿಲ್ಲ. ಇದೆಲ್ಲವನ್ನೂ ಅವಳಿಗೆ ಹೇಗೆ ತಿಳಿಸುವುದು?

'ಶಶಿ, ಏಕೆ, ಅಂತಹ ಸಮಾಚಾರವೇನಿತ್ತು?' ಎಂದೆ.

'ಸಮಾಚಾರ ನೀವು ಮನೆಗೆ ಬಂದಮೇಲೆ ಹೇಳ್ತೇನೆ. ಎಷ್ಟು ಹೊತ್ತಿಗೆ ಬರ್ತೀರಿ?' ಎಂದು ಕೇಳಿದಳು.

'ಮಾಮೂಲಿ ಸಮಯಕ್ಕೇ ಬರ್ತೀನಿ. ಐದು ಗಂಟೆಗೆ ಆಫೀಸ್ ಮುಗಿಯುತ್ತೆ. ಮನೆಗೆ ಬರುವ ಹೊತ್ತಿಗೆ ಐದೂವರೆ ಆಗಬಹುದು. ಏಕೆ ಹೀಗೆ ಕೇಳ್ತಿಯಾ?' ಎಂದೆ. ಏನೂ ಉತ್ತರ ಕೊಡದೆ ಫೋನ್ ಕೆಳಗಿಟ್ಟಿದ್ದಳು. ಆಗಲೇ ನಾಲ್ಕೂವರೆ ಗಂಟೆಯಾಗಿತ್ತು. ಇನ್ನೂ ಅರ್ಧ ಗಂಟೆ ಕಳೆಯುವುದೇ ಪ್ರಯಾಸಕರವಾಗಿತ್ತು. ಐದು ಗಂಟೆಯಾಗುತ್ತಲೇ ಫೈಲ್ ಗಳನ್ನೆಲ್ಲಾ ಮುಚ್ಚಿಟ್ಟು ಕುರ್ಚಿಯಿಂದೆದ್ದೆ. ಅದೇ ಹೊತ್ತಿಗೆ ಬಾಸ್ ತಮ್ಮ ಕೋಣೆಯಿಂದ ಹೊರಬಂದು ನನ್ನನ್ನು ನೋಡಬೇಕೇ?

'ಆಫೀಸ್ ಬಿಟ್ಟ ಕೂಡಲೇ ಎಷ್ಟು ಪ್ರಾಂಪ್ಟ್ ಆಗಿ ಮನೆಗೆ ಹೋಗ್ತೀರಿ ನೋಡಿ. ಆಫೀಸ್ ಗೆ ಬರುವಾಗಲೂ ಇಷ್ಟೇ ಪ್ರಾಂಪ್ಟ್ ಆಗಿ ಬಂದರೆ...?' ಎಂದರು ನನ್ನತ್ತ ಕೆಕ್ಕರಿಸಿ



ನೋಡುತ್ತಾ. ಈ ಬಡಪಾಯಿ ಬ್ರಹ್ಮಚಾರಿಗೇನು ಗೊತ್ತು ಮನೆಯಲ್ಲಿ ಕಾಯುತ್ತಿರುವ ಮಡದಿಯ ಬಳಿ ಹೋಗುವ ಸಂಭ್ರಮ? ಎಂದು ಮನದಲ್ಲಿಯೇ ಅಂದುಕೊಂಡು ಬಾಸ್ ನತ್ತ ಒಂದು ದೇಶಾವರಿ ನಗೆ ಬೀರಿ, ಹೊರಗೆ ಬಂದು ಸ್ಕೂಟರ್ ಏರಿ ಮನೆ ಕಡೆ ಹೊರಟೆ.

ನನ್ನ ಮತ್ತು ಶಶಿಯ ವೈವಾಹಿಕ ಜೀವನ ಆರಂಭವಾಗಿ ಇನ್ನೂ ಕೇವಲ ಆರು ತಿಂಗಳಾಗಿದ್ದರಿಂದ ನಾವಿನ್ನೂ ನವವಿವಾಹಿತರೆಂದೇ ಹೇಳಬಹುದು. ನಾವು ಕೇವಲ ಆರು ತಿಂಗಳಿನಿಂದ ಹತ್ತಿರವಾಗಿದ್ದರೂ, ಮದುವೆಗೂ ಸುಮಾರು ಒಂದು ವರ್ಷದ ಹಿಂದೆಯೇ ನಮ್ಮ ಪರಿಚಯ ಆರಂಭವಾಗಿತ್ತು. ನನ್ನ ಪರಿಚಯದವರೊಬ್ಬರ ಮದುವೆಗೆ ಹೋಗಿದ್ದಾಗ, ಸಂಭ್ರಮದಿಂದ ಅತ್ತಿತ್ತ ಓಡಾಡುತ್ತಿದ್ದ ಕಳೆಕಳೆಯಾದ ಮುಖಚಹರೆಯಿದ್ದ ಈ ಹುಡುಗಿ ಸಾಧಾರಣ ರೂಪವತಿಯಾದರೂ ತನ್ನ ಲಾವಣ್ಯದಿಂದ ನನ್ನ ಮನ ಸೂರೆಮಾಡಿದ್ದಳು. ಅವಳ ಗಮನವನ್ನು ನನ್ನತ್ತ ಸೆಳೆಯಲು ಹಲವಾರು ಯತ್ನಗಳನ್ನು ಮಾಡಿದರೂ ಅವಳು ನನ್ನನ್ನು ಗಮನಿಸಿದಂತೆ ಕಾಣಲಿಲ್ಲ. ಅವಳು ನನ್ನನ್ನು ಗಮನಿಸಿದ್ದರೂ ಗಮನಿಸದಂತೆ ತೋರ್ಪಡಿಸಿರಲಿಲ್ಲವೆಂದು ನಂತರ ನನಗೆ ಅವಳೇ ಹೇಳಿದ್ದಳು. ಯಾರಿಗೂ ಅನುಮಾನ ಬರದಂತೆ ಅವಳ ಬಗ್ಗೆ ಮಾಹಿತಿ ಸಂಪಾದಿಸಿದೆ. ಮಧ್ಯಮ ಕುಟುಂಬ, ಅದೇ ತಾನೇ ಪದವಿ ಪರೀಕ್ಷೆ ಮುಗಿಸಿ ಫಲಿತಾಂಶಕ್ಕೆ ಕಾಯುತ್ತಿದ್ದಳಂತೆ. ಅವಳಿಗೆ ಒಬ್ಬ ಅಕ್ಕನಿದ್ದು ಅವಳಿಗೆ ವರಾನ್ವೇಷಣೆ ನಡೆಸಿದ್ದರಂತೆ. ಅವಳು ಫೇಸ್ ಬುಕ್ ನಲ್ಲಿದ್ದಾಳೆಂದು ತಿಳಿದಾಗ, ಫೇಸ್ ಬುಕ್ ನಲ್ಲಿ ನನ್ನ ಇತ್ತೀಚಿನ ಅತ್ಯುತ್ತಮ (ಎಂದರೆ ಇದ್ದುದರಲ್ಲಿಯೇ ನಾನು ಚೆನ್ನಾಗಿ ಕಾಣುವಂತಿದ್ದ) ಫೋಟೋ ಒಂದನ್ನು ಪ್ರೊಫೈಲ್ ಫೋಟೋ ಆಗಿ ಅಂಟಿಸಿ, ಅವಳಿಗೆ ನನ್ನ ಫ್ರೆಂಡ್ ರಿಕ್ವೆಸ್ಟ್ ಕಳಿಸಿದ್ದೆ. 'ಶಶಿ ನಿಮ್ಮನ್ನು ಸ್ನೇಹಿತರನ್ನಾಗಿ ಒಪ್ಪಿದ್ದಾಳೆ' ಎಂದು ಫೇಸ್ ಬುಕ್ ಸಂದೇಶ ನೀಡಿದಾಗ ಮೈಯೆಲ್ಲಾ ಪುಳಕವಾಗಿತ್ತು. ನಂತರದ ದಿನಗಳಲ್ಲಿ ನಮ್ಮಿಬ್ಬರ ಮಧ್ಯೆ ಅಸಂಖ್ಯ ಸಂದೇಶಗಳು ಹರಿದಾಡಿ ಪರಸ್ಪರ ಪ್ರೇಮ ನಿವೇದನೆಯೂ ಆಗಿ, ಅವಳ ಅಕ್ಕನಿಗೆ ವರ ನಿಶ್ಚಯವಾಗುವುದನ್ನೇ ಕಾಯುತ್ತಿದ್ದೆವು. ಈ ಮಧ್ಯೆ ನನ್ನ ತಾಯಿಗೂ ಈ ಸಂಬಂಧಕ್ಕೆ ಅಭ್ಯಂತರವಿಲ್ಲವೆಂದು ಖಚಿತಪಡಿಸಿಕೊಂಡಿದ್ದೆ. ಸುಮಾರು ಹತ್ತು ತಿಂಗಳಾದ ಮೇಲೆ ಅವಳ ಅಕ್ಕನಿಗೆ ವರ ನಿಶ್ಚಯವಾದಾಗ, ಅವಳು ನಮ್ಮ ಬಗ್ಗೆ ತನ್ನ ತಾಯಿಗೆ ಸೂಚನೆ ಕೊಟ್ಟಿದ್ದಳು. ಅದರಂತೆ ಅವಳ ತಂದೆ ತಾಯಿ ನನ್ನ ತಾಯಿಯವರನ್ನು ಸಂಪರ್ಕಿಸಿದಾಗ ಯಾವುದೇ ತಡೆಯಿಲ್ಲದೇ ಎರಡು ತಿಂಗಳ ನಂತರ ಅವಳ ಅಕ್ಕನ ಜೊತೆಯಲ್ಲಿಯೇ ನಮ್ಮ ಮದುವೆಯೂ ನಿಶ್ಚಯವಾಗಿ ಜೋಡಿ ಮದುವೆ ಜರುಗಿತ್ತು. ನನ್ನ ತಾಯಿ ಮತ್ತು ಶಶಿಯ ಮಧ್ಯೆ ಯಾರೂ ನಂಬಲಾರದಷ್ಟು ಅನ್ಯೋನ್ಯತೆ ಬೆಳೆದಿತ್ತು. ಅವರಿಬ್ಬರ ಅನ್ಯೋನ್ಯತೆ ನೋಡಿದಾಗ ಇಬ್ಬರೂ ಸೇರಿಕೊಂಡು ನನ್ನನ್ನು ಮರೆತುಬಿಡುವರೇನೋ ಎಂದು ಹೆದರುವಂತಾಗಿತ್ತು.

ಈ ಹಿಂದಿನ ಯಾವುದೇ ದಿನದಲ್ಲಿ ಶಶಿಯಿಂದ ಇಂತಹ ಕರೆ ಬಂದಿದ್ದರೆ, ಇದ್ದ ಕೆಲಸವನ್ನೆಲ್ಲಾ ಬದಿಗೊತ್ತಿ, ಬಾಸ್ ಗೂ ಹೆದರದೆ ತಕ್ಷಣ ಮನೆಗೆ ಧಾವಿಸುತ್ತಿದ್ದೆ. ಈ ದಿನ ಏನಾಗಿರಬಹುದೆಂದು ನನಗೆ ಸ್ಪಷ್ಟವಾಗಿ ತಿಳಿದಿದ್ದರಿಂದ ಅಂತಹ ಧಾವಂತವೇನಿರಲಿಲ್ಲ. ದಾರಿಯಲ್ಲಿ ಘಮಘಮವೆನ್ನುತ್ತಿದ್ದ ಮಲ್ಲಿಗೆ ದಂಡೆಯನ್ನು ಕೊಂಡು ಮನೆ ತಲುಪುವಷ್ಟರಲ್ಲಿ ಐದು ಮುಕ್ಕಾಲು ಗಂಟೆಯಾಗಿತ್ತು. ಸ್ಕೂಟರ್ ನ್ನು ಮಾಮೂಲಿ ಜಾಗದಲ್ಲಿ ನಿಲ್ಲಿಸಿ, ಎರಡನೆಯ ಅಂತಸ್ತಿನಲ್ಲಿದ್ದ ನಮ್ಮ ಅಪಾರ್ಟ್ ಮೆಂಟ್ ಕರೆಗಂಟೆಯನ್ನೊತ್ತಿದೆ. ಬಾಗಿಲು ತೆರೆಯುತ್ತಿದ್ದಂತೆಯೇ,



'ಹಾಯ್ ಸ್ವೀಟೀ....' ಎಂದೆನ್ನಬೇಕೆಂದಿದ್ದವನು, ಮಾಮೂಲಾಗಿ ಸಂಜೆ ಬಾಗಿಲು ತೆಗೆಯುತ್ತಿದ್ದ ಶಶಿಯ ಬದಲು ನನ್ನ ತಾಯಿ ಬಾಗಿಲು ತೆರೆದಿದ್ದನ್ನು ನೋಡಿ, ಹಾಗೆಯೇ ಬಾಯಿ ಮುಚ್ಚಿಕೊಂಡಿದ್ದೆ. ನೇರವಾಗಿ ನಮ್ಮ ಮಲಗುವ ಕೋಣೆಗೆ ಹೋಗುತ್ತಿದ್ದ ನನ್ನನ್ನು ತಡೆದು,


'ನೋಡೋ, ಶಶಿ ಮಲಕ್ಕೊಂಡಿದ್ದಾಳೆ. ಅವಳನ್ನೆಬ್ಬಿಸಬೇಡ. ನಾನೇ ಕಾಫಿ ಕೊಡ್ತೀನಿ. ಪಾಪ, ಮಲಕ್ಕೊಳ್ಳಿ' ಎಂದರು.

'ಯಾಕೆ, ಏನಾಯ್ತು?' ಎಂದೆ ಆತಂಕದಿಂದ.

'ಅದೇನೋ ಗೊತ್ತಿಲ್ಲ, ಮಧ್ಯಾಹ್ನ ತನಕ ಚೆನ್ನಾಗಿಯೇ ಇದ್ದಳು. ಒಂದೂವರೆ ಗಂಟೆಗೆ ಊಟದ ಶಾಸ್ತ್ರ ಮಾಡಿ, ಅಮ್ಮಾ, ತಲೆ ಬಹಳ ನೋಯ್ತಿದೆ, ನಾನು ಮಲಗ್ತೀನಿ ಎಂದು ಹೋಗಿ ಮಲಕ್ಕೊಂಡವಳು

ಇನ್ನೂ ಎದ್ದಿಲ್ಲ' ಎಂದರು. ಯಾರಿಗಾದರೂ ನಿದ್ದೆ ಮಾಡುತ್ತಿರುವಾಗಲೇ ಫೋನ್ ಮಾಡಲು ಸಾಧ್ಯವೇ ಎಂದು ಕೇಳಬೇಕೆಂದುಕೊಂಡವನು, ಹಾಗೆ ಕೇಳದೆ,

'ಹೌದಾ, ಆಗಲಿ, ಕಾಫಿ ಕೊಡು. ಕಾಫಿ ಕುಡಿದ್ಮೇಲೆ ಎಬ್ಬಿಸ್ತೇನೆ' ಎಂದು ನಾನು ಹೇಳುವುದಕ್ಕೂ, ಮಲಗುವ ಕೋಣೆಯಿಂದ ಶಶಿ ಕೆಮ್ಮುವ ಶಬ್ದ ಕೇಳಿ ಅವಳು ಎದ್ದಿದ್ದಾಳೆಂದು ಸೂಚಿಸಿದ್ದುದಕ್ಕೂ ಸರಿಹೋಯಿತು.



'ಎದ್ದಿದ್ದಾಳೆ ಅಂತ ಕಾಣುತ್ತೆ' ಎಂದು ಮಲಗುವ ಕೋಣೆಗೆ ಹೋದಾಗ, ಶಶಿ ಹಾಸಿಗೆಯ ಮೇಲೆ ಎದ್ದು ಕುಳಿತಿದ್ದಳು.

'ಏನು ಚಿನ್ನಾ, ಏನಾಯಿತು? ತಲೆ ನೋವಂತೆ' ಎಂದೆ ರಮಿಸುವ ದನಿಯಲ್ಲಿ.

'ಏನೂ ಆಗ್ಲಿಲ್ಲ, ಮಧ್ಯಾಹ್ನ ಈ ಲೆಟರ್ ಬಂತು, ನೀವೇ ಓದಿ ನೋಡಿ' ಎಂದು ಅಲ್ಮಾರಿ ಮೇಲಿದ್ದ ಲಕೋಟೆಯನ್ನು ತೆಗೆದು ಕೋಪದಿಂದ ನನ್ನತ್ತ ಎಸೆದಳು.

ಲಕೋಟೆಯನ್ನು ತೆಗೆದುಕೊಂಡು ನೋಡಿದೆ. ಅದರ ಮೇಲೆ ನನ್ನದೇ ವಿಳಾಸವಿತ್ತು.

ಶ್ರೀ ಪ್ರೇಮ ಕುಮಾರ್, ಫ್ಲಾಟ್ ನಂ. 3, ಎರಡನೇ ಮಹಡಿ, ವಿಶ್ವಗಿರಿ ಅಪಾರ್ಟ್ ಮೆಂಟ್ಸ್, ಹೊಸ ಬಾದಾಮಿನಗರ, ಹುಬ್ಬಳ್ಳಿ. ಆದರೆ ಕಳಿಸಿದವರ ವಿಳಾಸವಿರಲಿಲ್ಲ. ಲಕೋಟೆಯನ್ನು ಶಶಿ ಆಗಲೇ ತೆರೆದಿದ್ದಳು.

'ಇದರ ಮೇಲೆ ನನ್ನ ಹೆಸರು ಮುದ್ರಿಸಿರುವುದು ನೋಡಿದರೇ ತಿಳಿಯುವುದಿಲ್ಲವೇ, ಇದು ಯಾವುದೋ ಕಂಪೆನಿ ಪತ್ರವೆಂದು. ಇದನ್ನು ಯಾಕೆ ತೆರೆಯಲು ಹೋದೆ' ಎಂದು ಆಕ್ಷೇಪಿಸಿದೆ.

'ಸ್ವಲ್ಪ ಅದನ್ನು ಮೂಸಿ ನೋಡಿ, ಗೊತ್ತಾಗುತ್ತೆ ಅದು ಯಾವ ಕಂಪೆನಿಯದೆಂದು ಅಂತ' ಎಂದಳು ಶಶಿ ಮುನಿಸಿನಿಂದಲೇ.

ಲಕೋಟೆಯನ್ನು ಮೂಗಿನ ಹತ್ತಿರ ಹಿಡಿಯುವ ಅಗತ್ಯವೇ ಇರಲಿಲ್ಲ. ಲಕೋಟೆಯಿಂದ ಘಮ್ಮೆಂದು ಪರಿಮಳ ಸೂಸುತ್ತಿತ್ತು.

'ಅದರಲ್ಲಿ ಏನು ವಿಶೇಷ? ಇದು ಕೊರಿಯರ್ ನಲ್ಲಿ ಬಂತು ತಾನೇ? ಅವನನ್ನು ಮೂಸಿ ನೋಡಿದೆಯಾ?' ಎಂದೆ ಅಮಾಯಕನಂತೆ.

'ಥೂ, ಏನು ಹಾಗೆಂದರೆ' ಎಂದು ಹುಬ್ಬ ಗಂಟಿಕ್ಕಿಗೊಂಡಳು.

'ಈ ಕೊರಿಯರ್ ಹುಡುಗರು ಬರ್ತಾರಲ್ಲ. ಅವರಲ್ಲಿ ಕೆಲವರು ಸಿಕ್ಕಾಪಟ್ಟೆ ಸೆಂಟ್ ಹಾಕಿಕೊಂಡಿರ್ತಾರೆ. ಅದೇ ಈ

ಲೆಟರ್ ಗೂ ಅಂಟಿಕೊಂಡಿದೆ' ಎಂದೆ.

'ಆಹಾಹಾ, ಎಂತಹಾ ಜಾಣ ವಿವರಣೇರೀ ನಿಮ್ಮದು. ಅಷ್ಟಕ್ಕೂ ಅದನ್ನು ತಂದುಕೊಟ್ಟದ್ದು ಕೊರಿಯರ್ ಹುಡುಗನಲ್ಲ. ಅಪಾರ್ಟ್ ಮೆಂಟ್ ನ ಸೆಕ್ಯೂರಿಟಿಯವನು. ಅವನನ್ನೂ ಮೂಸಬೇಕಿತ್ತೇ' ಎಂದಳು ವ್ಯಂಗ್ಯವಾಗಿ.

'ಆಯ್ತು. ಈ ಲೆಟರ್ ನಿಂದ ಸುವಾಸನೆ ಬರ್ತಿದೆ. ಏನೀಗ?' ಎಂದೆ.

'ಲೆಟರ್ ಗೆ ಸುವಾಸನೆ ಇದೆ ಎಂದರೆ ಏನರ್ಥ? ಲವ್ ಲೆಟರ್ ತಾನೇ. ಅದಕ್ಕೇ ನಾನು ಅದನ್ನು ತೆರೆದು ಓದಿದ್ದು. ನೀವೇ ನೋಡ್ಕೊಳ್ಳಿ ಅದರಲ್ಲಿ ಏನು ಬರೆದಿದೆ ಅಂತ. ಆವಾಗ್ಲಾದ್ರೂ ಗೊತ್ತಾಗುತ್ತೆ ಲವ್ ಲೆಟರ್ ಅಂತ' ಎಂದಳು ವ್ಯಗ್ರಳಾಗಿ. ಲಕೋಟೆಯಲ್ಲಿ ಮಡಚಿಟ್ಟಿದ್ದ ಪತ್ರವನ್ನು ತೆರೆದು ಓದಿದೆ. ಕ್ಷಮಿಸಿ, ಓದಲು ಪ್ರಯತ್ನಿಸಿದೆ. ಪತ್ರದಲ್ಲಿದ್ದ ಸಂದೇಶ ಇಂಗ್ಲೀಷ್ ಲಿಪಿಯಲ್ಲಿದ್ದರೂ ಅಕ್ಷರಗಳೆಲ್ಲವೂ ಅದಲು ಬದಲಾದಂತೆ ಇದ್ದು ಏನೂ ಅರ್ಥವಾಗುತ್ತಿರಲಿಲ್ಲ.

'ಇದು ಲವ್ ಲೆಟರ್ ಅಂತ ನಿನಗೆ ಹೇಗೆ ಗೊತ್ತಾಯ್ತು? ಇದರಲ್ಲಿ ಏನು ಬರೆದಿದೆ ಅಂತಾನೇ ತಿಳಿಯುತ್ತಿಲ್ಲ' ಎಂದು ಉದ್ಗರಿಸಿದೆ.

'ಪಾಪ, ಏನೂ ಗೊತ್ತಾಗ್ತಿಲ್ಲ ಅಲ್ವೆ? ನೀವು ನಿಮ್ಮ ಈ ಗೆಳತಿ ನನ್ನನ್ನೇನು ಅಂತ ತಿಳ್ಕೊಂಡಿದ್ದೀರಿ. ಬೆಟ್ಟು ಚೀಪೋ ಮಗು ಅಂತಾ ತಿಳಿದಿದ್ದೀರಾ? ಈ ಲೆಟರ್ ಕೋಡ್ ನಲ್ಲಿದೆ ಅಂತಾ ನನಗೆ ಗೊತ್ತಿಲ್ವಾ?' ಎಂದಳು

'ಕೋಡ್ ನಲ್ಲಾ? ಯಾವ ಕೋಡ್?' ಎಂದೆ ಮೊದಲಿನ ಅಮಾಯಕತೆಯಿಂದಲೇ.

'ನೀವೇ ನನಗೆ ಹೇಳಿಕೊಟ್ಟಿದ್ದಿರಲ್ಲಾ, ಈ ಕೋಡ್ ಗೆ ರ್‍ಯಾಂಡಮ್ ಸಬ್ ಸ್ಟಿಟ್ಯೂಶನ್ ಕೋಡ್ ಅಂತಾರೆ ಅಂತಾ' ಎಂದಳು.

'ಕೋಡ್ ನಲ್ಲಿದ್ದರೆ ನೀನು ಹೇಗೆ ಓದಿದೆ?'

'ಆವತ್ತು ನೀವು ಅದರ ಬಗ್ಗೆ ಸ್ವಲ್ಪ ತಿಳಿಸಿದ್ದಿರಿ. ಅದರ ಆಧಾರದ ಮೇಲೆ ಪ್ರಯತ್ನಿಸಿದೆ. ಮೊದಲ ಸಾಲು ಮತ್ತು

ಕೊನೆಯ ಸಾಲು ತಿಳಿಯಿತು. ಅದರಿಂದ್ಲೇ ಗೊತ್ತಾಯ್ತು ಇದು ಪ್ರೇಮಪತ್ರ ಅಂತಾ' ಎಂದಳು ಹಂಗಿಸುವಂತೆ.

'ಮೊದಲ ಸಾಲು ಕೊನೆಯ ಸಾಲಿನಲ್ಲೇನಿದೆ?'

'ಮೈ ಡಿಯರೆಸ್ಟ್ ಡಾರ್ಲಿಂಗ್ ನಿಂದ ಆರಂಭವಾಗಿ, ವಿತ್ ಸ್ವೀಟ್ ಕಿಸಸ್ ನಿಂದ ಪತ್ರ ಮುಗಿಸಿದ್ದಾಳೆ ನಿಮ್ಮ ಪ್ರೇಯಸಿ' ಎಂದಳು ಅಕ್ಕಸದಿಂದ.

ಈಗ ನಾನು ಒಂದೆರಡು ವಿಷಯ ನಿಮಗೆ ತಿಳಿಸದ ಹೊರತು ಎಲ್ಲವೂ ಗೋಜಲು ಗೋಜಲಾಗಿ ತೋರಬಹುದು. ನಾನು ಮತ್ತು ರಾಮಸ್ವಾಮಿ ಬಿ.ಕಾಂ ಓದುತ್ತಿರುವಾಗ ಆಪ್ತ ಗೆಳೆಯರು. ಇಬ್ಬರಿಗೂ ಓದುವ ಹುಚ್ಚು. ಅದರಲ್ಲಿಯೂ ಶೆರಲಾಕ್ಸ್ ಹೋಮ್ ನ ಸಾಹಸಗಳ ಬಗ್ಗೆ ನಾವು ಚರ್ಚಿಸದ ವಿಷಯಗಳಿರಲಿಲ್ಲ. ಶೆರಲಾಕ್ಸ್ ಹೋಮ್ಸ್ ನ ಸಾಹಸಗಳಲ್ಲಿ ಒಂದಾದ 'ದಿ ಅಡ್ವೆಂಚರ್ ಆಫ್ ಡ್ಯಾನ್ಸಿಂಗ್ ಮೆನ್' ಓದಿದ ಮೇಲೆ ಇಬ್ಬರಿಗೂ ಕೋಡ್ (ಗುಪ್ತಲಿಪಿ) ನಲ್ಲಿ ಬರೆಯುವ ಹುಚ್ಚು ಅಂಟಿಕೊಂಡಿತ್ತು. ಗುಪ್ತಲಿಪಿಯಲ್ಲಿ ನಾನೊಂದು ಸಂದೇಶ ಅವನಿಗೆ ಬರೆದು ಕಳಿಸಿದರೆ, ಅದೇ ಗುಪ್ತಲಿಪಿಯಲ್ಲಿ ಆ ಸಂದೇಶಕ್ಕೆ ಉತ್ತರ ಕಳಿಸುತ್ತಿದ್ದ. ಹೀಗೆ ನಾವು ಬಗೆಬಗೆಯ ಗುಪ್ತಲಿಪಿಗಳಲ್ಲಿ ಸಂದೇಶಗಳನ್ನು ಬರೆದು ವ್ಯವಹರಿಸುತ್ತಿದ್ದೆವು. ನನ್ನ ಮದುವೆಯಾದ ಹೊಸತರಲ್ಲಿ, ರಾಮಸ್ವಾಮಿ ನನಗೆ ಅಂತಹುದೊಂದು ಗುಪ್ತಲಿಪಿಯಲ್ಲಿ ಬರೆದ ಅಭಿನಂದನಾ ಪತ್ರವನ್ನು ಕಳಿಸಿದ್ದ. ಆ ಪತ್ರದ ಒಕ್ಕಣೆಯನ್ನು ಶಶಿಗೆ ವಿವರಿಸಿ ತಿಳಿಸುವಾಗ, ರ್‍ಯಾಂಡಮ್ ಸಬ್ ಸ್ಟಿಟ್ಯೂಶನ್ ಕೋಡ್ ಎನ್ನುವ ಒಂದು ಬಗೆಯ ಗುಪ್ತಲಿಪಿಯ ಬಗ್ಗೆ ತಿಳಿಸಿದ್ದೆ. ಅಂತಹ ಗುಪ್ತಲಿಪಿಯಲ್ಲಿ ಸಂದೇಶ ಬಂದಾಗ ಅದನ್ನು ಹೇಗೆ ಬಿಡಿಸುವುದೆಂದು ಸ್ಥೂಲವಾಗಿ ತಿಳಿಸಿದ್ದೆ. ಏಪ್ರಿಲ್ ಒಂದರ ಈ ದಿನದಂದು, ಶಶಿಯನ್ನು ಮೂರ್ಖಳನ್ನಾಗಿ ಮಾಡಿ ಗೋಳು ಹುಯ್ದುಕೊಳ್ಳುವ ಯೋಚನೆ ನನಗೆ ಬಂದಿತ್ತು. ಅದರಂತೆ, ಹಿಂದಿನ ದಿನವೇ ಆ ಗುಪ್ತಲಿಪಿಯಲ್ಲಿ ಒಂದು ಪತ್ರ ರಚಿಸಿದ್ದೆ. ನಾನು ಅವಳಿಗೆ ಹೇಳಿಕೊಟ್ಟಿದ್ದ ಒಂದೆರಡು ಸಲಹೆಗಳಿಂದಲೇ ಬಿಡಿಸಲು ಸಾಧ್ಯವಾಗುವಂತೆ ಮೊದಲ ಮತ್ತು ಕೊನೆಯ ಸಾಲುಗಳನ್ನು ರಚಿಸಿದ್ದೆ. ಇನ್ನುಳಿದ ಸಾಲುಗಳನ್ನು ಕ್ಲಿಷ್ಟವಾಗಿರುವಂತೆ ಬರೆದಿದ್ದೆ. ಆ ಪತ್ರವನ್ನು ಲಕೋಟೆಯಲ್ಲಿಟ್ಟು, ಲಕೋಟೆಯ ಮೇಲೆ ನನ್ನ ವಿಳಾಸವನ್ನು ಕಂಪ್ಯೂಟರ್ ನಲ್ಲಿ ಮುದ್ರಿಸಿ, ಲಕೋಟೆಗೆ ಧಾರಳವಾಗಿ ಪರ್ ಫ್ಯೂಮ್ ಬಳಿದಿದ್ದೆ. ಅದನ್ನು ಅಂದು ಬೆಳಿಗ್ಗೆ ಸೆಕ್ಯೂರಿಟಿಯವನಿಗೆ ಕೊಟ್ಟು, ಸುಮಾರು ಒಂದು ಗಂಟೆಯ ಹೊತ್ತಿಗೆ ನಮ್ಮ ಮನೆಗೆ ಹೋಗಿ, ಅದು ಕೊರಿಯರ್ ನಲ್ಲಿ ಬಂದಿದೆ ಎಂದು ತಲುಪಿಸಬೇಕೆಂದು ತಿಳಿಸಿದ್ದೆ. ಅಂತೆಯೇ, ಅವನು ಒಂದು ಗಂಟೆಯ ಹೊತ್ತಿಗೆ ತಲುಪಿಸಿದ್ದ. ನಾನು ಊಹಿಸಿದಂತೆಯೇ, ಅದಕ್ಕೆ ಬಳಿದಿದ್ದ ಪರಿಮಳದಿಂದ ಅನುಮಾನವುಂಟಾಗಿ ಲಕೋಟೆಯನ್ನು ತೆರೆದು ಓದಿದ್ದಳು. ಮೊದಲ ಮತ್ತು ಕೊನೆಯ ಸಾಲುಗಳನ್ನು ಸರಿಯಾಗಿ ಬಿಡಿಸಿ ಓದಿದಾಗ ಅದೊಂದು ಪ್ರೇಮಪತ್ರವೆಂದು ಅವಳಿಗೆ ಖಾತ್ರಿಯಾಗಿ, ತಲೆನೋವಿನ ನೆಪ ಹೇಳಿ, ಮಲಗುವ ಕೋಣೆ ಸೇರಿ, ಸುಮಾರು ನಾಲ್ಕು ಗಂಟೆಯ ಹೊತ್ತಿಗೆ ನನಗೆ ಫೋನ್ ಮಾಡಿದ್ದಳು. ಮುಂದಿನ ಸಂಗತಿಗಳೆಲ್ಲವನ್ನೂ ನಿಮಗೆ ಆಗಲೇ ತಿಳಿಸಿದ್ದೇನೆ. ನಾನು ಪೆಚ್ಚು ಮುಖ ಮಾಡಿಕೊಂಡು,



'ಇಲ್ಲ ಶಶಿ, ನೀನು ಏನೇನೋ ಕಲ್ಪಿಸಿಕೊಳ್ಳುತ್ತಿದ್ದೀಯಾ, ಖಂಡಿತವಾಗಿಯೂ ನಿನ್ನನ್ನು ಬಿಟ್ಟರೆ ನನಗೆ ಇನ್ನಾವ ಪ್ರೇಯಸಿಯೂ ಇಲ್ಲ' ಎಂದೆ.

'ನಾನು ನಿಮ್ಮ ಹೆಂಡತೀರೀ, ಪ್ರೇಯಸಿಯಲ್ಲ' ಎಂದಳು ಅಂತಹ ಗಂಭೀರ ಸಂದರ್ಭದಲ್ಲಿಯೂ ಅವಳು ಸರಿಯಾಗಿ ತಾಂತ್ರಿಕ ಆಕ್ಷೇಪವನ್ನೆತ್ತಿದ್ದಳು.

'ಆಯ್ತು. ನೀನು ಪ್ರೇಯಸಿಯಲ್ಲ, ನನ್ನ ಹೆಂಡತೀನೇ. ನಿನ್ನನ್ನು ಬಿಟ್ಟು ಇನ್ನು ಯಾವ ಹುಡುಗಿಯ ಜೊತೆಯೂ ನನ್ನ ವ್ಯವಹಾರವಿಲ್ಲ' ಎಂದೆ ದೀನನಾಗಿ.

'ಅಂದರೆ, ಈ ಹುಡುಗೀನೇ ನಿಮ್ಮ ಮುದ್ದುಮುಖ ನೋಡಿ ನಿಮ್ಮ ಹಿಂದೆ ಬಿದ್ದಿದ್ದಾಳೆಯೇ? ಎಂದಳು ವ್ಯಂಗ್ಯವಾಗಿ.

'ಹೌದು. ಇವಳು ಯಾರು ಎಂತಲೂ ನನಗೆ ಗೊತ್ತಿಲ್ಲ. ದೇವರಾಣೆ' ಎಂದೆ.

'ಹಾಗಾದರೆ ಒಂದು ಕೆಲಸ ಮಾಡುತ್ತೀರಾ? ನಾನು ಅವಳಿಗೆ ಸರಿಯಾಗಿ ಬುದ್ಧಿ ಬರುವಂತೆ ಒಂದು ಪತ್ರ ಬರೆದಿದ್ದೇನೆ. ಅದನ್ನು ಅವಳಿಗೆ ಕಳಿಸುತ್ತೀರಾ?' ಎಂದಳು.

'ಚಿನ್ನಾ, ನಿನ್ನ ಚಾತುರ್ಯಕ್ಕೆ ಮೆಚ್ಚಿದೆ. ನಾನೇನಾದರೂ

ಮಂಕನಂತೆ, ಸರಿ ತಾ ಅವಳಿಗೆ ತಲುಪಿಸುತ್ತೇನೆ ಎಂದಿದ್ದರೆ, ಅವಳು ಯಾರೆಂದೇ ನಿಮಗೆ ತಿಳಿಯದಿರುವಾಗ ಅದು ಹೇಗೆ ಅವಳಿಗೆ ತಲುಪಿಸುತ್ತೀರಿ ಎಂದು ನನ್ನನ್ನು ಸಿಕ್ಕಿಹಾಕಿಸುತ್ತಿದ್ದೆಯಲ್ಲವೇ? ಇರಲಿ, ಅದೇನು ಪತ್ರ ಬರೆದಿದ್ದೀಯೋ ತೋರಿಸು. ಅಕಸ್ಮಾತ್ ಅವಳು ಇನ್ನೊಂದು ಪತ್ರ ಬರೆದು, ಅದರಲ್ಲಿ ತನ್ನ ವಿಳಾಸವನ್ನು ತಿಳಿಸಿದರೆ, ಅವಳಿಗೆ ಅದನ್ನು ತಿಳಿಸುತ್ತೇನೆ' ಎಂದೆ, ಅವಳು ಆ ಪತ್ರದಲ್ಲಿ ಏನು ಬರೆದಿರಬಹುದೆಂದು ತಿಳಿಯುವ ಉತ್ಸುಕತೆಯಿಂದ. ಅಲ್ಮಾರಿ ತೆಗೆದು, ತನ್ನ ಸೀರೆಗಳ ಕೆಳಗೆ ಬಚ್ಚಿಟ್ಟಿದ್ದ ಒಂದು ಪತ್ರವನ್ನು ನನ್ನ ಕೈಗೆ ಕೊಟ್ಟಳು. ಇಂಗ್ಲೀಷ್ ನಲ್ಲಿ ಬರೆದಿದ್ದ ಆ ಪತ್ರವನ್ನು ಬಿಡಿಸಿ ಓದುತ್ತಿದ್ದಂತೆ ನನಗೆ ನಗೆ ತಡೆಯಲಾಗಲಿಲ್ಲ. ನಾನು ಜೋರಾಗಿ ನಗಲಾರಂಭಿಸಿದುದನ್ನು ನೋಡಿ, ಅವಳೂ ನನ್ನ ನಗುವಿನಲ್ಲಿ ಭಾಗಿಯಾಗಿ, ನನ್ನ ಹತ್ತಿರ ಬಂದು ಸಲಿಗೆಯಿಂದ ನನ್ನ ಬೆನ್ನ ಮೇಲೆ ಗುದ್ದಿದಳು.



'ಪರವಾಗಿಲ್ಲ ಕಣೇ, ನನ್ನ ಸೇರಿಗೆ ನಿನ್ನ ಸವಾಸೇರು ಚೆನ್ನಾಗಿದೆ' ಎಂದೆ. ಆ ಪತ್ರದ ಒಕ್ಕಣೆ ಹೀಗಿತ್ತು.

'ಮೈ ಡಿಯರೆಸ್ಟ್ ಡಾರ್ಲಿಂಗ್, ಇವತ್ತು ಏಪ್ರಿಲ್ ಒಂದನೇ ತಾರೀಕು ಎನ್ನುವುದು ನಿನಗೆ ನೆನಪಿದೆಯೇ? ಅದಕ್ಕೆ ನಿನ್ನನ್ನು ಮೂರ್ಖಳನ್ನಾಗಿ ಮಾಡುವ ಉದ್ದೇಶದಿಂದ ಈ ಪತ್ರ ಬರೆದಿದ್ದೇನೆ. ಕಡೆಗೂ ಮೂರ್ಖಳಾದೆ ಅಲ್ಲವೇ? ನೀನೆಣಿಸಿದಂತೆ ನನಗೆ ಯಾವ ಹುಡುಗಿಯ ಸ್ನೇಹವೂ ಇಲ್ಲ. ನಿನಗೆ ನಂಬುಗೆ ಬಾರದಿದ್ದರೆ, ಎರಡು ಸಾಕ್ಷ್ಯಗಳನ್ನು ಒದಗಿಸಬಲ್ಲೆ. ಮೊದಲನೆಯದಾಗಿ, ಲಕೋಟೆಯ ಮೇಲೆ ಯಾವ ಕೊರಿಯರ್ ನ ಚಿಹ್ನೆಯೂ ಇಲ್ಲ. ಎರಡನೆಯದಾಗಿ, ನಮ್ಮ ಅಪಾರ್ಟ್ ಮೆಂಟ್ ಸೆಕ್ಯೂರಿಟಿಯವನಿಂದ ಸಾಕ್ಷ್ಯ ಹೇಳಿಸಬಲ್ಲೆ. ಹೇಗಿತ್ತು ನನ್ನ ಯೋಜನೆ? ಸಿಹಿ ಮುತ್ತುಗಳೊಂದಿಗೆ'

ಅರ್ಥಾತ್, ಅವಳನ್ನು ಬೇಸ್ತು ಬೀಳಿಸಲು ಗುಪ್ತಲಿಪಿಯಲ್ಲಿ ನಾನೇ ರಚಿಸಿದ ಪತ್ರದ ಸರಳ ಇಂಗ್ಲೀಷ್ ರೂಪಾಂತರ! ಹಾಗೆ ಮಾಡುವುದರ ಮೂಲಕ, ಮೊದಲ ಮತ್ತು ಕೊನೆಯ ಸಾಲುಗಳನ್ನಲ್ಲದೇ ಇಡೀ ಪತ್ರದ ಸಂದೇಶವನ್ನು ಬಿಡಿಸಿದ್ದೇನೆಂದು ನನಗೆ ತಿಳಿಯಪಡಿಸಿದ್ದಳು. ಅವಳನ್ನು 'ಮೂರ್ಖಿ' ಳನ್ನಾಗಿ ಮಾಡಲು ನಾನು ಬಳಸಿದ್ದ ತಂತ್ರದಿಂದಲೇ ನನ್ನನ್ನು 'ಮೂರ್ಖ' ನನ್ನಾಗಿ ಮಾಡಿದ್ದಳು ನನ್ನ ಜಾಣೆ ಶಶಿ!

ಶಶಿ ಅದಕ್ಕೆ ವಿವರಣೆಯಿತ್ತಳು.

'ಸ್ವಲ್ಪ ಹೊತ್ತು ಮೂರ್ಖಳಾದದ್ದೇನೋ ನಿಜ. ಲಕೋಟೆ ತೆಗೆದು ಓದಿದಾಗ ಅದರ ಪರಿಮಳದ ಆಧಾರದ ಮೇಲೆ ಅದು ಪ್ರೇಮ ಪತ್ರವಿರಬಹುದೆಂದು ಊಹಿಸಿದೆ. ಪತ್ರವನ್ನು ತೆಗೆದು ಓದಿದಾಗ ಮೊದಲು ಏನೂ ತಿಳಿಯಲಿಲ್ಲ. ಇಂಗ್ಲೀಷ್ ಅಕ್ಷರಗಳ ಕಲಸು ಮೇಲೋಗರವಾಗಿದ್ದುದನ್ನು ಬಹಳ ಹೊತ್ತು ನಿಟ್ಟಿಸಿದ ಮೇಲೆ ಅದೊಂದು ಗುಪ್ತಲಿಪಿಯಿರಬಹುದೆಂಬ ಅನುಮಾನ ಬಂತು. ಆ ದಿನ ನೀವು ವಿವರಿಸಿದ ಗುಪ್ತಲಿಪಿ ಮತ್ತು ಅದನ್ನು ಹೇಗೆ ಬಿಡಿಸಬೇಕೆಂದು ನೀವಿತ್ತಿದ್ದ ಸೂಚನೆಗಳನ್ನನುಸರಿಸಿ ಪ್ರಯತ್ನಿಸಿದಾಗ ಮೊದಲ ಸಾಲು ಮತ್ತು ಕೊನೆಯ ಸಾಲು ಬಿಡಿಸಲು ಸಾಧ್ಯವಾಗಿತ್ತು. ಅದು ಪ್ರೇಮಪತ್ರವಿರಬಹುದೆಂಬ ನನ್ನ ಸಂಶಯ ನಿಜವೆನಿಸಿದಾಗ ನಿಮ್ಮ ಮೇಲೆ ಅಸಾಧ್ಯ ಕೋಪ ಬಂತು. ಅಮ್ಮನಿಗೆ ತಲೆನೋವಿನ ನೆಪ ಹೇಳಿ, ಮಲಗುವ ಕೋಣೆಗೆ ಹೋಗಿ ಒರಗಿದೆ. ಆ ಪತ್ರದ ಸಾಲುಗಳೇ ನನ್ನನ್ನು ಅಣಕಿಸುವಂತೆ ಭಾಸವಾಗುತ್ತಿತ್ತು. ಅದನ್ನು ತೆರೆದಿಟ್ಟುಕೊಂಡು ಪತ್ರದ ಉಳಿದ ಭಾಗವನ್ನೂ ಬಿಡಿಸಲು ಪ್ರಯತ್ನಿಸಿದಾಗ, ಅಲ್ಲಲ್ಲಿ ಕೆಲವು ಪದಗಳನ್ನು ಬಿಡಿಸಲು ಸಾಧ್ಯವಾಯಿತು. ಕ್ರಮೇಣ ಅವುಗಳ ಸಂದರ್ಭವನ್ನು ಗಮನಿಸಿ ಮತ್ತೊಮ್ಮೆ ಪ್ರಯತ್ನಿಸಿದಾಗ ಇಡೀ ಪತ್ರದ ಒಕ್ಕಣೆಯನ್ನು ಬಿಡಿಸಲು ಸಾಧ್ಯವಾಗಿತ್ತಲ್ಲದೇ ನಿಮ್ಮ ಯೋಜನೆಯೂ ತಿಳಿಯಿತು. ಇದಕ್ಕೆ ಪ್ರತಿಯಾಗಿ ನಿಮ್ಮನ್ನೂ ಮೂರ್ಖನನ್ನಾಗಿ ಮಾಡಿದರೆ ಹೇಗೆ ಎಂಬ ಯೋಚನೆ ಬಂತು. ಅದರಂತೆಯೇ ನಡೆದುಕೊಂಡೆ. ನಿಮ್ಮ ಯಾವ ಸಾಕ್ಷ್ಯವೂ ಬೇಕಿಲ್ಲ. ಆದರೆ ಇನ್ನೊಮ್ಮೆ ನೀವು ಹೀಗೆ ನನಗೆ ಸಂಕಟವನ್ನುಂಟು ಮಾಡಿದರೆ ನನಗೂ ಒಬ್ಬ ಪ್ರಿಯತಮ ಉದ್ಭವಿಸುತ್ತಾನೆ ಎಂಬುದನ್ನು ನೆನಪಿಟ್ಟುಕೊಳ್ಳಿ' ಎಂದಳು ಮತ್ತೊಮ್ಮೆ ನನ್ನ ಬೆನ್ನಿಗೆ ಜೋರಾಗಿ ಗುದ್ದುತ್ತಾ.

'ಆಯ್ತು, ನನ್ನ ಸೋಲು ಒಪ್ಪಿಕೊಂಡೆ. ಇಡೀ ಪತ್ರವನ್ನು ನೀನು ಬಿಡಿಸುತ್ತೀ ಎಂದು ನಾನು ನಿರೀಕ್ಷಿಸಿರಲಿಲ್ಲ. ಹಾಗಾಗಿ ನನ್ನ ಯೋಜನೆ ಹುಸಿಯಾಯ್ತು. ಅದೆಲ್ಲಾ ಇರಲಿ, ಪತ್ರದ ಕೊನೆಗೆ ಏನೋ ಬರೆದಿದೆಯಲ್ಲಾ ವಿತ್ ಸ್ವೀಟ್ ಅಂತಾ, ಎಲ್ಲಿ ಅವು? ಬೇಗ ಬರಲಿ' ಎಂದೆ ನನ್ನ ಮುಖ ಮುಂದೆ ಮಾಡುತ್ತಾ.

'ಆ ಪತ್ರ ಬರೆದವರು ನೀವು. ನೀವು ಕೊಡಬೇಕು. ನಾನಲ್ಲ' ಎಂದು ಅವಳು ಮಾದಕವಾಗಿ ಹೇಳಿದಾಗ, ಕೊಡದಿರುವಷ್ಟು ಅರಸಿಕನೇ ನಾನು?



**ಡಾ ರತ್ನಾಕರ**
ನಂಜಪ್ಪ ಲೈಫ್ ಕೇರ್ ಆಸ್ಪತ್ರೆ, ಶಿವಮೊಗ್ಗ

## ಕಾಯಿಲೆ ಚಿಕಿತ್ಸೆ


# ನಿಫಾ ವೈರಸ್



**ಡಾ ಉಮಾಮಹೇಶ್ವರಿ ಎಸ್**
ವಿಭಾಗೀಯ ಸಂಪಾದಕರು

ನಿಫಾ ವೈರಸ್ (NiV), ಇದು ಹೊಸ ಕಾಯಿಲೆ ಏನೂ ಅಲ್ಲ. 1999 ರಲ್ಲಿ ಮಲೇಷಿಯಾ ರಾಷ್ಟ್ರದ "ಕಾಂಪುಂಗ್ ಸುಂಗಾಯ್ ನಿಫಾ" ಎನ್ನುವ ಊರಿನ ರೈತರಲ್ಲಿ ಮೊದಲ ಬಾರಿಗೆ ಕಂಡು ಬಂದಿತು. ಹಾಗಾಗಿ ಆ ಪ್ರದೇಶದ ಹೆಸರನ್ನೇ ಈ ಕಾಯಿಲೆಗೂ, ವೈರಸ್ ಗೂ ಇಟ್ಟಿದ್ದಾರೆ. ಹಂದಿಗಳಿಂದ ಹರಡಿದ ಕಾರಣ ಆ ಊರಿನಲ್ಲಿರುವ ಹತ್ತು ಲಕ್ಷ ಹಂದಿಗಳಿಗೆ ಮೋಕ್ಷವನ್ನು ಕೊಟ್ಟರು. ಇದರಿಂದಾಗಿ ಈವರೆಗೂ ಆ ದೇಶದಲ್ಲಿ ನಿಫಾ ವೈರಸ್ ಜ್ವರ ಬಂದೇ ಇಲ್ಲ. ಈಗ ಕೇರಳದಲ್ಲಿ ಕಾಣಿಸಿಕೊಂಡಿರುವ ನಿಫಾ ವೈರಸ್ ಹಣ್ಣುಗಳನ್ನು ತಿನ್ನುವ "ಫ್ರುಟ್ ಬ್ಯಾಟ್" ಅಥವಾ "ಬಾವಲಿ" ಗಳಿಂದ, ಹಾರುವ ನರಿ (flying fox) ಗಳಿಂದ ಹರಡಿದೆ ಎನ್ನುವುದು ಸದ್ಯದ ಮಾಹಿತಿ. ಹಂದಿ ಅಥವಾ ಬಾವಲಿಗಳಿಂದ ಬಿಟ್ಟು ಬೇರೆ ಪ್ರಾಣಿಗಳಿಂದ ಈ ವೈರಸ್ ಮನುಷ್ಯನಿಗೆ ಹರಡುವುದಿಲ್ಲವೆಂಬುದು ಸಮಾಧಾನದ ವಿಷಯ. ಭಾರತದಲ್ಲಿ ಈ ಹಿಂದೆಯೇ ನಿಫಾ ವೈರಸ್ ಜ್ವರ 2001 ಮತ್ತು 2007ರಲ್ಲಿ ಪಶ್ಚಿಮ ಬಂಗಾಳದಲ್ಲಿ ಕಾಣಿಸಿಕೊಂಡಿತ್ತು. ಇದು ಪಕ್ಕದ ಬಾಂಗ್ಲಾ ದೇಶದಿಂದ ಇಲ್ಲಿಗೆ ವಲಸೆ ಬಂದವರಿಂದ ಹರಡಿರಬಹುದು. ಬಾಂಗ್ಲಾ ಮತ್ತು ಪಶ್ಚಿಮ ಬಂಗಾಳಗಳಲ್ಲಿ ಫ್ರೂಟ್ ಬ್ಯಾಟ್ ಅಥವಾ ಹಣ್ಣು ತಿನ್ನುವ ಬಾವಲಿಗಳಿಂದ ಮನುಷ್ಯನಿಗೆ ಹರಡಿದೆ ಎನ್ನುವ ತೀರ್ಮಾನವಾಗಿತ್ತು.

ದಕ್ಷಿಣ ಏಷ್ಯಾ ರಾಷ್ಟ್ರಗಳಾದ ಮಲೇಷಿಯಾ, ಸಿಂಗಾಪೂರ್, ಕಾಂಬೋಡಿಯಾ, ಥಾಯ್ಲಾಂಡ್, ಇಂಡೋನೇಷಿಯಾ, ಫಿಲಿಫೈನ್ಸ್, ಬಾಂಗ್ಲಾ ದೇಶಗಳಲ್ಲಿ ಸಾಂಕ್ರಾಮಿಕವಾಗಿ ಕಾಣಿಸಿಕೊಂಡರೂ ಈ ವರೆಗೆ "ನಿಫಾ" ದಿಂದ ಸತ್ತವರ ಸಂಖ್ಯೆ ಇಡೀ ಪ್ರಪಂಚದಲ್ಲಿ 400 ಗಡಿ ದಾಟಿಲ್ಲ. ನಮ್ಮ ರಾಜ್ಯದಲ್ಲೇ ಒಂದು ವರ್ಷಕ್ಕೆ ಕಡಿಮೆ ಅಂದರೂ 10,000 ಜನರು ಅಫಘಾತಗಳಿಂದ ರಸ್ತೆಯ ಮೇಲೆ ಸಾಯುತ್ತಿದ್ದಾರೆ. ಪ್ರಕೃತಿ ನಿಯಮಗಳನ್ನು ಅಹಂಕಾರದಿಂದ ಉಲ್ಲಂಘಿಸಿದ ತಪ್ಪಿಗೆ ನಾವು ಇನ್ನೂ ಇಂತಹ ಹಲವು ಜಾತಿಯ ನಿಫಾ ವೈರಸ್ ಗಳನ್ನು ಎದುರಿಸಲೇಬೇಕು ಎನ್ನುವುದು ಕಟು ಸತ್ಯ. ನಾವು ಯಾವುದೇ ಕಾರಣದಿಂದ ಅಭಿವೃದ್ಧಿಯ ಉದ್ದೇಶದಿಂದ ಪರಿಸರಕ್ಕೆ ಹಾನಿ ಮಾಡಲು ಯತ್ನಿಸಿದರೆ ಪ್ರತ್ಯಕ್ಷ ಶಿಕ್ಷೆಯ ಬದಲು ಇಂತಹ ಮಾರಣಾಂತಿಕ ಕಾಯಿಲೆಯ ಮೂಲಕ ಪ್ರಕೃತಿ ಕೊಡುತ್ತಿರುತ್ತದೆ.



**ನಿಫಾ ಹರಡುವ ಕ್ರಮ :** ಮಲೇಷಿಯಾ ದೇಶದಲ್ಲಿ ಸೋಂಕು ತಗುಲಿದ ಹಂದಿಗಳ ಜೊಲ್ಲು, ಶ್ವಾಸನಾಳದ, ಶ್ವಾಸಕೋಶದ, ಮೂಗಿನ, ಗಂಟಲಿನ ದ್ರವ ಅಥವಾ ಮಾಂಸದಿಂದ ಹರಡಿದೆ. ಬಾಂಗ್ಲಾ ಮತ್ತು ನಮ್ಮ ದೇಶದಲ್ಲಿ ಹಣ್ಣು ತಿನ್ನುವ ಬಾವಲಿಗಳಿಂದ ಹರಡಿದೆ. ಬಾವಲಿ ತಿಂದು ಬಿಟ್ಟ ಹಣ್ಣು, ಅದರ ಮಲ–ಮೂತ್ರಗಳು ನಾವು ಕುಡಿಯುವ ನೀರು ಮತ್ತು ಆಹಾರಕ್ಕೆ ಸೇರಿದಾಗ ವೈರಸ್ ನಮ್ಮ ದೇಹವನ್ನು ಪ್ರವೇಶಿಸಿ ಕಾಯಿಲೆ ಬರುತ್ತದೆ. ಈ ವೈರಸ್ ಫ್ರೂಟ್ ಬ್ಯಾಟ್ ಗಳ ದೇಹದಲ್ಲಿ ಸದಾ ಕಾಲ ಇದ್ದರೂ ಅವು ಸಾಯುವುದಿಲ್ಲ. ಸೋಂಕು ತಗುಲಿದ ಬಾವಲಿಗಳ ದೇಹದಲ್ಲಿ ಯಾವುದೇ ಕಾಯಿಲೆಯ ಲಕ್ಷಣಗಳು ಕಂಡುಬರುವುದಿಲ್ಲ. ಒಂದು ಬಾವಲಿಯು ಮೂವತ್ತು ವರ್ಷಗಳ ಕಾಲ ಜೀವಿಸಬಹುದು ಮತ್ತು ಜೀವಿತ ಅವಧಿಯಲ್ಲಿ ಸಾವಿರಾರು ಕಿಲೋಮೀಟರ್ ಹಾರಬಹುದು. ಹಾಗಾಗಿ ವೈರಸ್ ಬಹಳಷ್ಟು ಪ್ರದೇಶಗಳಿಗೆ ಹರಡಬಹುದೆಂಬುದೇ ಆತಂಕದ ವಿಷಯ. ಗಾಳಿಯಿಂದ ಈ ವೈರಸ್ ಒಬ್ಬರಿಂದ ಒಬ್ಬರಿಗೆ ಹರಡುವುದಿಲ್ಲ. ಸೋಂಕಿಗೊಳಗಾದ ರೋಗಿಯ ಹತ್ತಿರದ ಸಾಂಗತ್ಯದಿಂದ, ಎಂಜಲು, ಮಲ–ಮೂತ್ರ, ಕಫಗಳಿಂದ ಹರಡುತ್ತದೆ.

**ಕಾಯಿಲೆಯ ಲಕ್ಷಣಗಳು :**

1] ಆರಂಭದಲ್ಲಿ ಮಾಮೂಲಿ ಫ್ಲೂ ಜ್ವರದ ಹಾಗೆ ನೆಗಡಿ, ಸೀತ, ಕೆಮ್ಮು, ತಲೆನೋವು, ಮೈ ಕೈ ನೋವು, ಗಂಟಲು ನೋವು, ವಾಂತಿ, ಸುಸ್ತು ಕಾಣಿಸಿಕೊಳ್ಳುವುದು.

2] ನಂತರ ಶ್ವಾಸಕೋಶದ ತೊಂದರೆಯಿಂದ ನ್ಯೂಮೋನಿಯ, ಉಸಿರಾಟದ ತೊಂದರೆ ಬರಬಹುದು

3] ಮೆದುಳಿನ ಸೊಂಕಿನಿಂದ ಪ್ರಜ್ಞೆ ಕಡಿಮೆ ಆಗುವುದು, ಅಪಸ್ಮಾರ (ಫಿಟ್ಸ್) ಬರುವುದು. ಕೋಮಾವಸ್ಥೆ ತಲುಪುವುದು. ಕೊನೆಗೆ ಮಾರಣಾಂತಿಕವಾಗಬಹುದು.

ವೈರಸ್ ದೇಹವನ್ನು ಪ್ರವೇಶಿದ ಎರಡರಿಂದ ಆರು ವಾರಗಳವರೆಗೆ ಕಾಯಿಲೆಯ ಯಾವುದೇ ಲಕ್ಷಣಗಳು ಕಾಣದೇ ಇರುವ ಸಾಧ್ಯತೆ ಇದೆ. ಸೋಂಕು ತಗುಲಿದವರಲ್ಲಿ ಶೇಕಡಾ 30–75 ರಷ್ಟು ರೋಗಿಗಳು ಸಾಯುವದು ಅಂಕಿ ಅಂಶಗಳಿಂದ ಧೃಡಪಟ್ಟಿದೆ.

**ಕಾಯಿಲೆಯನ್ನು ಕಂಡು ಹಿಡಿಯುವ ಪರೀಕ್ಷೆಗಳು:**

ಈಗಾಗಲೇ ಜನಸಾಮಾನ್ಯರಲ್ಲಿ ಮಾಧ್ಯಮಗಳ ಮೂಲಕ ಈ ಸೋಂಕಿನ ಭೀತಿ ಹುಟ್ಟಿರುವುದು ಸಾಮಾನ್ಯವಾಗಿದೆ. ಹೀಗಾಗಿ ಜ್ವರ ಬಂದವರೆಲ್ಲ ನಿಫಾ ವೈರಸ್ ಟೆಸ್ಟಿಗಾಗಿ ಆಸ್ಪತ್ರೆಗಳಲ್ಲಿ ಗಂಟೆಗಟ್ಟಲೆ ಸರತಿ ಸಾಲುಗಳಲ್ಲಿ ನಿಲ್ಲುವ ಅವಶ್ಯಕತೆ ಇಲ್ಲ. ನಿಫಾ ವೈರಸ್ ಟೆಸ್ಟಿಂಗ ಸೌಲಭ್ಯ ಸದ್ಯ ಪೂನಾದ ರಾಷ್ಟ್ರೀಯ ವೈರಾಲಜಿ ಕೇಂದ್ರದಲ್ಲಿ ಮಾತ್ರ ಇದೆ. ಒಂದು ಪರೀಕ್ಷೆಗೆ 5000 ರೂಪಾಯಿಗಳವರೆಗೆ ಖರ್ಚಾಗುತ್ತದೆ. ಆದ್ದರಿಂದ ಎಲ್ಲ ರೋಗಿಗಳಿಗೆ ಪರೀಕ್ಷೆ ಮಾಡುವುದು ಅಸಾಧ್ಯದ ಮಾತು. ಹಾಗಾಗಿ ಸದ್ಯಕ್ಕೆ ಕಾಯಿಲೆ ಹುಟ್ಟಿರುವ ಕೇರಳದ 4 ಜಿಲ್ಲೆಗಳಲ್ಲಿ ಮತ್ತು ಅಲ್ಲಿಂದ ವಲಸೆ ಬಂದ ವ್ಯಕ್ತಿಗಳಲ್ಲಿ ಈ ಲಕ್ಷಣಗಳು ಕಾಣಿಸಿಕೊಂಡರೆ, ವೈದ್ಯರ ಸಲಹೆಗಳ ಮೇರೆಗೆ ಈ ಪರೀಕ್ಷೆಯನ್ನು ಮಾಡಿಸಬಹುದು. ಸದ್ಯಕ್ಕೆ ELISA, RT-PCR, CULTURE ಪರೀಕ್ಷೆಗಳಿಂದ ವೈರಸ್ ಸೋಂಕನ್ನು ಧೃಡಪಡಿಸಬಹುದು.

ರಕ್ತದ ಸ್ಯಾಂಪಲ್ ಅಥವಾ ಗಂಟಲಿನ ಸ್ವಾಬ್ ಮಾದರಿಗಳನ್ನು ಪೂನಾಕ್ಕೆ ಕಳುಹಿಸಿ ಮರಳಿ ಫಲಿತಾಂಶಗಳನ್ನು ಪಡೆಯಲು ತುಂಬಾ ತಡವಾಗುತ್ತದೆ. ಈ ಕಾರಣಕ್ಕಾಗಿ ನ್ಯಾಷನನಲ್ ಇನ್ಸ್ಟಿಟ್ಯೂಟ್ ಆಫ್ ವೈರಾಲಜಿಯು ಕೇರಳದ ಕೋಳಿಕ್ಕೋಡ್ ಎಂಬಲ್ಲಿ ಮೊಬೈಲ್ ಪ್ರಯೋಗ ಶಾಲೆಯೊಂದನ್ನು ತೆರೆದಿದೆ.

**ಚಿಕಿತ್ಸಾ ಕ್ರಮ :**

ಬಹುತೇಕ ವೈರಸ್ ಕಾಯಿಲೆಗಳಂತೆ ನಿಫಾ ವೈರಸ್ ಗೆ ನಿರ್ಧಿಷ್ಟವಾದ ಔಷಧಗಳು ಇರುವುದಿಲ್ಲ. "ರಿಬಾವರಿನ್" ಎಂಬ ಮಾತ್ರೆಗಳ ರೂಪದಲ್ಲಿ ಉಪಯೋಗಿಸುವ ಪ್ರಯತ್ನಗಳು ನಡೆದಿವೆ. ಎಲ್ಲಾ ರೀತಿಯ ಜ್ವರಗಳಿಗೆ ನೀಡುವ ಮಾಮೂಲಿ ಚಿಕಿತ್ಸೆಯ ಜೊತೆಗೆ ಫಿಟ್ಸ್, ಉಸಿರಾಟದ ತೊಂದರೆ, ಮೆದುಳು ಜ್ವರ ಇತ್ಯಾದಿಗಳು ಕಂಡುಬಂದರೆ ತೀವ್ರ ನಿಗಾ ಘಟಕದಲ್ಲಿ ಮಾಡಬೇಕಾಗಬಹುದು. ಉಸಿರಾಟದ ತೊಂದರೆಗೆ ವೆಂಟಿಲೇಟರ್ ಚಿಕಿತ್ಸೆ ಬೇಕಾಗಬಹುದು. ಸದ್ಯಕ್ಕೆ ವೈರಸ್ ಪ್ರತಿರೋಧಕವಾಗಿ "ಮನೋಕ್ಲೋನಲ್ ಆಂಟಿಬಾಡಿ" ಚಿಕಿತ್ಸೆಯ ಪ್ರಯೋಗಗಳು ನಡೆದಿವೆ.

**ಕಾಯಿಲೆ ತಡೆಗಟ್ಟುವ ಕ್ರಮ :**

ವೈರಸ್ ಸೋಂಕಿತ ಬಾವಲಿಗಳ ಸಂಪರ್ಕ ಹೊಂದಿದ ಹಣ್ಣು, ನೀರು ಮತ್ತು ಆಹಾರಗಳಿಂದ ಮನುಷ್ಯನಿಗೆ ಸೋಂಕು ತಗಲುವ ಸಾಧ್ಯತೆ ಹೆಚ್ಚಾಗಿರುವುದರಿಂದ ನಾವು ಸದಾ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸುವುದು ಅಗತ್ಯವಾಗಿದೆ. ಸ್ವಚ್ಛತೆಯ ಕಡೆಗೆ ಗಂಭೀರವಾಗಿ ಗಮನ ನೀಡಬೇಕು. ತೆರೆದ ಬಾವಿಗಳ ನೀರನ್ನು ಉಪಯೋಗಿಸುವ ಅನಿವಾರ್ಯತೆ ಇದ್ದರೆ ಚನ್ನಾಗಿ ಕುದಿಸಿ ನೀರನ್ನು ಉಪಯೋಗಿಸಬೇಕು. ಬಾವಲಿಗಳು ಇರುವ ಪ್ರದೇಶದಿಂದ ನೆಲಕ್ಕೆ ಬಿದ್ದ ನೇರಳೆ, ಸೀಬೆ, ಮಾವು, ಬಾಳೆ, ಗೇರು ಹಣ್ಣುಗಳನ್ನು ತಿನ್ನಬಾರದು. ಗಿಡ ಮರಗಳಿಂದ ಕೊಯ್ದು ತಂದ ಹಣ್ಣುಗಳನ್ನು ಚನ್ನಾಗಿ ತೊಳೆದು ಸಿಪ್ಪೆ ತೆಗೆದು ಸೇವಿಸಬೇಕು. ಕೇರಳದಲ್ಲಿ ತಾಳೆ

ಮರಗಳಿಂದ "ನೀರಾ" ತೆಗೆಯುವ ಪದ್ಧತಿ ರೂಢಿಯಲ್ಲಿದೆ. ಬಾವಲಿಗಳಿಗೆ ಅದು ಬಹಳ ಇಷ್ಟವಾದ ಪೇಯ. ಅದನ್ನು ಕುಡಿಯುವದಕ್ಕಾಗಿ ಮರಗಳಿಗೆ ಕಟ್ಟಿದ "ನೀರಾ" ಕುಡಿಕೆಗೆ ಬಾವಲಿಗಳ ದಂಡು ಮುಗಿಬೀಳುತ್ತದೆ. ಇಂತಹ ಸಮಯದಲ್ಲಿ ಅವುಗಳ ಎಂಜಲು, ಹಿಕ್ಕೆ ಮುಂತಾದವು "ನೀರಾ" ದಲ್ಲಿ ಸೇರಿಕೊಳ್ಳುವ ಸಾಧ್ಯತೆ ಹೆಚ್ಚು. ಆದ್ದರಿಂದ ನೀರಾ ಸೇವನೆಯನ್ನು ನಿಲ್ಲಿಸಿವುದು ಒಳ್ಳೆಯದು. ಸದ್ಯದ ಪರಿಸ್ಥಿತಿಯಲ್ಲಿ ಕೇರಳ ರಾಜ್ಯದ ಕೊಯಿಕ್ಕೊಡ್, ಮಲ್ಲಪುರಂ, ಕಣ್ಣೂರ್, ಮಯ್ಯಾಡ್ ಜಿಲ್ಲೆಗಳಿಗೆ ಪ್ರವಾಸ ಮಾಡದೇ ಇರುವುದು ಸೂಕ್ತ.



**ಮನುಷ್ಯನಿಂದ ವೈರಸ್ ಹರಡುವ ಕ್ರಮ:**

ಗಾಳಿಯ ಮೂಲಕ ಈ ವೈರಸ್ ಹರಡುವುದಿಲ್ಲ ಎನ್ನುವುದು ಒಂದು ವರದಾನವಾಗಿದೆ. ಸೋಂಕು ತಗುಲಿದ ವ್ಯಕ್ತಿಯ ತೀರಾ ಸಾಂಗತ್ಯದಲ್ಲಿ ಇರುವುದನ್ನು ತಪ್ಪಿಸಬೇಕು. ಸೋಂಕು ಇರುವ ಅಥವಾ ಈ ಲಕ್ಷಣ ಇರುವ ರೋಗಿಗಳಿಗೆ ಮುಖಕ್ಕೆ ಮಾಸ್ಕ್, ಕೈ ಗ್ಲೌಸ್, ಗೌನ್ ಇತ್ಯಾದಿಗಳನ್ನು ಕಡ್ಡಾಯವಾಗಿ ಧರಿಸಿ ಚಿಕಿತ್ಸೆಯನ್ನು ನೀಡಬೇಕು. ಸೋಂಕು ತಗುಲಿದ ರೋಗಿಯ ಎಂಜಲು, ಕಫ, ಮಲ-ಮೂತ್ರ, ರಕ್ತ ಯಾವುದೇ ಕಾರಣಕ್ಕೂ ಆರೈಕೆ ಮಾಡುವವರ ದೇಹಕ್ಕೆ ತಗುಲದಂತೆ ವಿಲೇವಾರಿ ಮಾಡುವ ವ್ಯವಸ್ಥೆ ಇರಬೇಕು.

**ಬಾವಲಿಗಳ ಭವಿಷ್ಯದ ಕಾಳಜಿ:**

ನಮಗೆಲ್ಲರಿಗೂ ಜ್ಞಾನ, ವಿಜ್ಞಾನದ ಶಕ್ತಿಯಿಂದ ಬದುಕುವ ಅಹಂಕಾರವಿದೆ. ಬಾವಲಿಗಳ ಭವಿಷ್ಯದ ಕಾಳಜಿ ಯಾರಿಗೆ ಬೇಕು? ಪ್ರಪಂಚದಲ್ಲಿ 1200 ಪ್ರಭೇದಗಳ ಬಾವಲಿಗಳಿವೆ. ಅವುಗಳಲ್ಲಿ ಕೇವಲ ಸೊಳ್ಳೆಗಳನ್ನು ತಿಂದು ಬದುಕುವ, ಪ್ರಾಣಿಗಳ ರಕ್ತ ಹೀರಿ ಬದುಕುವ, ಹಣ್ಣುಗಳನ್ನೇ ತಿಂದು ಬದುಕುವ ಹೀಗೆ ತರಾವರಿ ಪ್ರಭೇದಗಳನ್ನು ದೇವರು ಪ್ರಕೃತಿಯಲ್ಲಿ ಸೃಷ್ಟಿ ಮಾಡಿದ್ದಾನೆ. ಜೀವಜಗತ್ತಿನ ಹೊಂದಾಣಿಕೆಯ ವಿಸ್ಮಯ ನಮಗಿನ್ನೂ ಗೊತ್ತಿಲ್ಲ. ಬಾವಲಿಗಳು ಎಷ್ಟೋ ಜಾತಿಯ ಗಿಡ-ಮರಗಳ ಉಳಿವಿಗೆ, ಬೀಜ ಪ್ರಸರಣದಿಂದ ಸಸ್ಯಾಭಿವೃದ್ಧಿಗೆ ಕಾರಣ ಎನ್ನುವುದು ನಮಗೆಷ್ಟು ಗೊತ್ತು? ಪರಾಗಸ್ಪರ್ಶ ಮತ್ತು ಬೀಜ ಪ್ರಸರಣ ಮಾಡುವ ಬಾವಲಿಗಳು ನಮಗೆ ಯಾವುದೇ ರೀತಿಯ ತೊಂದರೆ ಕೊಡುವುದಿಲ್ಲ. ಅವುಗಳು ವಾಸಿಸುವ ಪ್ರದೇಶವನ್ನು ನಾವು ಅತಿಕ್ರಮಣ ಮಾಡುತ್ತ ನಾವೇ ಅವುಗಳಿಗೆ ತೊಂದರೆ ಕೊಡುತ್ತಿದ್ದೇವೆ. ನಮ್ಮ ದುರಾಸೆಗಳಿಂದ ನಾವೇ ಸಂಕಷ್ಟದಲ್ಲಿ ಸಿಲುಕಿಸಿಕೊಳ್ಳುತ್ತಿದ್ದೇವೆ. ಹೀಗಾಗಿ ಪ್ರಕೃತಿ ಕಾಲ ಕಾಲಕ್ಕೆ ಈ ರೀತಿಯ ಶಿಕ್ಷೆ ನೀಡುತ್ತ ಜೀವನದ ಪಾಠಗಳನ್ನು ಕಲಿಸುತ್ತಿದೆ.

ಕರೋನಾ ವೈರಾಣುವಿನ ಸೋಂಕಿನ ಗಂಭೀರವಾದ ಕಾಲದಲ್ಲಿ ನಾವು ಮಾಡಿಕೊಂಡ ಎಡವಟ್ಟುಗಳು ಪುನರಾವರ್ತನೆ ಆಗಬಾರದು. ನಾವುಗಳು ಬಹಳ ಜಾವಾಬ್ದಾರಿಯಿಂದ ವ್ಯವಹರಿಸಬೇಕು. ಜೊತೆಗೆ ನಿಫಾ ವೈರಸ್ ಸೋಂಕಿನ ಬಗೆಗೆ ಪ್ರಾಥಮಿಕ ಮಾಹಿತಿಯನ್ನಾದರೂ ಪಡೆದಿರಬೇಕು. ಮಾಧ್ಯಮಗಳು ಹಾಗೂ ಸಾಮಾಜಿಕ ಜಾಲ ತಾಣಗಳಲ್ಲಿ ಹರಡುವ ರೋಚಕ ಸುದ್ದಿಗಳ ಸತ್ಯಾಸತ್ಯತೆಗಳ ಅರಿವು ಇರಬೇಕು. ನಿಫಾ ಅಥವಾ ಇನ್ನಾವುದೇ ಕಾಯಿಲೆ ಆಗಲಿ, ಅವುಗಳನ್ನು ನಿರ್ಮೂಲನ ಮಾಡಲು ಸಾಧ್ಯವಿಲ್ಲ. ಕಾಲ ಕ್ರಮೇಣ ಈ ವೈರಸ್ ಗಳು ಬಣ್ಣ ಬದಲಿಸಬಹುದು. ಆರೋಗ್ಯದ ಮೇಲೆ ಹಲವಾರು ದುಷ್ಪರಿಣಾಮಗಳನ್ನು ಉಂಟು ಮಾಡಬಹುದು. ಕೊನೆಗೆ ಮಾರಣಾಂತಿಕವೂ ಆಗಬಹುದು. ಇಂತಹ ಸಂದರ್ಭಗಳಲ್ಲಿ ಸೋಂಕು ಹರಡುವ ಕ್ರಿಯೆಯನ್ನು ನಿಯಂತ್ರಣದಲ್ಲಿ ಇರಿಸಬೇಕಾದುದು ಪ್ರತಿಯೊಬ್ಬ ನಾಗರೀಕನ ಗುರುತರ ಜವಾಬ್ದಾರಿಯಾಗಿದೆ.



ವೈದ್ಯೇತರ

# ಶಿಕ್ಷಣ ಹೇಗಿರಬೇಕು?

**ಡಾ. ಶ್ರೀನಿವಾಸ ಹರಪನಹಳ್ಳಿ**
ಅರಿವಳಿಕೆ ತಜ್ಞರು, ತತ್ವದರ್ಶ ಆಸ್ಪತ್ರೆ
ಹುಬ್ಬಳ್ಳಿ, 9886236300



**ಡಾ. ವಿನಯ ಶ್ರೀನಿವಾಸ್**
ವಿಭಾಗೀಯ ಸಂಪಾದಕರು, ಶಿವಮೊಗ್ಗ

ಶಿಕ್ಷಣದ ಮಹತ್ವ ನಮಗೆಲ್ಲ ಗೊತ್ತೇ ಇದೆ. ಸಮಾಜದಲ್ಲಿಶಿಕ್ಷಿತರ ಸಂಖ್ಯೆ ಹೆಚ್ಚಾದಷ್ಟೂ ಸಮಾಜ ಏರುಗತಿಯಲ್ಲಿಸಾಗುತ್ತದೆ. ಜನರ ಬೌದ್ಧಿಕಮಟ್ಟ ಹೆಚ್ಚಾದಂತೆ ಅವರ ವಿಚಾರಗಳು, ಕಾರ್ಯವೈಖರಿಯಲ್ಲೂ ಬದಲಾವಣೆಗಳು ಕಂಡುಬರುತ್ತವೆ. ಇದರ ಪರಿಣಾಮವಾಗಿ ಸಮಾಜದಲ್ಲೂ ಸುಧಾರಣೆ ಕಂಡುಬರುತ್ತದೆ. ಶಿಕ್ಷಣವು ಸಮಾಜದ ಏಳಿಗೆಗೆ ಹೇಗೆ ಕಾರಣವಾಗುತ್ತದೆಯೋ ಅದೇರೀತಿ ಸಮಾಜವೂ ಶಿಕ್ಷಣದ ದಿಕ್ಕನ್ನುನಿರ್ದೇಶಿಸುತ್ತದೆ. ಒಟ್ಟಿನಲ್ಲಿಒಂದಿಲ್ಲದೇಇನ್ನೊಂದಿಲ್ಲ.

ನಮಗೆಂಥ ಶಿಕ್ಷಣ ಬೇಕು ಎಂದು ಆಲೋಚಿಸುವುದು ನಮಗೆಂಥ ಸಮಾಜ ಬೇಕು ಎಂಬುದರ ಆಧಾರದ ಮೇಲೆಯೇ. ಸಧೃಡ ಸಮಾಜದ ನಿರ್ಮಾಣಕ್ಕೆ ಬೇಕಾಗಿರುವುದು ಸುಶಿಕ್ಷಿತರ ಬೆಂಬಲ. ಶಿಕ್ಷಣವೆಂದರೆ ಮನುಷ್ಯನಲ್ಲಿ ಅಡಗಿರುವ ಪರಿಪೂರ್ಣತೆಯನ್ನು ಹೊರತೆಗೆದು ಪುಟಕ್ಕಿಟ್ಟ ಚಿನ್ನದಂತೆ ಪ್ರಜ್ವಲಿಸುವಂತೆ ಮಾಡುವುದೇ ಆಗಿದೆ. ನಿಜವಾದ ಶಿಕ್ಷಣಮಾನವನನ್ನು ಹೆಚ್ಚುಹೆಚ್ಚು ಪರಿಪೂರ್ಣತೆಯ ಕಡೆಗೆ ಚಲಿಸುವಂತೆಮಾಡುತ್ತದೆ. ಆತ ಹೆಚ್ಚು ಕರುಣಾಮಯಿಯೂ, ಹೆಚ್ಚು ಪ್ರಾಮಾಣಿಕನಾಗಿಯೂ ಇರುವಂತೆ ಮತ್ತು ಹೆಚ್ಚು ವಿವೇಚನೆಯಿಂದವರ್ತಿಸುವಂತೆ ನೋಡಿಕೊಳ್ಳುತ್ತದೆ. ಮಾನವ ಮೊದಲೇ ಸಂಘಜೀವಿ. ಹೊಂದಿಕೊಳ್ಳುವಿಕೆ, ಗೌರವಿಸುವಿಕೆ ಹಾಗೂ ಪ್ರೋತ್ಸಾಹಿಸುವ ಮಾನಸಿಕ ಸ್ಥಿತಿ ಬಹುತೇಕರಿಗೆ ಸ್ವಾಭಾವಿಕವಾಗೇ ಬಂದಿರುತ್ತದೆ. ಕೆಲವರು ಕಾಲಕ್ರಮೇಣವಾಗಿ ಕಲಿಯುತ್ತಾರೆ.

ಹಾಗಾದರೆ ನಮಗೆ ಈ ನಿಜವಾದ ಶಿಕ್ಷಣ ಹೇಗೆ ದೊರೆಯುವುದು? ನಮಗೆ ಸಿಕ್ಕ ಶಿಕ್ಷಣ ನಿಜವಾಗಿಯೂ ಶಿಕ್ಷಣವೇ ಅಥವಾ ಶಿಕ್ಷಣದ ಹೆಸರಿನಲ್ಲಿ ನಾವು ಗಿಟ್ಟಿಸಿದ ಸರ್ಟಿಫಿಕೇಟುಗಳೇ ಎಂಬುದನ್ನು ನಾವು ಅವಲೋಕನ ಮಾಡಿಕೊಳ್ಳುವುದು ಉತ್ತಮ. ಶಾಲಾ–ಕಾಲೇಜುಗಳಲ್ಲಿ ಶಿಕ್ಷಣ ಮುಗಿಸಿ ಜೀವನ ನಡೆಸುತ್ತಿರುವಕೋಟ್ಯಂತರ ಜನರು ದೇಶದ ಎಲ್ಲ ಕಡೆಯೂ ಇದ್ದಾರೆ. ಹಾಗಂತ ನಮ್ಮ ದೇಶ ಸುಧಾರಿತ ಸಮಾಜವಾಗಿದೆಯೇ? ಜಾಗತಿಕ ಸೂಚ್ಯಂಕಗಳ ಪ್ರಕಾರ ನಮ್ಮ ದೇಶ ಇನ್ನೂ ಅಭಿವೃದ್ಧಿಹೊಂದುತ್ತಿರುವ ದೇಶ. ಇದಕ್ಕೆ ಮುಖ್ಯಕಾರಣ ನಮ್ಮ ಜನರ ಮನಸ್ಥಿತಿಯೇ ಎಂದರೆ ತಪ್ಪಾಗಲಾರದು. ಶಾಲಾ–ಕಾಲೇಜುಗಳಲ್ಲಿ ಕಲಿತು





ಡಿಗ್ರಿ ಗಳಿಸಿದ ತಕ್ಷಣ ಜನರು ಸುಧಾರಿಸಿ ಬಿಟ್ಟರುಎನ್ನಲಾಗದು. ಹೆಚ್ಚೆಂದರೆ ಅವರು ಸಾಕ್ಷರರಾದರು ಅಷ್ಟೇ. ಓದುವುದನ್ನು–ಬರೆಯುವುದನ್ನು, ಭಾಗಿಸುವುದನ್ನು–ಗುಣಿಸುವುದನ್ನು, ಕಲಿತ ಮಾತ್ರಕ್ಕೆ ಸುಶಿಕ್ಷಿತರಾಗಲು ಸಾಧ್ಯವಿಲ್ಲ. ಆ ತರಹದ ಶಿಕ್ಷಣ ನಮ್ಮನ್ನು ಓರ್ವ ಕುಶಲ ಕೆಲಸಗಾರನನ್ನಾಗಿ ಮಾಡಬಹುದೇ ಹೊರತು ಸುಶಿಕ್ಷಿತಮಾನವನನ್ನಾಗಿ ಅಲ್ಲ.

ಈ ಮೊದಲೇ ಹೇಳಿದಂತೆ, ನಿಜವಾದ ಶಿಕ್ಷಣ ನಮ್ಮಲ್ಲಿಅರಿವನ್ನೂ, ವಿವೇಚನೆಯನ್ನೂಮೂಡಿಸುತ್ತದೆ. ಆರೋಗ್ಯಯುತವಾದ ಯೋಚನೆಗಳ ಸರಪಣಿಗೆ ನಾಂದಿ ಹಾಡಿ ಸೌಹಾರ್ದ ಮನೋಭಾವನೆಯನ್ನು ಬೆಳೆಸಲು ಸಹಕರಿಸುತ್ತದೆ. ಇದರ ಮುಂದೆ ಕೇವಲಸಾಕ್ಷರರನ್ನಾಗಿ ಮಾಡುವ ಡಿಗ್ರಿ ಶಿಕ್ಷಣ ನಗಣ್ಯ. ಒಬ್ಬ ಮನುಷ್ಯ ರೇಖಾಗಣಿತದ ಕ್ಲಿಷ್ಟಕರ ಸಮಸ್ಯೆಯೊಂದನ್ನು ಬಿಡಿಸಿ ಕೋನ–ಪರಿಧಿಗಳನ್ನು ಕಂಡುಹಿಡಿಯಬಲ್ಲ. ಆದರೆ ತನ್ನ ಜೀವನದ ಸಮಸ್ಯೆಗಳಿಗೇ ಪರಿಹಾರ ಕಂಡುಕೊಳ್ಳದೇಆತ ವಿಲವಿಲಒದ್ದಾಡಿದರೆ ಏನು ಪ್ರಯೋಜನ? ಆತ ತಾನೇ ಹಾಕಿಕೊಂಡ ಪರಿಧಿಯಿಂದ ಹೊರಬಂದು ಹೊಸದೊಂದು ದೃಷ್ಟಿಕೋನದಿಂದ ತನ್ನ ಸಮಸ್ಯೆಯನ್ನು ನೋಡಿದರೆ ಪರಿಹಾರವೂ ಕಂಡೀತು.ನಮ್ಮಲ್ಲಿ ಕೆಲವರು ತಮ್ಮ–ತಮ್ಮ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆ ಮಾಡಿದರೂ ವೈಯುಕ್ತಿಕವಾಗಿ ಅಸಮಾಧಾನ, ಮತ್ಸರ ಅಥವಾ ಹತಾಶೆಯಂತಹ ಋಣಾತ್ಮಕ ಭಾವನೆಗಳಿಗೆ ದಾಸರಾಗಿಬಿಟ್ಟಿರುತ್ತಾರೆ. ನಿಜವಾದ ಶಿಕ್ಷಣದಲಾಭವನ್ನು ಈ ಜನ ಪಡೆದಿದ್ದೇ ಕಡಿಮೆ.

ಇನ್ನೂ ಅನೇಕ ಉದಾಹರಣೆಗಳನ್ನು ನಾವು ದಿನನಿತ್ಯದಬದುಕಿನಲ್ಲಿಕಾಣಬಹುದು. ಕೆಲವರು 'ಇಲ್ಲಿ ಕಸಚೆಲ್ಲಬೇಡಿ' ಎಂಬ ಗೋಡೆಬರಹವನ್ನು ಚೆನ್ನಾಗೇ ಓದುತ್ತಾರೆ. ಆದರೆ ಅದರ ಕೆಳಗೇ ಕಸ ಎಸೆದು ಮುಂದೆ ಸಾಗುತ್ತಾರೆ. ಇವರನ್ನು ಸುಶಿಕ್ಷಿತರು ಎಂದು ಕರೆಯಬೇಕೆ ಅಥವಾ ಬರಿ ಸಾಕ್ಷರರು ಎನ್ನಬೇಕೇ? ಟ್ರಾಫಿಕ್ ಸಿಗ್ನಲ್ ನಿರ್ಲಕ್ಷಿಸುವವರು, ಮಕ್ಕಳು, ವೃದ್ಧರಿಗೆ ಜಾಗಮಾಡಿ ಕೊಡದವರು, ಸಾರ್ವಜನಿಕ ಸ್ಥಳಗಳಲ್ಲಿ ಸುತ್ತಮುತ್ತಲಿನವರಿಗೆ ಕಿರಿಕಿರಿಯಾಗುವಂತೆ ಫೋನಿನಲ್ಲಿ ಕಿರಿಚಾಡುವವರು ಕೂಡ ಇದೇ ಲಿಸ್ಟಿಗೆಸೇರುತ್ತಾರೆ. ಇಂತಹ ಅಶಿಕ್ಷಿತ ಸಾಕ್ಷರರು ಎಲ್ಲಿಯವರೆಗೂ ಇರುತ್ತಾರೋ ಅಲ್ಲಿಯವರೆಗೂ ಸಮಾಜದಲ್ಲಿ ಸುಧಾರಣೆ ಕಂಡುಬರುವುದು ಅಸಂಭವ.



ಅನೇಕ ಮುಂದುವರೆದ ದೇಶಗಳ ಶೈಕ್ಷಣಿಕ ಬೋಧನಾ ಕ್ರಮದಲ್ಲಿ ಸಾಕ್ಷರತೆಯ ಜೊತೆ ಮಕ್ಕಳು ಸಮಾಜದಲ್ಲಿ ಹೇಗೆ ಬದುಕಬೇಕೆಂಬುದನ್ನೂ

ಹೇಳಿಕೊಡುತ್ತಾರೆ. ಸ್ವಚ್ಛತೆ, ಪೌರಕರ್ತವ್ಯಗಳು ಹಾಗೂ ಪರಂಪರೆಯ ಸಂರಕ್ಷಣೆ ಬಗ್ಗೆಯೇ ಅಲ್ಲಿ ಹೆಚ್ಚು ಒತ್ತು ಕೊಡುತ್ತಾರೆ. ಹಾಗಾಗಿ ಅಲ್ಲಿನ ಜನರಲ್ಲಿ ಚಿಕ್ಕಂದಿನಿಂದಲೇವಿನಯವಂತರಾಗಿ ಬದುಕುವ,ಇತರರನ್ನು ಗೌರವಿಸುವಮತ್ತು ತಮ್ಮ ಸುತ್ತಮುತ್ತಲಿನಪರಿಸರವನ್ನು ಸಂರಕ್ಷಿಸುವಗುಣಗಳು ಕಂಡುಬರುತ್ತವೆ. ಯಾವಾಗ ಈ ಗುಣಗಳು ಜನರ ಜೀವನ ಪದ್ಧತಿಯಲ್ಲಿ ಸ್ವಾಭಾವಿಕವಾಗೇ ವ್ಯಕ್ತವಾಗುತ್ತವೆಯೋ ಆಗ ಆ ಜನರಿಗೆ ಅವುಗಳನ್ನು ಪದೇಪದೇ ನೆನಪಿಸುವಅವಶ್ಯಕತೆ ಬೀಳುವುದಿಲ್ಲ. ಸದ್ಯಕ್ಕೆ ನಮ್ಮದೇಶದಲ್ಲಿಆಗಬೇಕಿರುವದು ಈ ತರಹದ ಶೈಕ್ಷಣಿಕ ಕ್ರಾಂತಿ.

ಹಾಗಂತ ನಮ್ಮದೇಶದಲ್ಲಿ ಈ ಒಳ್ಳೆಯ ಗುಣಗಳು ಇಲ್ಲವೇ ಇಲ್ಲ ಎಂದು ಹೇಳಲಾಗುವುದಿಲ್ಲ. ನಮ್ಮ ಸನಾತನ ಸಂಸ್ಕೃತಿಯು ಪ್ರಾಚೀನ ಕಾಲದಿಂದಲೂ ಇದೇ ಅಂಶಗಳನ್ನು ಪ್ರತಿಪಾದಿಸುತ್ತ ಬಂದಿದೆ. ಆದರೆ ಈ ನಡುವೆನಾವೆಲ್ಲೋ ಇತರರ ಪ್ರಭಾವದಿಂದಲೋ ಅಥವಾ ಅಂಧಾನು ಕರಣೆಯಿಂದಲೋ ಕೊಂಚಮಟ್ಟಿಗೆ ಹಾದಿತಪ್ಪಿದ್ದೇವೆ ಎನ್ನಬಹುದು. ಜೊತೆಗೆ ನಾವು ಶಿಕ್ಷಣದ ಮೌಲ್ಯವನ್ನು ಅರಿಯುವುದರ ಬದಲು ಅಲ್ಲಿ ದೊರಕುವ ಮಾರ್ಕುಗಳ ಬಗ್ಗೆ ಹೆಚ್ಚು ತಲೆಕೆಡಿಸಿಕೊಡಿರುತ್ತೇವೆ. ಒಬ್ಬ ವ್ಯಕ್ತಿಯು ಜೀವನದ ಮೌಲ್ಯಗಳನ್ನು ಎಷ್ಟು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾನೆ ಎಂದು ಪರೀಕ್ಷಿಸುವ ಮೊದಲೇ ಆತ ಎಷ್ಟು ಅಂಕಗಳನ್ನು ಗಳಿಸಿದ್ದಾನೆ, ಎಷ್ಟು ಜನರ ಶಿಫಾರಸು ಪತ್ರಗಳನ್ನ ತಂದಿದ್ದಾನೆ ಅಥವಾ ಯಾವುದಾದರೂ ಜಾತಿ–ಮತ–ಪಕ್ಷದ ಬೆಂಬಲ ಇದೆಯೇ ಎಂದು ನಾವು ನೋಡುತ್ತೇವೆ. ಹೀಗಾಗಿ ನಾವು ಶಿಕ್ಷಣವನ್ನು ವ್ಯಾಪಾರದ ಸರಕಾಗಿ ಪರಿವರ್ತಿಸಿಬಿಟ್ಟಿದ್ದೇವೆ.

ಈಗಲಾದರೂ ನಮ್ಮ ಜನರು ಮತ್ತು ಸರಕಾರಗಳು ಎಚ್ಚೆತ್ತುಕೊಳ್ಳಬೇಕು. ಜೊತೆಗೆ ಪ್ರಾಜ್ಞರು, ಚಿಂತಕರು ಮತ್ತುಮಾರ್ಗದರ್ಶಕರು ತಮ್ಮ ಪಾಂಡಿತ್ಯ ಮತ್ತು ಅನುಭವವನ್ನು ಧಾರೆಯೆರೆದು ಮೌಲ್ಯಯುತ ಶಿಕ್ಷಣಕ್ಕೆ ನಾಂದಿ ಹಾಡಬೇಕು.ನಮ್ಮ ದೇಶ ಸಾವಿರ ವರ್ಷಗಳಿಂದ ಪರಕೀಯರ ದಾಳಿಗೊಳಗಾಗಿಯೂ ತನ್ನ ಅಸ್ಮಿತೆಯನ್ನು ಉಳಿಸಿಕೊಂಡಿದ್ದರೆ ಅದಕ್ಕೆ ನಮ್ಮ ಪೂರ್ವಜರು ಹಾಕಿಟ್ಟ ಸಾಂಸ್ಕೃತಿಕ ಅಡಿಪಾಯವೇ ಕಾರಣ. ಗಾಂಧಿ, ಬುದ್ಧ ವಿವೇಕಾನಂದರರಂತಹ ಮಹಾಮಹಿಮರು ಜನಿಸಿದ ಈ ದೇಶದಲ್ಲಿ ಗುರುಗಳಿಗೇನೂ ಕೊರತೆಯಿಲ್ಲ. ಕೊರತೆಯಿರುವುದು ಗುರಿಯಲ್ಲಿ. ಆದ್ದರಿಂದ ಮೌಲ್ಯಯುತ ಶಿಕ್ಷಣದ ಮೂಲಕ ಸದೃಢ ಸಮಾಜದ ನಿರ್ಮಾಣವೇ ನಮ್ಮೆಲ್ಲರ ಗುರಿಯಾಗಬೇಕು. ಇಂದಿನ ಮಕ್ಕಳೇ ನಾಳಿನ ಪ್ರಜೆಗಳೆನ್ನುವುದನ್ನು ನಾವು ಮರೆಯಬಾರದು. ಹಾಗಾಗಿ ಅವರ ಸುಂದರ ನಾಳೆಗಾಗಿ ನಾವು ಇಂದೇ ಭದ್ರ ಬುನಾದಿಯನ್ನು ಹಾಕಬೇಕು. ○



**2023 ನೇ ಸಾಲಿನ ಕರ್ನಾಟಕ**

**ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ**

**ಡಾ ಸಿ ರಾಮಚಂದ್ರ**

**ಮಾಜಿ ನಿರ್ದೇಶಕರು,**
**ಕಿದ್ವಾಯಿ ಸ್ಮಾರಕ ಅರ್ಬುದ ರೋಗ ಸಂಸ್ಥೆ,**
**ಬೆಂಗಳೂರು**

**ಇವರಿಗೆ ಹಾರ್ದಿಕ ಶುಭಾಶಯಗಳು**



ಭಾರತೀಯ ವೈದ್ಯಕೀಯ ಸಂಘ
ಕರ್ನಾಟಕ ರಾಜ್ಯ ಶಾಖೆಯ ಪ್ರಪ್ರಥಮ

**ಜೀವಮಾನ ಸಾಧನೆ ಪ್ರಶಸ್ತಿಗೆ** ಭಾಜನರಾದ

**ಡಾ ವೈ.ಸಿ. ಯೋಗಾನಂದ ರೆಡ್ಡಿ,** ಬಳ್ಳಾರಿ
ಇವರಿಗೆ

**ಹಾರ್ದಿಕ ಅಭಿನಂದನೆಗಳು**



ವೈದ್ಯೇತರ...

# ಆ ಹುಡುಗ

**ಡಾ ಜಯಲಕ್ಷ್ಮಿ ನಾಯಕ್**
ಮಕ್ಕಳ ತಜ್ಞೆ
ಶಿವಮೊಗ್ಗ.



**ಡಾ. ವಿನಯ ಶ್ರೀನಿವಾಸ್**
ವಿಭಾಗೀಯ ಸಂಪಾದಕರು

ಅಂದು ರಾತ್ರಿ 11–00 ಗಂಟೆಗೆ ಬೆಂಗಳೂರಿನಿಂದ ಶಿವಮೊಗ್ಗಕ್ಕೆ ಬರಲು ಬಸ್ಸಿಗಾಗಿ ನಾನು ಯಶ್ವಂತಪುರದ ಗೋವರ್ಧನ ಚಿತ್ರಮಂದಿರದ ಹತ್ತಿರ ಕಾಯುತ್ತಿದ್ದೆ. ಸುಮಾರು ಖಾಸಗಿ ಬಸ್ಸುಗಳ ಕಚೇರಿಗಳು ಇರುವ ತಾಣವದು. ಅಂದು ವಾರದ ಮಧ್ಯದ ದಿನವಾದ್ದರಿಂದಲೊ ಏನೋ ಹೆಚ್ಚಿನ ಪ್ರಯಾಣಿಕರು ಇರಲಿಲ್ಲ. ಅನಿವಾರ್ಯ ಕಾರಣದಿಂದ ನನ್ನ ಬಸ್ಸು ಅಲ್ಲಿಗೆ 11.15 ಗಂಟೆಯ ಬದಲು 11.45 ಬರುವುದೆಂದು ನನಗೆ ಸಂದೇಶ ಬಂದಿತು. ವಿವಿಧ ಬಸ್ಸುಗಳಿಂದ ವಿವಿಧ ಕಡೆ ತೆರಳುತ್ತಿರುವ ಪ್ರಯಾಣಿಕರೆಲ್ಲ ಹತ್ತಿ ನನ್ನನ್ನು ಸೇರಿ 4–5 ಪ್ರಯಾಣಿಕರಷ್ಟೇ ಉಳಿದಿದ್ದೆವು. ಅದರಲ್ಲಿ ಸುಮಾರು 22–25 ವರ್ಷದ ಹುಡುಗನೊಬ್ಬ ಪ್ರತಿ ಬಸ್ಸು ಬಂದಾಗಲೂ ಬಸ್ಸಿನ ಎಜೆಂಟ್ ಹತ್ತಿರ ಹೋಗುವುದು ಏನೊ ಕೇಳುವುದು ಮರಳಿ ಬಂದು ಕುಳಿತುಕೊಳ್ಳುವುದು, ಮತ್ತೆ ಏಳುವುದು ಅತ್ತಿಂದಿತ್ತ ತಿರುಗುವುದು ಕುಳಿತುಕೊಳ್ಳುವುದು. ನನ್ನ ಬಸ್ಸು ತಡವಾಗಿ ಬರುತ್ತಿದ್ದರಿಂದ ನನ್ನ ಗಮನವೆಲ್ಲ ಅದೆ ಹುಡುಗನ ಹತ್ತಿರ ಸುಳಿಯುತ್ತಿತ್ತು. ಅದೇಕೊ ಆ ಹುಡುಗ ತನ್ನ ಊರಿಗೆ ಹೋಗುವ ಬಸ್ಸನ್ನು ತಪ್ಪಿಸಿಕೊಂಡಿರುವವನೆನೋ ಎಂತೆನಿಸುತಿತ್ತು. ಆದರೆ ನನಗೇಕೆ ಆತನ ಉಸಾಬರಿ ಎಂದು ನನ್ನ ಪಾಡಿಗೆ ನಾನು ನಿಂತುಕೊಂಡಿದ್ದೆ. ಆತನ ಗೊಂದಲ ತೊಳಲಾಟ ನಡುನಡುವೆ ಕಣ್ಣೊರಿಸಿಕೊಳ್ಳುತ್ತಿರುವುದು ನನ್ನ ಗಮನಕ್ಕೆ ಬಂದಿತು. ಪಾಪ ಅವನ ಮನೆಯಲ್ಲಿ ಯಾರಿಗೊ ತೊಂದರೆಯಿರಬಹುದು ಅದಕ್ಕಾಗಿ ಆದಷ್ಟು ಬೇಗ ಊರಿಗೆ ಹೋಗಲು ತೊಳಲಾಡುತ್ತಿದ್ದಾನೆ ಎನಿಸಿತು. ಒಂದು ಸಲ ಕೇಳಿಬಿಡೋಣವೆ ಎನಿಸಿತಾದರೂ ಬೆಂಗಳೂರಿನಂತಹ ನಗರದಲ್ಲಿ ಅಪರಿಚಿತರನ್ನು ಮಾತನಾಡಿಸುವುದೆ ಅಪಾಯಕಾರಿ ಎನಿಸಿ ಸುಮ್ಮನಾದೆ. ಮಧ್ಯ ಮಧ್ಯದಲ್ಲಿ ಆತ ಅಲ್ಲಿರುವ ಟ್ರಾವೆಲ್ಸ ಕಚೇರಿಗೆ ಹೋಗಿ ಏನೊ ಕೇಳಿ ಬಂದ. ಇತರ ಪ್ರಯಾಣಿಕರ ಹತ್ತಿರವೂ ಏನೊ ಕೇಳುತ್ತಿದ್ದ. ಈತ ಬಹುಶಃ ಬೆಂಗಳೂರಿಗೆ ಹೊಸಬನಿರಬಹುದು, ತನ್ನೂರಿನ ಬಸ್ಸಿನ ಬಗ್ಗೆ ಕೇಳುತ್ತಿರಬಹುದೆಂದುಕೊಂಡು ಸುಮ್ಮನಾದೆ.






ಸತ್ಯ ಹೇಳುತ್ತಿರುವನೋ ಅಥವ ಬೆಂಗಳೂರಿನಂತಹ ನಗರದಲ್ಲಿ ಈ ತರಹದ ನಾಟಕಕಾರರು ಇರುತ್ತಾರೊ ಎಂದು ಒಂದು ಕ್ಷಣ ಮನದಲ್ಲಿ ಹಾಯಿತಾದರೂ ಆ ಹುಡುಗನನ್ನು ನೋಡಿ ಹಾಗೆನಸಲಿಲ್ಲ. ಅದೂ ರಾತ್ರಿ 11.30ಕ್ಕೆ? ಅವನನ್ನು ನೋಡಿದರೆ ಕುಡುಕನ ತರಹವೂ ಅನ್ನಿಸಲಿಲ್ಲ, ನನಗೇಕೋ ಅವನನ್ನು ಪಾಪ ಅನಿಸಿತು, ಸತ್ಯವಾದರೂ ಇರಲಿ ಸುಳ್ಳಾದರೂ ಇರಲಿ ಎಂದುಕೊಳ್ಳುತ್ತ ನನ್ನ ಪರ್ಸಿನಿಂದ 500ರೂ ನೋಟನ್ನು ತೆಗೆದುಕೊಟ್ಟೆ, ತಕ್ಷಣವೆ ಇಷ್ಟು ಬೇಡ 350ರೂ ಕೊಡಿ ಮ್ಯಾಡಂ ಸಾಕು ಎಂದ, ನನ್ನ ಪರ್ಸಿನಿಂದ ಇನ್ನೂ 1000ರೂ ಕೊಟ್ಟು ಇದು ನಿನ್ನ ಅಪ್ಪನ ಆಸ್ಪತ್ರೆಯ ಖರ್ಚಿಗೆ ಇಟ್ಟುಕೊ

ಸ್ವಲ್ಪ ಹೊತ್ತಿನ ನಂತರ ಅ ಹುಡುಗ ಒಂದು ಕಡೆ ಕುಳಿತು ಎರಡೂ ತೊಡೆಗಳ ಮಧ್ಯೆ ಮುಖ ಹುದುಗಿಸಿ ಅಳುವುದನ್ನು ನೋಡಿದೆ. ನನ್ನ ಮನಸ್ಸಿಕೋ ತಡೆಯಲಿಲ್ಲ, ತಕ್ಷಣವೆ ಅವನ ಹತ್ತಿರ ಹೋಗಿ ಏನಾಯ್ತಪ್ಪ ಯಾಕೆ ಅಳ್ತಾ ಇದ್ದಿಯ? ಆವಾಗ್ಲಿಂದ ನೊಡ್ತಾನೆ ಇದ್ದಿನಿ ತುಂಬಾ ಅಸಮಾಧಾನದಲ್ಲಿ ಇದ್ದಿಯಲ್ಲ ಏನಾಯ್ತು? ಅಂತ ಕೇಳ್ದೆ. ಅದಕ್ಕೆ ಆತ "ನಮ್ಮಂಪ್ಪಂಗೆ ಎಕ್ಸಿಡೆಂಟ್ ಆಗಿದೆ ಅಂತ ಫೋನ್ ಬಂದಿದೆ ಮ್ಯಾಡಂ, ನಾನು ತುರ್ತಾಗಿ ಊರಿಗೆ ಹೋಗಬೇಕು, ಟಿಕೆಟ್ ರಿಸರ್ವೇಶನ್ ಆಗಿಲ್ಲ ಮ್ಯಾಡಂ, ಈಗ 12 ಗಂಟೆಗೆ ನಮ್ಮೂರಿಗೆ ಒಂದು ಬಸ್ಸು ಇದೆಯಂತ ಒಬ್ರು ಬಸ್ಸಿನ ಏಜೆಂಟ ಹೇಳಿದ್ರು, ನಾನಿಲ್ಲಿ ಒಂದು ಸಣ್ಣ ಕಂಪನೀಲಿ ಕೆಲಸ ಮಾಡ್ತಾ ಇದಿನಿ ಮ್ಯಾಡಂ, ನನ್ನ ಸ್ನೇಹಿತನೊಬ್ಬ ನನಗೆ ಇಲ್ಲಿತನಕ ಬೈಕನಲ್ಲಿ ಬಿಟ್ಟು ಹೋದ ಆದ್ರೆ ಗಡಿಬಿಡಿಯಲ್ಲಿ ನನ್ನ ಪರ್ಸ ರೂಮನಲ್ಲೆ ಬಿಟ್ಟು ಬಂದಿದಿನಿ ಮ್ಯಾಡಂ, ಈಗ ನನ್ನ ಹತ್ರ ಊರಿಗೆ ಹೊಗೋಕೆ ದುಡ್ಡಿಲ್ಲ, ನನ್ನ ಜೇಬಲ್ಲಿ 200ರೂ ಇದೆ ಅಷ್ಟೆ, ಇನ್ನೂ 350ರೂ ಬೇಕು, ಇಲ್ಲಿ ಒಂದಿಬ್ಬರಿಗೆ ಕೇಳಿದೆ , ಕೊಡಲಿಲ್ಲ ಅದಕ್ಕೆ ಏನು ಮಾಡ್ಬೇಕು ಅಂತ ಗೊತ್ತಾಗ್ತಾಯಿಲ್ಲ ಮ್ಯಾಡಂ ಅಂದ. ಮಧ್ಯ ಮಧ್ಯದಲ್ಲಿ ಕಣ್ಣೊರಿಸಿಕೊಳ್ಳುತ್ತಿದ್ದ. ಅವನು

ಎಂದೆ, ಬೇಡ ಮೆಡಂ ಎಂದು ಅವನು ಅನ್ನುತ್ತಿದ್ದರೂ ಒತ್ತಾಯಪೂರ್ವಕವಾಗಿ ಆತನ ಕೈಗಿಟ್ಟೆ. ಆತ ತಕ್ಷಣ ಥ್ಯಾಂಕ್ಸ ಮೇಡಂ ಎನ್ನುತ್ತ ನನ್ನ ಕಾಲಿಗೆ ನಮಸ್ಕರಿಸಲು ಬಂದ, ನಾನು ಅದೆಲ್ಲ ಬೇಡ ಎನ್ನುತ್ತ ಹಿಂದೆ ಸರಿದು ನಿಂತುಕೊಂಡೆ. ನಾನು ನೀಡಿದ ಹಣವನ್ನು ಹಿಂದಿರುಗಿಸಲು ನನ್ನ ಹೆಸರನ್ನು ಹಾಗೂ ದೂರವಾಣಿಯನ್ನು ಕೇಳಿದ, ನಾನು ನಕ್ಕು ಅದೆಲ್ಲ ಬೇಡ, ಇದೇ ತರಹ ಕಷ್ಟದಲ್ಲಿರುವವರಿಗೆ ಹೀಗೇ ನೀನೂ ಸಹಾಯ ಮಾಡು ಸಾಕು ಎಂದೆ. ನಾನೇನೂ ಕೇಳದಿದ್ದರೂ ನನ್ನ ಹೆಸರು ರಿಯಾಜ಼್ ಮ್ಯಾಡಂ ನಾನೊಬ್ಬ ಮುಸ್ಲಿಂ ಅಂತ ಅವನೇ ಹೇಳಿದ. ದೇವರು ನಿನಗೆ ಒಳ್ಳೆದು ಮಾಡ್ಲಿ, ನಿಮ್ಮಪ್ಪಂಗೆ ಬೇಗ ಹುಷಾರು ಮಾಡ್ಲಿ ಎಂದೆ. ಐದು ನಿಮಿಷದಲ್ಲಿ ನನ್ನ ಬಸ್ಸು ಬಂತು, ಒಂದು ಸಂತೋಷದ ಭಾವನೆಯಿಂದ ನಾನು ಬಸ್ಸು ಹತ್ತಿದೆ. ಕಷ್ಟದಲ್ಲಿದ್ದ ಹುಡುಗನಿಗೆ ಸಹಾಯ ಮಾಡಲು ನನ್ನನ್ನು ಬಳಸಿದ ಆ ದೇವನಿಗೆ ಕೋಟಿ ಧನ್ಯವಾದಗಳನ್ನು ಹೇಳಿದೆ. ಅವನ ಅಲ್ಲಾನು ನನ್ನ ರೂಪದಲ್ಲಿ ಬಂದು ಸಹಾಯ ಮಾಡಿದ್ದಕ್ಕೆ ಬಹುಶಃ ಅವನೂ ತನ್ನ ದೇವರಿಗೆ ಧನ್ಯವಾದಗಳನ್ನು ಹೇಳಿರಬೇಕು.



**ಡಾ ಶ್ರೀಪಾದ ಆರ್ ಕುಲಕರ್ಣಿ**
ವಿಕ್ರಮ್ ಕ್ಲಿನಿಕ್, ಶಿಕಾರಿಪುರ

ವೈದ್ಯೇತರ...

# ಇದೂ ಒಂಥರಾ ಅಧ್ಯಾತ್ಮ



**ಡಾ. ವಿನಯ ಶ್ರೀನಿವಾಸ್**
ವಿಭಾಗೀಯ ಸಂಪಾದಕರು

ವೀಣಾ ಮೇಡಂ ಅವರಿಂದ ಕರೆ ಬಂತು.

"ಅಧ್ಯಾತ್ಮ ಹಾಗೂ ಆರೋಗ್ಯ" ಬಗ್ಗೆ ಒಂದು ಲೇಖನ ಬರೆದು ಕಳಿಸಿ, 500 ಶಬ್ದ ಮೀರ ಬಾರದು."


"ಆಯ್ತು ಮೇಡಂ " ಅಂದೆ.

ಆಮೇಲೆ ವಿಚಾರ ಶುರು ಮಾಡಿದೆ.

"ಅಧ್ಯಾತ್ಮ ಅಂದ್ರೆ ನನಗೇನು ಗೊತ್ತು ? ಆರೋಗ್ಯದ ಬಗ್ಗೆ ನನಗೆಷ್ಟು ತಿಳುವಳಿಕೆ ? 500 ಪದ ಅಂದ್ರೆ ಅಳತೆ ಮಾಡುವುದು ಹೇಗೆ ? "

ಮುದ್ದಣ್ಣ ಮನೋರಮೆಯರ ಸರಸ ಸಲ್ಲಾಪ – ಪಾಠ ನೆನಪಾಯಿತು.

"ನೀರಿಳಿಯದ ಗಂಟಲೊಳಗೆ ಕಡುಬು ತುರಿಕಿ ದಂತೆ."




ಒಪ್ಪಿಗೆ ಕೊಟ್ಟಾಗಿದೆ , ಮಾತನ್ನ ಉಳಿಸಿ ಕೊಳ್ಳಬೇಕು. ಅದು ಅಧ್ಯಾತ್ಮ. ಲೇಖನ ಸರಿ ಆಗಬೇಕು. ಅಡ್ಡಿ ಇಲ್ಲ ಅಂತ ನೀವು ಹೇಳಬೇಕು, ನನ್ನಲ್ಲಿ ಕೃತಾರ್ಥ ಭಾವನೆ ಮೂಡಬೇಕು. ಅದು ಆರೋಗ್ಯ.

ಜೀವನ ಪ್ರಾರಂಭ ಆಗೋದೆ ಅಲ್ಲಿಂದ. ನಾನ ಬೆಳಿಬೇಕು, ಹೊರಗೆ ಹಾರಬೇಕು. ಮೇಲಿನ ಚಿತ್ರ ನೋಡಿ ಹೇಗೆ ಅಂಡಾಶಯದಿಂದ ಅಂಡಾಣು ಹೊರಗೆ ಹಾರ್ತಾ ಇದೆ! ಮನುಷ್ಯನ ದೇಹದ ಅತಿ ದೊಡ್ಡ ಜೀವಕೋಶ ಅಂದ್ರೆ ಅದಂತೆ. ಆದ್ರೂ ಸಹಿತ ಅದರ ಮುಂದಿನ ಕೆಲಸ ಯಶಸ್ವಿ ಆಗಬೇಕಂದ್ರ ಇನ್ನೊಂದು ಜೀವಕೋಶ ಬೇಕೇ ಬೇಕು. ಆ ಇನ್ನೊಂದು ಸಣ್ಣದು, ಭಾಳ ಸಣ್ಣದು. ಆದರ ಸಹಾಯ ಮಾಡಲಿಕ್ಕೆ ಲಕ್ಷಗಟ್ಟಲೆ ಸಂಖ್ಯಾದಾಗ ಬರತದ. ಅದು ಅಧ್ಯಾತ್ಮ. ಎರಡೂ ಸೇರಿದರ ಜೀವ ಮೂಡೋದು. ಜೀವ ಮೂಡಿದರ ನಗು ಹುಟ್ಟೋದು. ಅದು ಆರೋಗ್ಯ.

ನಮ್ಮ ಅಪ್ಪ ಅಮ್ಮ ಮಾಡಿದ ದೊಡ್ಡ ಉಪಕಾರ ಅಂದ್ರ ನನಗ ಸ್ವಾತಂತ್ರ ಕೊಟ್ಟದ್ದು. ನನಗ ಅವರ ಹೇಳಿದ್ದು ಇಷ್ಟೆ –

"ನಿನ್ನ ಜವಾಬ್ದಾರಿ ಗೊತ್ತಿರಲಿ. ಇದು ಆಡೊ ವಯಸ್ಸು ಆಡು. ಓದೋ ವಯಸ್ಸೂ ಇದ. ನೆನಪಿರಲಿ"

ಪದೇ ಪದೇ ಅದ ಹೇಳದ ಹೋಗಿದ್ರ ಏನಾಗುತಿತ್ತೋ ಗೊತ್ತಿಲ್ಲ. ವಾರದಾಗ ಎರಡ ಸಲಾ ಆದರೂ ನೆನಪಿಸತಿದ್ರು. ಹಿಂಗಾಗಿ ಸ್ವಲ್ಪ ಹಾದಿವಳಗ ಇರ್ತಿದ್ದೆ.

ನಮ್ಮ ಮನಿ ಹತ್ರನ ವೆಂಕಟೇಶ್ ದೇವರ ಗುಡಿ. ವರ್ಷಕ್ಕ ಒಮ್ಮೆ ಒಬ್ಬ ದಾಸರು ಅಲ್ಲಿಗೆ ಬರ್ತಿದ್ರು. ಸಭ್ಯಾ ಅಂದ್ರ ಅತಿ ಸಭ್ಯ ಮನುಷ್ಯ. ದೇವರ ಕೀರ್ತನಾ ಮಾಡತಿದ್ದರು. ಸುಶ್ರಾವ್ಯ ಕಂಠ. ಒಂದು ಕೈಯಲ್ಲಿ ತಾಳ, ಇನ್ನೊಂದು ಕೈಯಲ್ಲಿ ತಂತಿಯ ವಾದ್ಯ ಮೀಟತಾ ದೇವರ ನಾಮಾ ಹಾಡ್ತಾ ಇದ್ರೆ ಸಾಕು, ನಮಗೆ ಸ್ವರ್ಗದಾಗ ಇದ್ದಂಗ ಆಗೋದು. ದಾಸರು ಇರೋತಂಕಾ ಪ್ರತಿ ಸಂಜೆ ನನ್ನ ವಾಸ್ತವ್ಯ ಅಲ್ಲೆ.



ನನ್ನಂಥ ಮೂರ ನಾಲ್ಕ ಹುಡುಗ್ರು, ಸ್ವಲ್ಪ ಜನ ಹೆಂಗಸರು, ಇನ್ನೂ ಸ್ವಲ್ಪ ಜನ ಗಂಡಸರು. ಯಾವಾಗಲೋ ಒಮ್ಮೆ ಯಾರೋ ಮುಖ್ಯಸ್ಥರು ಬರೋರು. ದಾಸರಿಗೆ ಬಹಳ ಖುಷಿ.

"ಇವತ್ತ ದೇಸಾಯರ ಬಂದಾರ. ಬಹಳ ಸಂತೋಷ. ನಿನ್ನೆ ಅವರ ಮನೆಗೆ ಊಟಕ್ಕ ಹೋಗಿದ್ದೆ. ಭಾಳಾ ದೊಡ್ಡ ಮನಸ್ಸ ಅವರದು. ನಮ್ಮಂಥಾ ದಾಸರು ಅಂದ್ರ ಅವರಿಗೆ ಎಷ್ಟು ಗೌರವ. ಅವರ ಶ್ರೀಮತಿ ಅವರು ಅಷ್ಟೇ. ನಿನ್ನೆ ಅವರ ಮನ್ಯಾಗ ದೇವರ ಪೂಜೆ ಆಯ್ತು. ಹೊಟ್ಟೆ ತುಂಬಾ ಊಟ ಆಯ್ತು. ಬರಬೇಕಾರ ಬಟ್ಟೆ ಕೊಟ್ರು, ಕಾಳಕಡಿ ಕೊಟ್ರು, ಕೈತುಂಬ ದಕ್ಷಿಣೆ ಇಟ್ಟು ನಮಸ್ಕಾರ ಮಾಡಿದರು. ಇಂಥ ಆಸ್ತಿಕರು ಸಮಾಜದಾಗ ಇರೋದಕ್ಕ ನಮ್ಮಂಥವರು ದೇವನಾಮ ಸ್ಮರಣ ಮಾಡಿಕೊಂಡು ನೆಮ್ಮದಿಯಾಗಿ ಓಡಾಡಿಕೊಂಡು ಇರೋದು ಸಾಧ್ಯ ಆಗಿದೆ." ಇಷ್ಟು ಹೇಳಿ ಕಣ್ಣು ಒರೆಸಿಕೊಳ್ಳೊರು.ಅದನ್ನ ಕೇಳಿ ಒಂದು ಕ್ಷಣ ಗಂಡಸರು ಕಂಗಾಲ ಆದ್ರ ಹೆಂಗಸರು ಕಣ್ಣಾಗ ನೀರು ತರೋರು.ನಮಗ ಎನ್ ಮಾಡಬೇಕು ಅರ್ಥ ಆಗದ ಆ ಕಡೆ ಈ ಕಡೆ ನೋಡ್ತಿದ್ದಿವಿ.

ಅಷ್ಟರಾಗ ಸುಧಾರಿಸಿಕೊಂಡ ದಾಸರು

"ನಿನ್ನೆ ದೇಸಾಯರ ಮನ್ಯಾಗ ಸ್ವಾದಿಷ್ಟ ಕಡುಬು ಮಾಡಿದ್ರು. ಕಡುಬು ತಿನ್ಬೇಕು. ಹೆಂಗ ತಿನ್ಬೇಕು ಹೇಳ್ತೀನಿ ಕೇಳ್ರಿ." ದಾಸರು ಹಾಡ ಶುರು ಮಾಡೋರು.

"ಕಡುಬನು ತಿನಬೇಕು ... "

ಹಾಡನ್ಯಾಗ ಪೂರ್ತಿ ಕಡಬ, ಅದರಾಗ ಬರೊ ದ್ರಾಕ್ಷಿ ಗೋಡಂಬಿ ವರ್ಣನಾ. ಬಾಯಾಗ ನೀರ ಬರಬೇಕ.

ಅವತ್ತ ರಾತ್ರಿ ಮನೆಗೆ ಹೋಗಿ ಅಪ್ಪನಿಗೆ ಪ್ರಶ್ನೆ

"ದಾಸರನ ಒಂದ ದಿವಸ ನಮ್ಮನಿಗೂ ಯಾಕ ಊಟಕ್ಕ ಕರಿಬಾರ್ದು?"

ಅಪ್ಪ ನನ್ನ ಕಡೆನೇ ನೋಡಿ ಉತ್ರಾ ಕೊಟ್ಟರು.

"ದಾಸರು ಭಾಳ ಒಳ್ಳೆಯವರಪ್ಪಾ. ಕರದ್ರ ಬಂದ ಬರತಾರ. ನಾವ ಕರದ್ರ ಒಂದು ಊಟ ಮಾಡಬಹುದು ಅಷ್ಟೇ. ಅವರಿಗೆ ಕರೆಯೊರು ಭಾಳ ಜನ ಇದ್ದಾರ. ಒಳ್ಳೊಳ್ಳೆ ಪುರಸ್ಕಾರನೂ ಮಾಡತಾರ. ದಾಸರ ಜೀವನ ನಡೆಯೋದೆ ಆ ಸಹಾಯದ ಮೇಲೆ. ಮುಗಿತು ಮುಂದಿನ ತಿಂಗಳದಿಂದ ಮಳಿ ಸುರು. ದಾಸರು 4 ತಿಂಗಳ ಅವರ ಹಳ್ಳಿ ಬಿಟ್ಟು ಹೊರಗ ಬರಂಗಿಲ್ಲ. ನಮ್ಮ ಮನೆ ಆತಿಥ್ಯ ಅವರಿಗೆ ತೊಂದರೆ ಕೊಡಬಾರದು."

ಅಪ್ಪ ಎನ್ ಹೇಳ್ತಾ ಇದಾರ ಅರ್ಥ ಆಗೋದು.

ಇದೂ ಒಂಥರಾ ಅಧ್ಯಾತ್ಮನ. ದಾಸರ ಮನ್ಯಾಗ ಹೆಚ್ಚು ನಗೆ ಇರಬೇಕಂದ್ರ ಅವರ ಒಂದು ದಿನ ನಾವು ಕೆಡಸಬಾರ್ದು. ಹೆಚ್ಚು ನಗೆ ಅಂದ್ರ ಹೆಚ್ಚು ಆರೋಗ್ಯ.

ಅವತ್ತ ರಾತ್ರಿ ಊಟಾ ಮಾಡಿದ್ದು ಅನ್ನ , ನೀರು ಮಜ್ಜಿಗಿ. ರಾತ್ರಿ ಘಾಡ ನಿದ್ದಿ. ಕನಸನ್ಯಾಗ ಮಾತ್ರ ಬರೆ ಕಡುಬು. ಖುಶಿಯೊ ಖುಶಿ.ನಗುವೊ ನಗು. ಹಾಲಿಲ್ಲ ಬಟ್ಲಿಲ್ಲ. ಗುಟುಕ್. ಅದು ಅಧ್ಯಾತ್ಮ, ಅದು ಆರೋಗ್ಯ.





**ಅಕ್ಷಯ್ ಕುಮಾರ್ ಎನ್**
ಶ್ರೀದೇವಿ ವೈದ್ಯಕೀಯ ಮಹಾ ವಿದ್ಯಾಲಯ
ವೈದ್ಯಕೀಯ ಅಂತಿಮ ವರುಷದ ವಿದ್ಯಾರ್ಥಿ



**ಡಾ|| ಕೆ. ಎಸ್. ಶುಭ್ರತಾ**
ವಿಭಾಗೀಯ ಸಂಪಾದಕರು



# ಓ_ಒಲವೇ

ಮೋಡವು ಕವಿದಿದೆ, ಮಳೆ ಬರುವ ಹಾಗಿದೆ
ಕತ್ತಲೆಯು ಎಲ್ಲೆಡೆ ಹರಡಿದೆ, ಕಿರಣವು ಕಾಣದೆ ಹೋಗಿದೆ
ತಂಪಾದ ಗಾಳಿ ಬೀಸಿದೆ, ಅದರೊಡನೇ ನಮ್ಮನ್ನು ಸೆಳೆದಿದೆ
ಇವೆಲ್ಲದರ ನಡುವೆ, ನಾನು ನನ್ನೊಲವಿನೊಡನೆ ಒಂದೆಡೆ ಕೂತಿದೆ

ಸುತ್ತಲೂ ಆವರಿಸಿದೆ ನೀರವ ಮೌನ
ಮುಂದೇನೆಂದು ತೋಚದೆ ಕಂಗಾಲಾಗಿದೆ ನನ್ನೀ ಮನ
ಕೆಲವೊಮ್ಮೆ ಅನಿಸುತ್ತದೆ ಇದು ಹಳೆಯ ನಾನಾ?
ತಿಳಿಯುತ್ತಿಲ್ಲಯೆನಗೆ, ಹೇಳು ನೀನಾದರು ಓ ಮೈನಾ...

ನನ್ನನ್ನು ಸೋಕದೆ ಹಾಗೆಯೇ ಹೋಗಿದೆ ಆ ಕಿರಣ
ಇನ್ನೆಲ್ಲೋ ದೂರದಲ್ಲಿ ಓ.. ಎಂದು ಸುರಿಯಲು ಕಾದಿದೆ ಆ ವರುಣ
ಅವ ಸುರಿದ ಮೇಲಾದರೂ ತಿಳಿಯಾಗುವುದೇ ನನ್ನೀ ಒಲವ ಪಯಣ
ಇನ್ನೂ ಎನಗೆ ತಿಳಿಯದಾಗಿದೆ, ನನ್ನ ಈ ಎಲ್ಲಾ ಬದಲಾವಣೆಗೆ ಕಾರಣ?

ಈ ನಮ್ಮ ವ್ಯಕ್ತಿತ್ವಯೆಂಬುದು ಇಲ್ಲಿರುವ ತಿಳಿಯಾದ ನೀರಿನ ಅಲೆಯು
ಅದರ ಸುತ್ತ ಇರುವವೇ.. ನಮ್ಮೊಡನೆ ಇರುವ ವ್ಯಕ್ತಿಯು
ಆ ವ್ಯಕ್ತಿಯ ವ್ಯಕ್ತಿತ್ವವೇ, ನಮ್ಮ ಈ ವ್ಯಕ್ತಿತ್ವವೂ
ಈ ವ್ಯಕ್ತಿತ್ವವೇ, ನಾವು ಈಗಿರುವ ವ್ಯಕ್ತಿಯು

ನೀ ಇದ್ದರೆ ಗಿಡ ಮರಗಳ ನಡುವೆ, ನಿನ್ನ ಬಣ್ಣ ಹಚ್ಚಹಸಿರು
ಅದೇ ನೀ ಇದ್ದರೆ ತ್ಯಾಜ್ಯ ಕಸಗಳ ನಡುವೆ, ನಿನ್ನ ಬಣ್ಣ ಕೊಚ್ಚಕೆಸರು
ನಿನ್ನ ಬಳಿ ಇದ್ದದ್ದು ಪ್ರಕಾಶವಾದರೆ, ನೀನಾಗುವೆ ಬೆಳಕು
ಅದೇ ನಿನ್ನ ಬಳಿ ಇದ್ದದ್ದು ವಿಷಾದವಾದರೆ, ನೀನಾಗುವೆ ಕೊಳಕು

ನಿನ್ನ ಮೇಲಿದ್ದದ್ದು ಆಕಾಶದಂತೆ ಅಗಾಧವಾದರೆ ನೀನಾಗುವೆ ಬಿಳಪು
ಅದೇ ನಿನ್ನ ಮೇಲಿದ್ದದ್ದು ರಾತ್ರಿಯ ಕಗ್ಗತ್ತಲಾದರೆ ನೀನಾಗುವೆ ಕಳಪು
ಓ ಒಲವೇ ನೀ ಹೇಳು .. ಹೀಗೆ ನೀನಾಗಿಯೇ ಉಳಿಯುವೆಯಾ??
ಅಥವಾ ಬೇರೆಯವರ ಬಣ್ಣಗಳಿಗೆ ಪ್ರತಿಬಿಂಬವಾಗುವೆಯಾ??

ಇದೇ ನೀರಿನ ಆಳದಲ್ಲಿ ಒಂದು ಅಮೂಲ್ಯವಾದ ಮುತ್ತು ಅಡಗಿದೆ
ಆ ಮುತ್ತಿನ ಮೌಲ್ಯ ನಿನಗೆ ಮಾತ್ರ ಅರಿತಿದೆ
ಆ ಮುತ್ತಿಗೆ ಇಂದು ಇವೆಲ್ಲವನ್ನೂ ತೊರೆದು,
ದೂರ ಸಾಗರವನ್ನು ಸೇರುವ ಆಸೆ ಮೂಡಿದೆ
ಓ ಒಲವೇ... ಇನ್ನಾದರೂ ಇರು ನೀ ಕುಗ್ಗದೆ

ಹೇ ಒಲವು.. ಈಗಲಾದರೂ ಹೇಳು ಏನು ನಿನ್ನ ನಿಲುವು..

ಇಲ್ಲೇ ಇರುವೆಯಾ..?
ಇನ್ನಾದರು ಮುಂದೆ ಹರಿಯುವೆಯಾ?

ಸಂಗವೋ? ಏಕಾಂತವೋ?



**ಶ್ರೇಯಾ ಸಗರದ**
ದ್ವಿತೀಯ ವರುಷದ ವೈದ್ಯಕೀಯ ವಿದ್ಯಾರ್ಥಿನಿ
ನವೋದಯ ವೈದ್ಯಕೀಯ ಮಹಾ ವಿದ್ಯಾಲಯ, ರಾಯಚೂರ

ವಿದ್ಯಾರ್ಥಿ ಲೋಕ

# 'ಏಕಾದ್ರಿಷ್ಟಾ'

"ಉತ್ತಮ ಭವಿಷ್ಯಕ್ಕಾಗಿ ಸಣ್ಣ ಹೆಜ್ಜೆಗಳು" ಎಂಬ ಮಾತನ್ನು ನಾವೆಲ್ಲರೂ ಕೇಳಿದ್ದೇವೆ, ಅದು ಸಂಭವಿಸುವುದನ್ನು ನೋಡುವುದಕ್ಕಿಂತ ಹೆಚ್ಚಿನದೇನು? ಟೀಮ್ 'ಏಕಾದ್ರಿಷ್ಟಾ' 12 ವೈದ್ಯಕೀಯ ವಿದ್ಯಾರ್ಥಿಗಳು ಆರಂಭಿಸಿರುವ ಸಾಮಾಜಿಕ ಸ್ಪಂದನೆಯೊಳಗೊಂಡ ಯೋಜನೆ. ಅದನ್ನೇ ತೋರಿಸುವ ಗುರಿ ಹೊಂದಿದೆ. ಇದು 12 ಸದಸ್ಯರನ್ನು ಹೊಂದಿರುವ ಚಿಗುರುತ್ತಿರುವ ಸಂಸ್ಥೆ. ವೈದ್ಯಕೀಯ ವಿದ್ಯಾರ್ಥಿಗಳನ್ನು ಒಳಗೊಂಡಿರುವದರಿಂದ ಪ್ರಸ್ತುತ ಆರೋಗ್ಯ ಮತ್ತು ಯೋಗಕ್ಷೇಮದ ಬಗ್ಗೆ ಜಾಗೃತಿ ಮತ್ತು ಸಕಾರಾತ್ಮಕತೆಯನ್ನು ಹರಡುವುದು ಈ ಮೊಳಕೆಯೊಡೆಯುವ ತಂಡದ ಮುಖ್ಯ ಧ್ಯೇಯವಾಗಿದೆ. ಕೇಂದ್ರೀಕೃತ ದೃಷ್ಟಿಯ ಅಕ್ಷರಶಃ ಅರ್ಥವನ್ನು ಹೊಂದಿರುವ 'ಏಕಾದ್ರಿಷ್ಟಾ' ತಂಡವು ನಮಗೆ ಒಂದು ಸಣ್ಣ ದಯೆಯ ಕಾರ್ಯವು ಹೇಗೆ ರಚನಾತ್ಮಕವಾಗಿ ಬೆಳಗಬಹುದು ಎಂಬುದರ ಸಣ್ಣ ನೋಟವನ್ನು ಈಗಾಗಲೇ ಕೆಲವು ಕಾರ್ಯಕ್ರಮಗಳ ಮೂಲಕ ನೀಡಿದೆ.

ಒಂದು ತಿಂಗಳ ಹಿಂದೆ ರಾಯಲ್ ಕಾನ್ವಾರ್ಟ್ ಸ್ಕೂಲ್ನಲ್ಲಿ ಲಯನ್ಸ್ ಕ್ಲಬ್ ರಾಯಚೂರು ಸಹಯೋಗದಲ್ಲಿ ಆರೋಗ್ಯದ ಮಹತ್ವದ ಕುರಿತು ಸಣ್ಣ ವಿಚಾರ ಸಂಕಿರಣವನ್ನು ನಡೆಸುವ ಮೂಲಕ ಯುವ ವೈದ್ಯಾಧಿಕಾರಿಗಳ ಉತ್ಸಾಹಭರಿತ ಗುಂಪು ಅಲ್ಲಿನ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯ ಆರೋಗ್ಯ ತಪಾಸಣೆಯನ್ನು ಮಾಡಿತು.

ಈ ಸಂಸ್ಥೆಯು ಮಾನಸಿಕ ಆರೋಗ್ಯದ ಪ್ರಾಮುಖ್ಯತೆಯ ಬಗ್ಗೆಯೂ ಕೆಲಸ ಮಾಡುತ್ತದೆ ಮತ್ತು ಸಮಾಜವನ್ನು ಧನಾತ್ಮಕತೆಯನ್ನು ಉತ್ತೇಜಿಸಲು ಒತ್ತಾಯಿಸುತ್ತದೆ. ಆರೋಗ್ಯಕರ ಜೀವನಶೈಲಿಯನ್ನು ಜೀವಂತವಾಗಿಡಲು ಕಾಲಕಾಲಕ್ಕೆ ಅಭಿಯಾನಗಳು ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ಯೋಜಿಸುವ ಗುರಿಯನ್ನು ಹೊಂದಿದೆ. ಯೋಗಕ್ಷೇಮದ ಜ್ಞಾನಕ್ಕೆ ಸಂಬಂಧಿಸಿದಂತೆ ಯಾವಾಗಲೂ ಸಹಾಯವನ್ನು ನೀಡಲಾಗುವುದು ಮತ್ತು ಮುಕ್ತ ಕೈಗಳಿಂದ ಸ್ವಾಗತಿಸಲಾಗುವುದು. ತಂಡವು ತನ್ನ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸಲು ಗಮನ ಹರಿಸುವುದು ಮತ್ತು ಸಮಾಜದ ಪ್ರತಿಯೊಬ್ಬರ ಆರೋಗ್ಯದ ಅಗತ್ಯಗಳಿಗಾಗಿ ಪ್ರತಿಯೊಬ್ಬ ಸಾಮಾನ್ಯ ವ್ಯಕ್ತಿಯನ್ನು ತಲುಪಲು ಪ್ರಬುದ್ಧ ವಿಚಾರಗಳೊಂದಿಗೆ ಸಹಕರಿಸುವ ಗುರಿಯನ್ನು ಹೊಂದಿದೆ. ವೈದ್ಯಕೀಯ ಶಕ್ತಿಯ ಜ್ಞಾನದ ಮನಸ್ಸಿನೊಂದಿಗೆ, ನಮ್ಮ 12 ಜನರ ತಂಡವು ಸಮಾಜದಲ್ಲಿ ಭರವಸೆಯ ಬೆಳವಣಿಗೆಯನ್ನು ತೋರಿಸಲು ಸದಾ ಸಿದ್ಧವಿರುವುದು. ಒಬ್ಬ ಸಾಮಾನ್ಯ ಅಥವಾ ಅದಕ್ಕಿಂತ ಹೆಚ್ಚಾಗಿ ವಿದ್ಯಾರ್ಥಿ ಕೂಡ ಹೇಗೆ ದೊಡ್ಡ ಬದಲಾವಣೆಯನ್ನು ಮಾಡಬಹುದು ಎಂಬುದಕ್ಕೆ ನಮ್ಮ ತಂಡ ಸ್ಫೂರ್ತಿದಾಯಕ ಉದಾಹರಣೆಯಾಗುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಲು ಕಂಕಣ ಬದ್ಧವಾಗಿದೆ.




### 'ಏಕಾದ್ರಿಷ್ಟಾ' ತಂಡದ ಸದಸ್ಯರು

ಶ್ರೇಯಾ ಸಗರದ
ಅಭಿಷೇಕ ಎಸ್ ಬಿರಾದರ
ಶಶಾಂಕ್
ಕೆ ವಿ ಶ್ರೇಯಾ ರೆಡ್ಡಿ
ಲಕ್ಷಿತಾ ಸೋಮಶೇಖರ
ರೇಷ್ಮಾ ಪ್ರಸನ್ನ
ಜನನಿ ಕುಮಾರ್
ಶ್ರೀಶ್ರೇಷ್ಠಾ
ಸಂಗಮೇಶ್ ಚೆನ್ನಶೆಟ್ಟಿ
ರೋಹನ್ ಬೆನ್ನೂರ
ಆದರ್ಶ ಪಾಟೀಲ್
ಪ್ರಜ್ವಲ್ ಬಿರಾದರ



**ಡಾ ವೀಣಾ ಎನ್ ಸುಳ್ಯ**
ಸ್ತ್ರೀ ಆರೋಗ್ಯ ಮತ್ತು ಪ್ರಸೂತಿ ತಜ್ಞರು, ಸುಳ್ಯ
ವಿಭಾಗೀಯ ಸಂಪಾದಕರು ಮತ್ತು ಲೇಖಕರು

ಅಧ್ಯಾತ್ಮ ಮತ್ತು ಆರೋಗ್ಯ

# ವಿಪಶ್ಯನ

ನಾವೆಲ್ಲರೂ ಬಯಸುವುದು ಶಾಂತಿಯನ್ನು , ಸುಖವನ್ನು ಮತ್ತು ಆನಂದವನ್ನು. ಆದರೆ ಅದನ್ನು ಪಡೆಯುವ ಹಂತಗಳಲ್ಲಿ ದುಃಖವನ್ನು, ಸಂಕಟವನ್ನು, ನೋವನ್ನೂ ಅಸಂತೋಷವನ್ನು, ಅಶಾಂತಿಯನ್ನು ಅನುಭವಿಸುವುದನ್ನು ನೋಡುತ್ತೇವೆ. ಸುಖವಾಗಿರುವುದು ನಮ್ಮ ಹಕ್ಕು ಎನ್ನುವುದನ್ನು ಮರೆತಿದ್ದೇವೆ. ' ಏನು ಮಾಡಿದರೇನು ಭವ ಹಿಂಗದು ' ಎನ್ನುವ ಮಾತಿನಂತೆ ಆಸೆಗಳು ಕಡಿಮೆ ಆಗಲಿಲ್ಲ, ಬಯಕೆಗಳು ಕೈ ಗೂಡಲಿಲ್ಲ. ಆನಂದವೂ ದಕ್ಕಲಿಲ್ಲ ...ಎಂದಾಗ ಆನಂದ ಸಿಗಲು ಏನು ಮಾಡಬೇಕು ಎನ್ನುವುದನ್ನು ತಿಳಿದುಕೊಳ್ಳುವುದು ಅವಶ್ಯಕ.

ಈ ವೈಯಕ್ತಿಕ ಅಶಾಂತಿಯು ನಮಗೆ ಮಾತ್ರ ಸೀಮಿತವಾಗಿಲ್ಲ. ನಮ್ಮ ದುಃಖವನ್ನು ನಾವು ಇತರರಿಗೂ ಹಂಚುತ್ತೇವೆ. ವಾತಾವರಣವೆಲ್ಲ ತಳಮಳದಿಂದ ಕೂಡಿರುವುದರಿಂದ ಅವನ ಸಮೀಪದಲ್ಲಿರುವವರೆಲ್ಲರಿಗೂ ಈ ತಳಮಳ/ ದುಃಖದ ಅನುಭವವನ್ನು ಪಡೆಯುತ್ತಾರೆ. ಇಂತಹ ಸಾರ್ವತ್ರಿಕ ಸಮಸ್ಯೆಗೆ ಒಂದು ಸಾರ್ವತ್ರಿಕ ಪರಿಹಾರದ ಅಗತ್ಯವಿದೆ .


ಸಾಮಾನ್ಯವಾಗಿ ನಮಗೆ ನೋವು ದುಃಖ ಬೇಸರವಾದಾಗ ಮನಸ್ಸನ್ನು ಬೇರೆ ಕಡೆ ತಿರುಗಿಸುವುದು, ಬೇರೆ ಯಾವುದಾದರು ಚಿಂತನೆ ಅಥವಾ ಕಾರ್ಯದಲ್ಲಿ ತೊಡಗಿಸುವುದು ಮಾಡುತ್ತೇವೆ. ಅಂದರೆ ವಸ್ತು ಸ್ಥಿತಿಯಿಂದ ಪಲಾಯನವಾಗುವುದು. ಆದರೆ ಇದು ಸರಿಯಾದ ಉಪಾಯವಲ್ಲ . ನಾವು ಮನಸ್ಸನ್ನು ಬೇರೆ ಕಡೆಗೆ ತಿರುಗಿಸಿದರೂ ಆಗ ಒಳಗಡೆಯ ಅಚೇತನ ಮನಸ್ಸು ಅದೇ ಪ್ರಕಾರವಾಗಿ ಕ್ಷುಬ್ಧ ವಾಗಿಯೇ ಇರುತ್ತದೆ. ಹಾಗಾಗಿ ಅದು ಸಮಸ್ಯೆಗೆ ಪರಿಹಾರವಾಗುವುದಿಲ್ಲ.

ಮನಶಾಂತಿ ಗಾಗಿ ಅನೇಕ ಪ್ರಯತ್ನಗಳು ನಡೆದು ಅಂತಿಮವಾಗಿ ಜನರು ಧ್ಯಾನದ ಕಡೆಗೆ ಆಕರ್ಷಿತರಾಗುತ್ತಿದ್ದಾರೆ. ಭಾರತದಲ್ಲಿ ವಿವಿಧ ಧ್ಯಾನ ಪರಂಪರೆಗಳು ಪ್ರಾಚೀನ ಕಾಲದಿಂದಲೂ ಪ್ರಚಲಿತವಾಗಿದೆ ಎನ್ನುವುದು ಸ್ಪಷ್ಟ. ವಿಪಶ್ಯನ ಧ್ಯಾನವು ಇವುಗಳಲ್ಲಿ ಒಂದು. ಈ ಸಾಧನ ಪದ್ಧತಿಯನ್ನು ಶ್ರೀ ಸತ್ಯನಾರಾಯಣ ಗೋಯಂಕ ಅವರು ಭಾರತದಲ್ಲಿ ಪ್ರಚುರಪಡಿಸಿದರು ಬರ್ಮಾದಲ್ಲಿ ವಿಪಶ್ಯನ ಧ್ಯಾನ ಬೋಧಕರಾಗಿದ್ದ ಸಯಾಜಿ ಉಬಾಖಿನ್ ಅವರಿಂದ ವಿಪಶ್ಯನ ಧ್ಯಾನವನ್ನು ಕಲಿತು ಚೆನ್ನಾಗಿ ಅಭ್ಯಾಸ ಮಾಡಿದರು ತದನಂತರ 1969ರಲ್ಲಿ ಉಬಾಖಿನ್ ಅವರಿಂದ ಬೋಧಕರಾಗಿ ನೇಮಿಸಲ್ಪಟ್ಟು ಭಾರತಕ್ಕೆ ಬಂದರು. ಉಬಾಖಿನ್ ಅವರ ಗುರು, ಸಯಾ ಉಥೆಟ್ ಬೌದ್ಧ ಭಿಕ್ಷು ಲೇದಿ ಸಯಾದ ಅವರಿಂದ ಕಲಿತರು ಎಂಬ ಮಾಹಿತಿ ಇದೆ. ಬುದ್ಧನು ವಿಪಶ್ಯನ ಧ್ಯಾನ ಕ್ರಮವನ್ನು ಪರಿಚಯ ಮಾಡಿಸಿದಾಗಿನಿಂದ ಆಗಿ ಹೋದ ಬೋಧಕರಿಂದ ಅನೇಕ ತಲೆಮಾರುಗಳ ವರೆಗೆ ಜೋಪಾನವಾಗಿಡಲ್ಪಟ್ಟು ಅದೇ ಪರಂಪರೆಯ ಆಚಾರ್ಯರಿಂದ ಲೇಡಿ ಸಾಯದ ಅವರು ಕಲಿತರೆಂದು ನಂಬಲಾಗಿದೆ. ಬುದ್ಧನ ಮಾತುಗಳು ಬೌದ್ಧ ಗ್ರಂಥಗಳಲ್ಲಿ ಜೋಪಾನವಾಗಿಡಲ್ಪಟ್ಟಿವೆ ಧ್ಯಾನದ ಆಳವಾದ ಅಭ್ಯಾಸವಿಲ್ಲದೆ ಆಳವಾದ ಆ ಸೂಚನೆಗಳನ್ನು ವ್ಯಾಖ್ಯಾನಿಸುವುದು ಕಷ್ಟದ ವಿಷಯ.

ಸಿದ್ಧಾರ್ಥನು ಸನ್ಯಾಸಿ ಆಗುವುದನ್ನು ತಪ್ಪಿಸಲು ಮತ್ತು ಅವನಿಗೆ ಯಾವುದೇ ಕಷ್ಟ, ದುಃಖ, ಹಿಂಸೆಯನ್ನು



ನೋಡದಂತೆ ಅವನನ್ನು ಅರಮನೆಯ ಒಳಗೆ ಬೆಳೆಸಲಾಯಿತು. ಒಂದು ದಿನ ಸಿದ್ಧಾರ್ಥ ಒಬ್ಬ ಮುದುಕನನ್ನು, ಒಬ್ಬ ರೋಗಿಷ್ಟನನ್ನು, ಒಬ್ಬ ಸತ್ತವನನ್ನು ನೋಡಿದ . ಅಂದರೆ ಇವೆಲ್ಲ ಒಂದಲ್ಲ ಒಂದು ದಿನ ತನಗೆ ಆಗುವುದು ಖಚಿತ ಅನ್ನುವುದನ್ನು ತಿಳಿದುಕೊಂಡ. ಹಾಗೆ ಒಬ್ಬ ಸನ್ಯಾಸಿಯನ್ನು ನೋಡಿದ, ಅವನ ಮುಖದಲ್ಲಿರುವ ಪರಮ ಶಾಂತಿಯನ್ನು ಕಂಡು , ಇದನ್ನು ತಾನೂ ಗಳಿಸಬಲ್ಲೆ. ಹಾಗಾದರೆ ಇದಕ್ಕೆ ದಾರಿ ಯಾವುದು ಎಂದು ಅನ್ವೇಷಣೆಗೆ ಹೊರಟ. ಸುಮಾರು 6 ವರ್ಷಗಳ ಸತತ ಪ್ರಯತ್ನದಿಂದ ಬುದ್ಧನಿಗೆ ತಿಳಿದುಬಂದದ್ದು ಯಾವುದೇ ರಾಗವಾಗಲಿ ದ್ವೇಷವಾಗಲಿ ಹುಟ್ಟುವುದು ತನ್ನ ಒಳಗೆ ಹೊರತು ಹೊರಗಿನಿಂದಲ್ಲ. ತನ್ನ ಸುಖಕ್ಕೆ ತನ್ನ ಸಂತೋಷಕ್ಕೆ ತಾನೇ ಕಾರಣ ಹೊರತು ಇನ್ನಾರು ಅಲ್ಲ ಎನ್ನುವುದನ್ನು ಅರಿತುಕೊಂಡ. ಯಾವುದೇ ಕಾರಣದಿಂದ ಮನಸ್ಸಿನಲ್ಲಿ ವಿಕಾರವು ಉದ್ಭವವಾದಾಗ



1. ಉಸಿರಿನ ಗತಿಯಲ್ಲಿ ಏರುಪೇರು ಉಂಟಾಗುತ್ತದೆ,

2. ಸೂಕ್ಷ್ಮವಾಗಿ ಗಮನಿಸಿದಲ್ಲಿ ಶರೀರದ ಪ್ರತಿ ಅಂಗದಲ್ಲಿಯೂ ಯಾವುದಾದರೂ ಒಂದು ರೀತಿಯ ಜೀವರಾಸಾಯನಿಕ ಪ್ರಕ್ರಿಯೆಯಾಗಿ ಸಂವೇದನೆಯನ್ನು ಉಂಟುಮಾಡುವುದು ಎಂದು ಅರಿತನು.

ಈ ಎರಡನ್ನು ಗಮನಿಸುವ ಅಭ್ಯಾಸ ಮಾಡಿದರೆ, ತನ್ನ ಮನಸ್ಸಿನ ವಿಕಾರಗಳನ್ನು ಪರೋಕ್ಷ ರೂಪದಿಂದ ನೋಡುವ ಕೆಲಸವಾಗುತ್ತದೆ ಮತ್ತು ವಿಕಾರಗಳು ಸ್ವತಹ ಕ್ಷೀಣವಾಗುತ್ತಾ ನಿರ್ಮೂಲನವಾಗುತ್ತದೆ ಎನ್ನುವುದನ್ನು ತಿಳಿಸುವ ಧ್ಯಾನದ ತಂತ್ರವೇ ವಿಪಶ್ಯನ.

ಧ್ಯಾನದ ಅಭ್ಯಾಸದಿಂದ ಈ ಅರಿವು ಪಡೆದುದರಿಂದ ಬುದ್ಧನು ಪ್ರಮುಖವಾಗಿ ಧ್ಯಾನವನ್ನೇ ಭೋದಿಸಿದನು. ಆ ಧ್ಯಾನದ ತಂತ್ರವೆ ಮುಂದೆ ಹೆಸರಾದದ್ದು ವಿಪಶ್ಯನ ಧ್ಯಾನ.

ವಿಪಶ್ಯನ ಎಂದರೆ ವಿಶೇಷವಾಗಿ ನೋಡುವುದು ತನ್ನನ್ನೇ ನೋಡುವುದು ಅಥವಾ ಸ್ವಯಂನ ದರ್ಶನ ಅಂತರ್ ದೃಷ್ಟಿ. ನಮ್ಮೊಳಗೆ ಏನಾಗುತ್ತದೆ ಎಂದು ಗ್ರಹಿಸಲು ಹೊರಗಿನ ಸಂಪರ್ಕವನ್ನು ಕಳೆದುಕೊಳ್ಳಬೇಕು.

ಉಸಿರನ್ನು ಗಮನಿಸುವ ಅಭ್ಯಾಸಕ್ಕೆ ಆನಾಪಾನಸತಿ ಎಂದು ಕರೆಯುತ್ತಾರೆ. ಶರೀರದಲ್ಲಿ ಉಂಟಾಗುವ ಸೂಕ್ಷ್ಮ ಸಂವೇದನೆಗಳನ್ನು ಸಾಕ್ಷಿ ಭಾವದಿಂದ ನೋಡುವುದಕ್ಕೆ ವಿಪಶ್ಯನ ಎಂದು ಕರೆಯುತ್ತಾರೆ.

ಅಸಾಧಾರಣ ಸರಳತೆಯನ್ನು ಹೊಂದಿದ್ದು ಯಾವುದೇ ಭ್ರಮೆಗೆ ಅಂಟಿಕೊಳ್ಳದೆ ಕೂಡಲೇ ಫಲಿತಾಂಶ ಕೊಡುವ ಧ್ಯಾನ ಪದ್ದತಿಯಾಗಿದೆ ವಿಪಶ್ಯನ.

**ಆನಾಪಾನಸತಿ:** ಉಸಿರನ್ನು ಗಮನಿಸುವ ಸಾಧನೆಯಲ್ಲಿ, ಉಸಿರನ್ನು ಹತೋಟಿಗೊಳಪಡಿಸದೆ ಅಥವಾ ವ್ಯತ್ಯಾಸ ಪಡಿಸದೆ ಸ್ವಾಭಾವಿಕವಾದ ಉಸಿರಾಟವನ್ನು ಗಮನಿಸುವುದೇ ಆಗಿದೆ .

ವಿಪಶ್ಯನ ಧ್ಯಾನದಲ್ಲಿ ಶರೀರದ ಸಂವೇದನೆಗಳನ್ನು ಕ್ರಮವಾಗಿ ತಲೆಯಿಂದ ಪಾದದವರೆಗೆ ಮತ್ತು ಪಾದದಿಂದ ತಲೆಯವರೆಗೆ ಸುಮ್ಮನೆ ಗಮನಿಸಬೇಕು. ಸಂವೇದನೆಯು ಯಾವುದೇ ಆಗಿರಬಹುದು ಶಾಖ ,ತಂಪು, ಹಗುರ, ಭಾರ, ಒತ್ತಡ , ಮಿಡಿತ, ನವೆಯಾಗುವುದು ಇತ್ಯಾದಿ ಇತ್ಯಾದಿ.

ಉಸಿರಿಗೂ ಮನಸ್ಸಿಗೂ ಗಹನವಾದ ಸಂಬಂಧವಿದೆ, ವಿಪಶ್ಯನವನ್ನು ಚೆನ್ನಾಗಿ ಅಭ್ಯಾಸ ಮಾಡಿದರೆ ಯಾವುದೇ ಕಾರಣದಿಂದ ಮನಸ್ಸಿನಲ್ಲಿ ವಿಕಾರ ಉಂಟಾದಾಗ ಉಸಿರಾಟದ ಗತಿಯು ಬದಲಾಗುವುದರಿಂದ ಮತ್ತು ಶರೀರದಲ್ಲಿ ಉಂಟಾಗುವ ರಾಸಾಯನಿಕ ಪ್ರತಿಕ್ರಿಯೆಯಿಂದಲೂ ನಮಗೆ ಎಚ್ಚರಿಕೆ ದೊರೆಯುತ್ತದೆ . ಉಸಿರನ್ನು ಮತ್ತು ಸೂಕ್ಷ್ಮ ಸಂವೇದನೆಗಳನ್ನು ಸಾಕ್ಷಿ ಭಾವದಿಂದ ಗಮನಿಸಿದಾಗ ಆ ಸಮಯದಲ್ಲಿ ಉದ್ಭವವಾಗುವ ವಿಕಾರಗಳು ನಿರ್ಮೂಲವಾಗುತ್ತವೆ, ಹಾಗೆಯೇ ಅವುಗಳನ್ನು ಗಮನಿಸುತ್ತಾ ಇದ್ದಾಗ ಆ ವಿಕಾರಗಳು ಉತ್ಪನ್ನ ಮಾಡುವ ಅವಲಂಬನೆಯಿಂದ ಸಂಪರ್ಕ ಕಡಿದು ಹೋಗುತ್ತದೆ. ಸತತವಾದ ಅಭ್ಯಾಸದಿಂದ ತನ್ನನ್ನು ತಾನು ಗಮನಿಸುವ ಕಲೆಯು ಎಷ್ಟು ಪುಷ್ಟವಾಗುತ್ತದೋ, ಅಷ್ಟು ಅಷ್ಟು ಮನಸ್ಸಿನ ಸ್ವಭಾವವು ಬದಲಾಗುತ್ತಾ ಹೋಗುತ್ತದೆ. ಯಾಕೆಂದರೆ ಉದಯವಾದ ಯಾವುದೇ ಭಾವ ಹೆಚ್ಚು ಹೊತ್ತು ಇರುವುದಿಲ್ಲ. ಇದ್ದರು ಸ್ವಲ್ಪ ಹೊತ್ತಿನಲ್ಲಿ ಕ್ಷೀಣವಾಗುತ್ತದೆ. ಆದುದರಿಂದ ಮಾಡಬೇಕಾದ ಸಾಧನೆ ಏನೆಂದರೆ ವಿಕಾರವೂ ಉದಯವಾದೊಡನೆ ಅದನ್ನು ಸಾಕ್ಷಿ ಭಾವದಿಂದ ನೋಡಿ ಅದು ಅಧಿಕ ಸಮಯದವರೆಗೆ ನಡೆಯದೆ ಆಳಕ್ಕೆ ಇಳಿಯುವ ಮೊದಲೇ ಅದರ ಶಕ್ತಿಯನ್ನು ಕ್ಷೀಣವಾಗಿಸುವುದು.



ಪ್ರತಿಯೊಬ್ಬ ತನ್ನ ಅರಿವಿನ ಮೂಲಕ ತನ್ನನ್ನೆ ತಾನು ಗಮನಿಸಬೇಕು, ಸ್ವಯಂ ನಿರೀಕ್ಷಣೆ ಮಾಡಿಕೊಳ್ಳ ಬೇಕು ಆಗ ಸಮ್ಯಕ್ ದರ್ಶನವಾಗುತ್ತದೆ. ಜಾಗರೂಕರಾಗಿದ್ದು ಸತ್ಯವನ್ನು ಗಮನಿಸುವ ಅಭ್ಯಾಸವೇ ವಿಪಶ್ಯನ . ಈ ವಿಚಾರದ ಬಗ್ಗೆ ಓದುವುದರಿಂದ ಕೇಳುವುದರಿಂದ ಚರ್ಚೆ ಗೋಷ್ಠಿಗಳಿಂದ ಬೌದ್ಧಿಕ ಸ್ತರದಲ್ಲಿ ಅರಿಯಬಹುದು ಅಷ್ಟೇ. ಅಭ್ಯಾಸ ಮಾಡಲು ಸ್ವಲ್ಪ ಪ್ರೇರಣೆ ದೊರೆಯಬಹುದು. ಆದರೆ ವಾಸ್ತವಿಕವಾಗಿ ಅಭ್ಯಾಸ ಮಾಡುವುದರಿಂದ ಮಾತ್ರವೆ ಲಾಭ ಉಂಟಾಗುತ್ತದೆ. ಹಾಗಾಗಿ ಸತತ ಅಭ್ಯಾಸದ ಅವಶ್ಯಕತೆ ಇದೆ. ಸತತ ಅಭ್ಯಾಸದಿಂದ ಚಿತ್ತವು ನಿರ್ಮಲವಾಗಿ ನಿರ್ವಿಕಾರವಾಗುತ್ತಾ ಹೋಗುತ್ತದೆ . ನಿರ್ಮಲ ನಿರ್ವಿಕಾರ ಮನಸ್ಸು ತನ್ನ ಸ್ವಭಾವ ಗುಣಗಳಾದ ಮೈತ್ರಿ ಕರುಣೆ ಮುದಿತ ಮತ್ತು ಸಮತೆಯ ಸದ್ಗುಣಗಳಿಂದ ತುಂಬುತ್ತದೆ. ಇದರಿಂದ ಸಾಧಕನು ಸ್ವಯಂ ಕೃತಕೃತ್ಯನಾಗುತ್ತಾನೆ ಮತ್ತು ಸಮಾಜದಲ್ಲಿಯೂ ಸುಖ ಶಾಂತಿಗೆ ಕಾರಣನಾಗುತ್ತಾನೆ.

ಹತ್ತು ದಿನಗಳ ಕಾಲ ನಡೆಯುವ ವಿಪಶ್ಯನ ಧ್ಯಾನಶಿಬಿರದಲ್ಲಿ ಶಿಬಿರಾರ್ಥಿಗಳು 10 ದಿನದವರೆಗೆ ಶಿಬಿರದ ಸ್ಥಳದಲ್ಲಿ ಇರಬೇಕಾಗುವುದು. ಪ್ರತಿಯೊಬ್ಬ ಸಾಧಕರು ಯಾವುದೇ ರೀತಿಯ ಪ್ರಾಣಿ ಹಿಂಸೆ, ಕಳ್ಳತನ, ಮಾದಕ ವಸ್ತುಗಳ ಸೇವನೆ ಮಾಡದಿರುವುದು ಮತ್ತು ಸುಳ್ಳನ್ನು ಹೇಳದಿರುವುದು ಮತ್ತು ಬ್ರಹ್ಮಚರ್ಯ ಪಾಲನೆ ಮಾಡುವುದು ಅಗತ್ಯ. ಶಿಬಿರ ಪ್ರಾರಂಭವಾದಾಗಿನಿಂದ ಹಿಡಿದು ಹತ್ತನೇ ದಿನ ಬೆಳಿಗ್ಗೆ 10 ಗಂಟೆಯವರೆಗೂ ಆರ್ಯಮೌನ ಅಂದರೆ ಮಾತು ಮತ್ತು ಶರೀರದ ಮೌನವನ್ನು ಕಡ್ಡಾಯವಾಗಿ ಪಾಲಿಸಬೇಕು. ದೈನಿಕ ನೈಸರ್ಗಿಕ ಅವಶ್ಯಕತೆಗಳ ವಿನಹ ಸಾಧನೆಯ ನಿರಂತರ ಅಭ್ಯಾಸಕ್ಕಾಗಿ ಹೆಚ್ಚು ಸಮಯ ದೊರೆಯಲು ಬೆಳಗ್ಗೆ 4:30 ಇಂದ 9 ರವರೆಗೆ ಸಾಧನೆಯ ವೇಳಾಪಟ್ಟಿಯನ್ನು


ನಿರ್ಧರಿಸಿರುತ್ತಾರೆ. ಈ ಅಮೂಲ್ಯ ಸಾಧನೆಯ ಶಿಕ್ಷಣಕ್ಕೆ ಶುಲ್ಕವಿಲ್ಲದೆಯೇ ನೀಡಲಾಗುತ್ತದೆ. ಶಿಬಿರದ ಖರ್ಚನ್ನು ಹಳೆಯ ಸಾಧಕರ ಕೃತಜ್ಞತಾ ಪೂರಕವಾದ ದಾನದಿಂದ ಬರಿಸಲಾಗುತ್ತದೆ. ಶಿಬಿರದ ಅವಧಿಯ ಸಮಯದಲ್ಲಿ ಯಾವುದೇ ಅನ್ಯ ಪ್ರಕಾರದ ಸಾಧನ ವಿಧಿಗಳನ್ನು ಮಾಡಲು ಅನುಮತಿ ಇರುವುದಿಲ್ಲ. ಶಿಬಿರದಲ್ಲಿ ಊಟ, ವಸತಿ ಎಲ್ಲವನ್ನು ಉಚಿತವಾಗಿ ಒದಗಿಸಲಾಗುತ್ತದೆ. ಶಿಬಿರದ ಕೊನೆಯಲ್ಲಿ ಸಾಧಕನಿಗೆ ಅನೇಕ ಅನುಭವಗಳಾಗುತ್ತವೆ

1. ಧ್ಯಾನ ಅತ್ಯಂತ ಕಷ್ಟದ ಕೆಲಸ.

ಧ್ಯಾನ ಆರಾಮವಾಗಿರುವುದು ಅಥವಾ ಕೆಲಸ ರಹಿತವಾಗಿರುವುದು ಎಂಬ ಸಾರ್ವತ್ರಿಕ ಕಲ್ಪನೆ ನಿಜವಲ್ಲ ಎನ್ನುವುದು ಗೊತ್ತಾಗುತ್ತದೆ.

2. ಯಾರಿಗೆ ಆದರೂ ಮಾನಸಿಕ ಪ್ರವೃತ್ತಿಗಳನ್ನು ಒಂದು ಗೊತ್ತಾದ ರೀತಿಯಲ್ಲಿ ನಿರ್ದೇಶನ ಮಾಡಲು ಸತತವಾದ ಪ್ರಯತ್ನ ಬೇಕಾಗುತ್ತದೆ. ಅದನ್ನು ಸಂಪೂರ್ಣ ಪ್ರಯತ್ನದಿಂದ ಯಾವುದೇ ಉದ್ವೇಗವಿಲ್ಲದೆ ಮಾಡಲು ತಿಳಿಸಲಾಗುತ್ತದೆ.

3. ಶಿಬಿರದಲ್ಲಿ ಉಂಟಾಗುವ ಸಂವೇದನೆಗಳು ಸುಖಪ್ರದವಾಗಲಿ , ಸಂತೋಷದಾಯಕವಾಗಲಿ ಇರುವುದಿಲ್ಲ. ಧ್ಯಾನ ಮಾಡುವುದರಿಂದ ಒಮ್ಮೊಮ್ಮೆ ಶಾಂತಿ



ದೊರೆಯುವುದಕ್ಕೆ ಬದಲಾಗಿ ಮನಸ್ಸಿನಲ್ಲಿ ಬರಿ ತಳಮಳವೆ ಉಂಟಾಗುವಂತೆ ಕಂಡುಬರುತ್ತದೆ. ಶಿಬಿರದ ದಿನವಿಡೀ ಸಾಧನೆ ಮಾಡಬೇಕಾಗಿರುವ ವೇಳಾಪಟ್ಟಿ, ಅಲ್ಲಿಯ ಕೆಲವು ಅನಾನುಕೂಲ , ಶಿಸ್ತು,ಬುದ್ಧಿವಾದ,ಸೂಚನೆಗಳು ಧ್ಯಾನದ ವಿಶಿಷ್ಟ ವಿಧಾನ ಇವೆಲ್ಲ ನಮ್ಮ ಮನಸ್ಸಿಗೆ ಒಗ್ಗದಂತೆ ಕಠಿಣವಾಗಿ ಕಾಣುತ್ತವೆ.

ಧ್ಯಾನವನ್ನು ಮುಂದುವರಿಸುತ್ತಾ ಬಂದಂತೆ, ಸಂವೇದನೆಗಳು ಸತತವಾಗಿ ಬದಲಾವಣೆಯಾಗುತ್ತವೆ ಎಂಬ ಒಂದು ಪ್ರಮುಖ ಸತ್ಯ ಅರಿವಾಗುತ್ತದೆ. ಪ್ರತಿ ಕ್ಷಣವು ಶರೀರದ ಪ್ರತಿಯೊಂದು ಭಾಗದಲ್ಲಿಯೂ ಒಂದಲ್ಲ ಒಂದು ಸಂವೇದನೆ ಆಗುತ್ತಿರುತ್ತದೆ . ಸಂವೇದನೆಗಳು ಸದಾ ಬದಲಾವಣೆಯಾಗುವುದರಿಂದ ಅಶಾಶ್ವತ ಮತ್ತು ಅನಿತ್ಯತೆ ಪ್ರಕೃತಿಯ ನಿಯಮ ಎನ್ನುವ ಸತ್ಯ ಮನಸ್ಸಿನ ಆಳಕ್ಕೆ ತಿಳಿಯುತ್ತದೆ . ನಮ್ಮ ಇಡೀ ಪ್ರಯತ್ನವೆಲ್ಲ ಹೇಗೆ ಪ್ರತಿಕ್ರಿಯೆ ಉಂಟುಮಾಡಬಾರದು ಎಂಬುದನ್ನು ಕಲಿಯುವುದು ಆಗಿದೆ ಸಂವೇದನೆ ಒಂದು ಹುಟ್ಟಿದಾಗ ಇಷ್ಟಾನಿಷ್ಟಗಳು ಪ್ರಾರಂಭವಾಗುತ್ತವೆ. ಅವುಗಳ ಬಗ್ಗೆ ಎಚ್ಚರಿಕೆ ವಹಿಸದಿದ್ದಲ್ಲಿ ಪ್ರಬಲ ರಾಗ ದ್ವೇಷಗಳಾಗಿ ಪರಿವರ್ತನೆಯಾಗುತ್ತವೆ.

ಹತ್ತು ದಿನದ ಶಿಬಿರದ ನಂತರ ವಿಪಶ್ಯನ ಧ್ಯಾನದ ನಿಜವಾದ ಪ್ರಯೋಜನವನ್ನು ಪಡೆಯಲು ದಿನವು ಮುಂಜಾನೆ ಮತ್ತು ಸಂಜೆ ಒಂದು ಗಂಟೆ ಧ್ಯಾನವನ್ನು ಮಾಡುವುದು ಅಗತ್ಯ. ಅಲ್ಲದೆ ದಿನವಿಡೀ ಪ್ರತಿ ಕೆಲಸ ಮಾಡುವಾಗಲೂ ಸಂವೇದನೆಗಳನ್ನು ಗಮನಿಸುವುದನ್ನು ಅಭ್ಯಾಸ ಮಾಡಿಕೊಂಡರೆ, ತಕ್ಷಣ ಪ್ರತಿಕ್ರಿಯೆ ಮಾಡುವ ನಮ್ಮ ಹಳೆಯ ಅಭ್ಯಾಸದಿಂದ ಹೊರಬರುತ್ತೇವೆ. ಅರಿವಿನಿಂದ ಮತ್ತು ಸಮಚಿತ್ತತೆಯಿಂದ ಇರುವುದರಿಂದ ಕೆಲವು ಕ್ಷಣಗಳಲ್ಲಿಯಾದರೂ ನಾವು ಪ್ರತಿಕ್ರಿಯೆ ಮಾಡದೇ ಇದ್ದಾಗ ಆ ಕ್ಷಣಗಳು ಎಷ್ಟೇ ಚಿಕ್ಕವಾಗಿದ್ದರೂ ಬಹಳ ಬಲಯುತವಾಗಿರುತ್ತವೆ.

ಈ ಕಾರ್ಯವಿಧಾನವನ್ನು ಕಾರ್ಯ ಚಾಲನೆ ಮಾಡಲು ನಾವು ಏನು ಮಾಡಬೇಕಾಗಿಲ್ಲ ಯಾವುದೇ ಹೊಸ ಪ್ರತಿಕ್ರಿಯೆಯಿಂದ ದೂರವಿರಬೇಕು. ಅನುಭವಿಸುವ ಸಂವೇದನೆಗಳಿಗೆ ಕಾರಣವೇನೆ ಇರಲಿ ನಾವು ಸಮಚಿತ್ತತೆಯಿಂದ ಗಮನಿಸಬೇಕು. ಸಹನೆಯಿಂದ ಪುನರಾವರ್ತಗೊಳಿಸಲ್ಪಟ್ಟ ನಿರಂತರ ಅಭ್ಯಾಸದಿಂದ ಸಮಚಿತ್ತತೆಯಲ್ಲಿರುವ ಈ ಕ್ಷಣಗಳು ಹೆಚ್ಚಾದಂತೆ ಪ್ರತಿಕ್ರಿಯೆಯ ಕ್ಷಣಗಳು ಕಡಿಮೆಯಾಗುತ್ತಾ ಹೋಗುತ್ತವೆ. ಕೊನೆಗೆ ಮನಸ್ಸು ಹಳೆಯ ಮತ್ತು ಹೊಸದಾದ ಎಲ್ಲಾ ಪ್ರತಿಕ್ರಿಯೆಗಳಿಂದ ದೂರವಾಗಿ ಎಲ್ಲ ದುಃಖಗಳಿಂದಲೂ ಮುಕ್ತವಾಗುತ್ತದೆ.




**ಡಾ. ನಾ. ಸೋಮೇಶ್ವರ**
ವಿಭಾಗೀಯ ಸಂಪಾದಕರು ಮತ್ತು ಲೇಖಕರು
ಬೆಂಗಳೂರು

ವೈದ್ಯ ಲೋಕದ ವಿಸ್ಮಯಗಳು...

# ಆಧುನಿಕ ನಂಜುರಾಹಿತ್ಯ ಪಿತಾಮಹ ಜೋಸೆಫ್ ಲಿಸ್ಟರ್

ಮಧ್ಯಯುಗದ ಯೂರೋಪಿನಲ್ಲಿ ಶಸ್ತ್ರಚಿಕಿತ್ಸೆಯೆನ್ನುವುದು ನರಕ ಪ್ರತಿರೂಪವಾಗಿತ್ತು. ಶಸ್ತ್ರವೈದ್ಯರು ತಮ್ಮ ಕೈಗಳನ್ನು ತೊಳೆಯುತ್ತಿರಲಿಲ್ಲ. ರಕ್ತಸಿಕ್ತ ಕೋಟನ್ನು ಧರಿಸುತ್ತಿದ್ದರು. ಅವನ್ನು ಎಂದಿಗೂ ಒಗೆಯುತ್ತಿರಲಿಲ್ಲ. ಹೊಲಿಗೆ ದಾರವನ್ನು ತಮ್ಮ ಕೋಟಿನ ಕಾಜಗಳಲ್ಲಿ ಸಿಕ್ಕಿಸಿಕೊಂಡಿರುತ್ತಿದ್ದರು. ಇನ್ನು ಶಸ್ತ್ರಚಿಕಿತ್ಸಾ ಉಪಕರಣಗಳನ್ನು ಸ್ವಚ್ಛಗೊಳಿಸುವ ಪಾಪ ಕಾರ್ಯವನ್ನು ಎಂದಿಗೂ ಮಾಡುತ್ತಿರಲಿಲ್ಲ. ಯಾರ ಕೈಗಳು ಮತ್ತು ಯಾರ ಬಟ್ಟೆಗಳು ಹೆಚ್ಚು ರಕ್ತಸಿಕ್ತವಾಗಿರುತ್ತಿದ್ದವೋ, ಅವರು ಯಶಸ್ವೀ ವೈದ್ಯರು ಎಂದೆನಿಸಿಕೊಳ್ಳುತ್ತಿದ್ದರು. ಇಂತಹ ಪರಿಸರದಲ್ಲಿ ನಡೆಸಿದ ಶಸ್ತ್ರಚಿಕಿತ್ಸೆಗಳು ಯಶಸ್ವಿಯಾಗುವುದು ಅಪರೂಪವಾಗಿತ್ತು. ಗಾಯಗಳು ಕೊಳೆತು, ಸಾವು ಅನಿವಾರ್ಯವಾಗಿತು.



ಜೋಸೆಫ್ ಲಿಸ್ಟರ್

ಜೋಸೆಫ್ ಲಿಸ್ಟರ್: ಜೋಸೆಫ್ ಲಿಸ್ಟರ್ ಇಂಗ್ಲಂಡಿನ ಎಸೆಕ್ಸ್ ನಗರದಲ್ಲಿ 1827ರಲ್ಲಿ ಹುಟ್ಟಿದ. ತಂದೆ ಜೋಸೆಫ್ ಜಾಕ್ಸನ್. ತಾಯಿ ಇಸಬೆಲ್ಲ ಲಿಸ್ಟರ್. ಇವರ ನಾಲ್ಕನೆಯ ಮಗ. ಜೋಸೆಫ್ ಜಾಕ್ಸನ್ ರಾಯಲ್ ಸೊಸೈಟಿಯ ಫೆಲೋ ಆಗಿ ಆಯ್ಕೆಯಾಗಿದ್ದ. ಸಂಯುಕ್ತ ಸೂಕ್ಷ್ಮದರ್ಶಕಗಳಲ್ಲಿ ಬಳಸುವ ಮಸೂರವನ್ನು ಈತ ಸಿದ್ಧಪಡಿಸಿದ್ದ. ಜೊತೆಗೆ ಅಧಿಕೃತ ವೈದ್ಯಕೀಯ ಪದವಿ ಇಲ್ಲದ ಅಳಲೆಕಾಯಿ ಪಂಡಿತನೂ (ಕ್ವಾಕ್) ಆಗಿದ್ದ. ಹಾಗಾಗಿ ತಂದೆಯ ವೈಜ್ಞಾನಿಕ ಮನೋಭಾವ, ಪ್ರಯೋಗಗಳ ಮೂಲಕ ಪುರಾವೆಯನ್ನು ಹುಡುಕುವ ಗುಣ ಹಾಗೂ ಅಳಲೆಕಾಯಿ ಪಾಂಡಿತ್ಯವು ಮಗನ ಮೇಲೂ ಅಪಾರ ಪರಿಣಾಮವನ್ನು ಬೀರಿತ್ತು. ಲಿಸ್ಟರ್ ತನ್ನ ಪ್ರಾಥಮಿಕ ಶಿಕ್ಷಣವನ್ನು ಹಾರ್ಟ್‌ಫೋರ್ಡ್‌ಶೈರ್ ಮತ್ತು ಟೋಟೆನ್‌ಹ್ಯಾಮ್ ಎಂಬಲ್ಲಿ ಭಾಷಾ ವಿಜ್ಞಾನ, ಗಣಿತ ವಿಜ್ಞಾನ ಹಾಗೂ ನೈಸರ್ಗಿಕ ವಿಜ್ಞಾನಗಳ ಪ್ರಾಥಮಿಕ ಶಿಕ್ಷಣವನ್ನು ಪಡೆದ. ತನ್ನ 17ನೆಯ ವಯಸ್ಸಿನಲ್ಲಿ ಯೂನಿವರ್ಸಿಟಿ ಕಾಲೇಜ್ ಆಫ್ ಲಂಡನ್‌ಗೆ ಸೇರಿದ. ಅಂದು ಲಂಡನ್ನಿನ ವಿಶ್ವವಿದ್ಯಾಲಯದಲ್ಲಿ ಅಳಲೆಕಾಯಿ ಪಂಡಿತರಿಗೂ ಪ್ರವೇಶವಿತ್ತು. ಹಾಗಾಗಿ, ಅಂದಿನ ಶಿಕ್ಷಣ ಪದ್ಧತಿಯಂತೆ ಲಿಸ್ಟರ್ ಮೊದಲು ಗಾಯಗಳಿಗೆ ಪಟ್ಟಿ ಕಟ್ಟುವ ವಿಭಾಗದಲ್ಲಿ ತನ್ನ ಕೆಲಸವನ್ನು ಆರಂಭಿಸಿದ (1851). ವೈದ್ಯಕೀಯ ಶಿಕ್ಷಣವನ್ನು ಪೂರೈಸಿದ ಮೇಲೆ ಜಾನ್ ಎರಿಕ್ ಎರಿಕ್ಸನ್ (1818–1896) ಅವರ ಬಳಿ ಶಿಷ್ಯವೃತ್ತಿಯನ್ನು

ಕೈಗೊಂಡ. 1952 ರಲ್ಲಿ ವೈದ್ಯಕೀಯ ಶಿಕ್ಷಣದ ಸ್ನಾತಕನಾಗಿ (ಬ್ಯಾಚೆಲರ್ ಆಫ್ ಮೆಡಿಸಿನ್) ಆಗಿ ಪದವಿಯನ್ನು ಗಳಿಸಿದ. ನಂತರ ರಾಯಲ್ ಕಾಲೇಜ್ ಆಫ್ ಸರ್ಜನ್ಸ್ ಸೇರಿ ಪೂರ್ಣ ಪ್ರಮಾಣದ ಶಸ್ತ್ರವೈದ್ಯನಾದ.

ಶಸ್ತ್ರವೈದ್ಯನಾಗಿದ್ದ ಜೋಸೆಫ್ ಲಿಸ್ಟರ್, ಮತ್ತೊರ್ವ ಪ್ರೊಫೆಸರ್ ವಿಲಿಯಮ್ ಶಾರ್ಪೆ (1802–1880) ಅವರ ಸಲಹೆಯ ಮೇರೆಗೆ, 1853ರಲ್ಲಿ ಎಡಿನ್ಬರೋ ನಗರಕ್ಕೆ ಬಂದ. ಅಲ್ಲಿ ಪ್ರಖ್ಯಾತ ಶಸ್ತ್ರವೈದ್ಯ ಜೇಮ್ಸ್ ಸೈಮ್ (1799–1870) ಅವರ ಬಳಿ ಶಿಷ್ಯವೃತ್ತಿಯನ್ನು ಕೈಗೊಂಡ. 1856ರಲ್ಲಿ ರಾಯಲ್ ಇನ್‌ಫರ್ಮರಿಯಲ್ಲಿ (ಆಸ್ಪತ್ರೆ) ಅಸಿಸ್ಟಂಟ್ ಸರ್ಜನ್ ಆಗಿ ನೇಮಕವಾದ. ಅದೇ ವರ್ಷ ಸೈಮಿನ ಹಿರಿಯ ಮಗಳು ಆಗ್ನೆಸ್ ಎನ್ನುವಾಕೆಯನ್ನು ಮದುವೆಯಾದ. ಈಕೆಯು ತನ್ನ ಜೀವಮಾನ ಪೂರ್ತಿ ಲಿಸ್ಟರನ ಸಹಾಯಕಳಾಗಿ ಕೆಲಸ ಮಾಡಿ, ಅವರ ಎಲ್ಲ ರೀತಿಯ ಸಂಶೋಧನೆಯಲ್ಲಿ ಪಾಲುಗೊಂಡಳು.

1860ರಲ್ಲಿ ಲಿಸ್ಟರ್ ರಾಯಲ್ ಸೊಸೈಟಿಯ ಫೆಲೋ ಆಗಿ ಆಯ್ಕೆಯಾದ. ನಂತರ ಗ್ಲಾಸ್ಗೋ ವಿಶ್ವವಿದ್ಯಾಲಯದಲ್ಲಿ ಶಸ್ತ್ರವೈದ್ಯಕೀಯದ ಪ್ರೊಫೆಸರ್ ಆದ. 1861ರಲ್ಲಿ ಗ್ಲಾಸ್ಗೋ ರಾಯಲ್ ಇನ್‌ಫರ್ಮರಿಯಲ್ಲಿ ಕೆಲಸಕ್ಕೆ ಸೇರಿದ. ಅವನ ಬಳಿ ಅನೇಕ ವೈದ್ಯಕೀಯ ವಿದ್ಯಾರ್ಥಿಗಳು ಅಧ್ಯಯನವನ್ನು ಮಾಡುತ್ತಿದ್ದರು. ಈ ಅವಧಿಯಲ್ಲಿ ಆತನಿಗೆ ಅನೇಕ ಪ್ರಶಸ್ತಿಗಳು ಹಾಗೂ ಗೌರವವೂ ದೊರೆಯಿತು. ಕೊನೆಗೆ ಫೆಬ್ರವರಿ 10. 1912ರಲ್ಲಿ ತನ್ನ 84ನೆಯ ವಯಸ್ಸಿನಲ್ಲಿ ಮರಣಿಸಿದ.

ಲೂಯಿ ಪ್ಯಾಶ್ಚರ್: ಜೋಸೆಫ್ ಲಿಸ್ಟರ್ ಗಾಯಗಳು ಏಕೆ ಕೊಳೆಯುತ್ತವೆ, ಗಾಯಗಳು ಕೊಳೆಯದಂತೆ ತಡೆಗಟ್ಟಲು ಸಾಧ್ಯವಿಲ್ಲವೆ ಎಂದು ಸುದೀರ್ಘಕಾಲದಿಂದಲೂ ಯೋಚಿಸುತ್ತಿದ್ದ. ಈ ಬಗ್ಗೆ ತನ್ನ ಗೆಳೆಯ ಥಾಮಸ್ ಆಂಡರ್ಸನ್ (1819–1874) ಬಳಿ ಚರ್ಚಿಸುವಾಗ, ನೀನು ಲೂಯಿ ಪ್ಯಾಶ್ಚರ್ ಅವರ ಪ್ರಬಂಧಗಳನ್ನು ಓದಿಲ್ಲವೆ ಎಂದು ಪ್ರಶ್ನಿಸಿದ. ಲಿಸ್ಟರ್ ಇಲ್ಲವೆಂದಾಗ, ಆಂಡರ್ಸನ್ ಆ ಪ್ರಬಂಧಗಳ ಪ್ರತಿಯನ್ನು ಒದಗಿಸಿದ. ಅವು ಲಿಸ್ಟರನ ಬದುಕಿಗೆ ಮಹತ್ತರ ತಿರುವನ್ನೇ ನೀಡಿದವು.

ಹಾಲೆಂಡಿನ ಆಂಟನ್‌ವಾನ್ ಲ್ಯೂವೆನ್‌ಹಾಕನು (1632–1723) ಕ್ರಿ.ಶ. 1673ರಷ್ಟು ಹಿಂದೆಯೇ ಸೂಕ್ಷ್ಮದರ್ಶಕವನ್ನು ಅಭಿವೃದ್ಧಿಪಡಿಸಿ, ಅದೃಶ್ಯ ಲೋಕದ ಅಗೋಚರ ಜೀವಿಗಳ ಪರಿಚಯವನ್ನು ಮಾಡಿಸಿದ್ದ. ಆದರೆ ಈ ಅಗೋಚರ ಸೂಕ್ಷ್ಮ ಜೀವಿಗಳಲ್ಲಿ ಕೆಲವು ರೋಗಜನಕಗಳಾಗಿವೆ ಎಂಬ ಮಾಹಿತಿಯು ಜಗತ್ತಿಗೆ ತಿಳಿದಿರಲಿಲ್ಲ. ಅದನ್ನು ಅನುಮಾನವಿಲ್ಲದಂತೆ ನಿರೂಪಿಸಿದವನು ಲೂಯಿ ಪ್ಯಾಶ್ಚರ್. ಅವನ ಸಂಶೋಧನೆಯ ಸಾರಾಂಶವನ್ನು ಈ ಕೆಳಕಂಡಂತೆ ಸಂಗ್ರಹಿಸಬಹುದು.

- ಸ್ವಯಂಜನನ ಸಿದ್ಧಾಂತ (ಸ್ಪಾಂಟೇನಿಯಸ್ ಜನರೇಶನ್): ಅಜೀವದಿಂದ ಜೀವ ಹುಟ್ಟುತ್ತದೆ ಎನ್ನುವ ನಂಬಿಕೆಯಿದ್ದ ಕಾಲದಲ್ಲಿ, ಜೀವದಿಂದ ಜೀವ ಹುಟ್ಟುತ್ತದೆ. ಅಜೀವದಿಂದ ಜೀವ ಹುಟ್ಟಲು ಸಾಧ್ಯವಿಲ್ಲ ಎಂದ. ಸೂಕ್ಷ್ಮಜೀವಿಗಳು ವಾತಾವರಣದಿಂದ ಹಾಲಿನೊಳಗೆ



*ಲೂಯಿ ಪ್ಯಾಶ್ಚರ್ ಅವರನ್ನು ಗೌರವಿಸುತ್ತಿರುವ ಜೋಸೆಫ್ ಲಿಸ್ಟರ್ (ಮೆಟ್ಟಿಲ ಮೇಲಿರುವವರು)*



*ಕಾರ್ಬಾಲಿಕ್ ಆಸಿಡ್ ಸ್ಪ್ರೇ*

ಪ್ರವೇಶಿಸಿ, ಅದನ್ನು ಹುಳಿಯಿಸುತ್ತವೆ (ಫರ್ಮೆಂಟೇಶನ್) ಅವು ನೇರವಾಗಿ ಆಹಾರಾಂಶಗಳಲ್ಲಿ ಹುಟ್ಟುವುದಿಲ್ಲ ಎಂಬುದನ್ನು ಪ್ರಯೋಗ ಸಹಿತವಾಗಿ ನಿರೂಪಿಸಿದ.

- ರೋಗಜನಕ ಸೂಕ್ಷ್ಮಜೀವಿ ಸಿದ್ಧಾಂತ: ರೋಗಗಳಿಗೆ ಸೂಕ್ಷ್ಮಜೀವಿಗಳು ಕಾರಣ ಎಂಬ ಸಿದ್ಧಾಂತವನ್ನು ಪ್ರತಿಪಾದಿಸಿದವರಲ್ಲಿ ಪ್ಯಾಶ್ಚರ್ ಮೊದಲಿಗನಲ್ಲ. ಈತನಿಗಿಂತಲೂ ಮೊದಲೇ ಗಿರೋಲಾಮೋ ಪ್ರೊಕ್ಯಾಸ್ಟೊರೊ (1478–1553), ಅಗಸ್ಟಿನೋ ಬಾಸ್ಸಿ (1773–1856), ಫ್ರೆಡ್ರಿಕ್ ಹೆನ್ಲೆ (1809–1885) ಮುಂತಾದವರು ಈ ಸಿದ್ಧಾಂತವನ್ನು ಮಂಡಿಸಿದ್ದರು. ಆದರೆ ಅವರಿಗೆ ತಮ್ಮ ಸಿದ್ಧಾಂತಕ್ಕೆ ಅಗತ್ಯವಾದ ಪುರಾವೆಯನ್ನು ಒದಗಿಸಲು ಸಾಧ್ಯವಾಗಿರಲಿಲ್ಲ. ಪ್ಯಾಶ್ಚರ್ ಒದಗಿಸಿದ.

- ಬಾಣಂತಿ ಜ್ವರ: ಬಾಣಂತಿ ಜ್ವರಕ್ಕೆ ಸೂಕ್ಷ್ಮಜೀವಿಗಳು ಕಾರಣವೆಂದ. ಸ್ವಚ್ಛತೆಯನ್ನು ಪರಿಪಾಲಿಸಿದರೆ ಸೂಕ್ಷ್ಮಜೀವಿಗಳನ್ನು ನಿಗ್ರಹಿಸಬಹುದು ಎಂಬುದನ್ನು ತೋರಿಸಿಕೊಟ್ಟ. ಈತನ ಈ ಅಂಶವು ಲಿಸ್ಟರನ ಗಮನವನ್ನು ಸೆಳೆಯಿತು.

ಜೋಸೆಫ್ ಲಿಸ್ಟರನಿಗೆ ಈ ಪ್ರಬಂಧಗಳನ್ನು ಓದಿದ ಮೇಲೆ, ಮಾಂಸವು ಕೊಳೆಯಲು, ಹಾಲು ಹುಳಿಯಲು, ಬಾಣಂತಿ ಜ್ವರ ಬರಲು ಹಾಗೂ ಗಾಯಗಳು ಗ್ಯಾಂಗ್ರಿನ್ ಆಗಿ ಪರಿವರ್ತಿತವಾಗಲು ಸೂಕ್ಷ್ಮಜೀವಿಗಳು ಕಾರಣವಾಗಿರಬಹುದು ಎಂದು ಅನಿಸಿತು. ಇದು ಸತ್ಯವೇ ಆಗಿದ್ದಲ್ಲಿ, ಅವು ಗಾಯದೊಳಗೆ ಪ್ರವೇಶಿಸದಂತೆ ತಡೆಗಟ್ಟುವುದು ಹೇಗೆ ಎಂದು ಯೋಚಿಸಿದ. ಇದಕ್ಕೆ ಪ್ಯಾಶ್ಚರ್ ಮೂರು ಮಾರ್ಗಗಳನ್ನು ಸೂಚಿಸಿದ್ದ.

- ಸೂಕ್ಷ್ಮಜೀವಿಗಳು ಒಳಪ್ರವೇಶಿಸದಂತೆ ತಡೆಗಟ್ಟುವುದು.

- ಸೂಕ್ಷ್ಮಜೀವಿಗಳನ್ನು ಅತಿಯಾದ ಉಷ್ಣತೆಗೆ ಒಡ್ಡುವುದು

- ಸೂಕ್ಷ್ಮಜೀವಿಗಳನ್ನು ರಾಸಾಯನಿಕ ದ್ರಾವಣಗಳಿಗೆ ಗುರಿಪಡಿಸುವುದು.

ಮೊದಲ ಎರಡು ಸಲಹೆಗಳನ್ನು ಮನುಷ್ಯರಿಗೆ ಅನ್ವಯಿಸುವುದು ಕಷ್ಟವಾಗಿತ್ತು. ಗಾಯಗಳಲ್ಲಿರುವ ಸೂಕ್ಷ್ಮಕ್ರಿಮಿಗಳನ್ನು ರಾಸಾಯನಿಕ ದ್ರಾವಣಗಳಿಂದ ನಿಗ್ರಹಿಸುವ ವಿಧಾನವು ಸುಲಭವಾಗಿತ್ತು. ಅಂದಿನ ದಿನಗಳಲ್ಲಿ ಮೋರಿ ಕಟ್ಟಿಕೊಂಡಾಗ, ಅದನ್ನು ಸ್ವಚ್ಛಗೊಳಿಸಲು ಕಾರ್ಬಾಲಿಕ್ ಆಸಿಡ್ (ಫೀನಾಲ್) ನ್ನು ಬಳಸುತ್ತಿದ್ದರು. ಒಂದು ಸಲ ಹುಡುಗನೊಬ್ಬನ ಕಾಲಿನ ಮೇಲೆ ಕುದುರೆಗಾಡಿ ಹತ್ತಿ ಗಾಯವಾಯಿತು. ಜೋಸೆಫ್ ಲಿಸ್ಟರ್, ಆ ಹುಡುಗನ ಗಾಯವನ್ನು ಕಾರ್ಬಾಲಿಕ್ ಆಮ್ಲದಿಂದ ತೊಳೆದ. ಕಾರ್ಬಾಲಿಕ್ ಆಮ್ಲದ ಪಟ್ಟಿಯನ್ನು ಹಾಕಿದ. ಪ್ರತಿ ದಿನ ಪಟ್ಟಿಯನ್ನು ಬದಲಾಯಿಸುತ್ತಿದ್ದ. ಗಾಯ ಕ್ರಮೇಣ

ಗುಣವಾಯಿತು. ಕೀವುಗಟ್ಟಲೇ ಇಲ್ಲ!

ಜೋಸೆಫ್ ಲಿಸ್ಟರ್ ತನ್ನ ಪ್ರಥಮ ಯಶಸ್ಸಿನಿಂದ ಉತ್ತೇಜಿತನಾಗಿ ತಾನು ಶಸ್ತ್ರಚಿಕಿತ್ಸೆಯಲ್ಲಿ ಬಳಸುವ ಎಲ್ಲ ಉಪಕರಣಗಳನ್ನು ಕಾರ್ಬಾಲಿಕ್ ಆಮ್ಲದಿಂದ ತೊಳೆದ. ಶಸ್ತ್ರಚಿಕಿತ್ಸೆ ಮಾಡಬೇಕಾದ ದೇಹದ ಭಾಗವನ್ನು ಕಾರ್ಬಾಲಿಕ್ ಆಮ್ಲದಿಂದ ಸ್ವಚ್ಛಗೊಳಿಸಿದ. ಗಾಯಗಳನ್ನು ಹೊಲಿಯಲು ಬಳಸುವ ದಾರವನ್ನೂ ಕಾರ್ಬಾಲಿಕ್ ಆಮ್ಲದಿಂದ ಸಂಸ್ಕರಿಸಿದ. ಗಾಯದ ಮೇಲೆ ಕಟ್ಟುವ ಪಟ್ಟಿಯನ್ನೂ ಸಹಾ ಕಾರ್ಬಾಲಿಕ್ ಆಮ್ಲದಿಂದಲೇ ಸಿದ್ಧಪಡಿಸಿದ. ಆತನ ಶಸ್ತ್ರಚಿಕಿತ್ಸೆಗಳು ಯಶಸ್ವಿಯಾಗಲಾರಂಭಿಸಿದವು. ಗಾಯಗಳು ಗ್ಯಾಂಗ್ರಿನ್ ಆಗಿ ಪರಿವರ್ತಿತವಾಗುವುದು ನಿಂತಿತು.

ಲಿಸ್ಟರ್ 1865–1867ರ ನಡುವೆ 11 ಪ್ರಯೋಗಗಳನ್ನು ನಡೆಸಿದ. ಅವೆಲ್ಲವೂ ಸಂಯುಕ್ತ ಅಸ್ಥಿಭಂಗದ (ಕಾಂಪೌಂಡ್ ಫ್ರಾಕ್ಚರ್) ಪ್ರಕರಣಗಳಾಗಿದ್ದವು. ಒಂಬತ್ತು ಪ್ರಕರಣಗಳು ಯಾವುದೇ ತೊಡಕುಗಳಿಲ್ಲದೆ ಸಂಪೂರ್ಣವಾಗಿ ಗುಣವಾದವು. ಒಂದು ಪ್ರಕರಣದಲ್ಲಿ ಕಾಲನ್ನು ಛೇದಿಸಬೇಕಾಯಿತು. ಮತ್ತೊಂದು ಪ್ರಕರಣದಲ್ಲಿ ವಿಪರೀತ ರಕ್ತಸ್ರಾವದಿಂದ ರೋಗಿಯು ಮರಣಿಸಿದ. ಲಿಸ್ಟರ್ ಮಾರ್ಚ್ 1967 ರಿಂದ ಜುಲೈ 1967ರ ನಡುವೆ ಆರು ಪ್ರಬಂಧಗಳನ್ನು ಬರೆದ. ಆ ಪ್ರಬಂಧಗಳು 'ಲ್ಯಾನ್ಸೆಟ್' ಪತ್ರಿಕೆಯಲ್ಲಿ 'ಆಂಟಿಸೆಪ್ಟಿಕ್ ಪ್ರಿನ್ಸಿಪಲ್ಸ್ ಆಫ್ ದಿ ಪ್ರಾಕ್ಟೀಸ್ ಆಫ್ ಸರ್ಜರಿ' ಎಂಬ ಶೀರ್ಷಿಕೆಯಲ್ಲಿ ಪ್ರಕಟವಾದವು. ತನ್ನೆಲ್ಲ ಸಂಶೋಧನೆಯ ವಿವರಗಳನ್ನು ಡಬ್ಲಿನ್‌ನಲ್ಲಿದ್ದ ಬ್ರಿಟಿಶ್ ಮೆಡಿಕಲ್ ಅಸೋಸಿಯೇಶನ್ ಸಮ್ಮುಖದಲ್ಲಿ ಮಂಡಿಸಿದ. ಶಸ್ತ್ರವೈದ್ಯರು ಸ್ವಚ್ಛವಾದ ಉಡುಪುಗಳನ್ನು ಧರಿಸಬೇಕು, ಕೈಗಳನ್ನು ಚೆನ್ನಾಗಿ ತೊಳೆದುಕೊಂಡು ಗವಸುಗಳನ್ನು ಹಾಕಿಕೊಳ್ಳಬೇಕು ಹಾಗೂ ಎಲ್ಲ ಶಸ್ತ್ರಚಿಕಿತ್ಸಾ ಉಪಕರಣಗಳನ್ನು 5% ಕಾರ್ಬಾಲಿಕ್ ಆಮ್ಲದಲ್ಲಿ ಮುಳುಗಿಸಿರಬೇಕು ಎನ್ನುವುದನ್ನು ವಿಶೇಷವಾಗಿ ಒತ್ತಿ ಹೇಳಿದ. ಲಿಸ್ಟರನಿಗೆ ಶಸ್ತ್ರಚಿಕಿತ್ಸಾ ಕೊಠಡಿಯನ್ನೂ ಸಹ ಏಕೆ ಕ್ರಿಮಿರಾಹಿತ್ಯವನ್ನಾಗಿಸಬಾರದು ಎಂಬ ಯೋಚನೆಯು ಬಂದಿತು. ಅದಕ್ಕಾಗಿ ಕಾರ್ಬಾಲಿಕ್ ಆಸಿಡ್ಡಿನ 1:100 ಪ್ರಮಾಣದ ವಿಶೇಷ ದ್ರಾವಣವನ್ನು ಸಿದ್ಧಪಡಿಸಿದ. ಇದನ್ನು ಸಿಂಪಡಿಸಲು ಹಲವು ಸಾಧನಗಳನ್ನು ರೂಪಿಸಿದ. ಕೊನೆಗೆ 'ಡಾಂಕಿ ಎಂಜಿನ್' ಎಂಬ ಅಡ್ಡ ಹೆಸರಿನಲ್ಲಿ ಪ್ರಖ್ಯಾತವಾದ ಯಂತ್ರವನ್ನು ರೂಪಿಸಿ ಅದನ್ನು ಪರಿಣಾಮಕಾರಿಯಾಗಿ ಬಳಸಿದ.



*'ಡಾಂಕಿ ಎಂಜಿನ್' ಕಾರ್ಬಾಲಿಕ್ ಆಸಿಡ್ ಸಿಂಪಡಿಸುವ ಯಂತ್ರ*

ಜೋಸೆಫ್ ಲಿಸ್ಟರ್ ಕೈಗೊಂಡ ಕಾರ್ಬಾಲಿಕ್ ಆಮ್ಲದ ಪ್ರಯೋಗಗಳು ವಿಶ್ವವಿಖ್ಯಾತವಾದವು. ಜಗತ್ತಿನ ಎಲ್ಲ ಶಸ್ತ್ರವೈದ್ಯರು ಲಿಸ್ಟರನ ತಂತ್ರವನ್ನು ಪ್ರಯೋಗಿಸಿದರು. ಆದರೆ ಲಿಸ್ಟರನ ಕಾರ್ಬಾಲಿಕ್ ಆಮ್ಲದ ಪ್ರಯೋಗಗಲ್ಲಿ ಕೆಲವು ಅನಾನುಕೂಲತೆಗಳಿದ್ದವು. ಮೊದಲನೆಯದು ಕಾರ್ಬಾಲಿಕ್ ಆಮ್ಲವು ದೇಹದ ಊತಕವನ್ನು ಸುಟ್ಟು ಹಾನಿ ಮಾಡುತ್ತಿತ್ತು. ಎರಡನೆಯದು, ಕಾರ್ಬಾಲಿಕ್ ಆಮ್ಲವನ್ನು ಮಿತಿಮೀರಿ ಬಳಸಿದಾಗ, ಅದು ಶರೀರವನ್ನು ಸೇರಿ 'ಕಾರ್ಬೋಲೂರಿಯ' ಎಂಬ ಅಪಾಯಕಾರಿ ಸ್ಥಿತಿಗೆ ಕಾರಣವಾಗಿ ನಾನಾ ವಿಷಲಕ್ಷಣಗಳನ್ನು ಬೀರುತ್ತಿದ್ದವು. ಆದರೆ ಹಿತ–ಮಿತ ಪ್ರಮಾಣದ ಕಾರ್ಬಾಲಿಕ್ ಆಮ್ಲವನ್ನು ಎಚ್ಚರಿಕೆಯಿಂದ ಬಳಕೆಯಿಂದ ಸೋಂಕನ್ನು ತಡೆಗಟ್ಟಬಹುದು ಎನ್ನುವುದನ್ನು ಪ್ರಾಯೋಗಿಕವಾಗಿ ನಿರೂಪಿಸಿದ. ಹಾಗಾಗಿ ಜೋಸೆಫ್ ಲಿಸ್ಟರ್ ಅಧುನಿಕ ವೈದ್ಯಕೀಯ ಹರಿಕಾರರಲ್ಲಿ ಒಬ್ಬ ಎನ್ನಬಹುದು.

**ಗೌರವ:** ಜೋಸೆಫ್ ಲಿಸ್ಟರನ ಪ್ರಯೋಗಗಳು ನೊಬೆಲ್ ಪಾರಿತೋಷಕ ಪಡೆಯಲು ಅರ್ಹವಾಗಿದ್ದವು. ಆದರೆ ಅವನ ಕಾಲದಲ್ಲಿ ನೊಬೆಲ್ ಪಾರಿತೋಷಕವೇ ಆರಂಭವಾಗಿರಲಿಲ್ಲ. ಅಂದಿನ ದಿನಗಳ ಪ್ರತಿಷ್ಠಿತ ರಾಯಲ್ ಮೆಡಲ್, ಆಲ್ಬರ್ಟ್ ಮೆಡಲ್ ಹಾಗೂ ಕೋಪ್ಲೆ ಮೆಡಲ್ ಇತ್ಯಾದಿ ಗೌರವಗಳು ದೊರೆತವು. ಈತನ ಗೌರವಾರ್ಥ ಒಂದು ಬ್ಯಾಕ್ಟೀರಿಯ ಗುಂಪಿಗೆ 'ಲಿಸ್ಟೀರಿಯ' ಎಂಬ ಹೆಸರನ್ನು ನೀಡಿದರು. ಈತನ ಹೆಸರಿನಲ್ಲಿ ತಯಾರಾದ 'ಲಿಸ್ಟೆರಿನ್' ಎಂಬ ಬಾಯಿ ಮುಕ್ಕಳಿಸುವ ದ್ರಾವಣ ಇಂದಿಗೂ ಮಾರಾಟವಾಗುತ್ತಿದೆ. ವೈದ್ಯಜಗತ್ತು ಜೋಸೆಫ್ ಲಿಸ್ಟರನನ್ನು 'ಆಧುನಿಕ ನಂಜುರಾಹಿತ್ಯ ಪಿತಾಮಹ' (ಫಾದರ್ ಆಫ್ ಮಾಡರ್ನ್ ಆಂಟಿಸೆಪ್ಸಿಸ್) ಎಂದು ಕರೆದು ಗೌರವಿಸಿದೆ.



**ಡಾ ಮಹಾಬಲೇಶ್ವರ ಮಮದಾಪೂರ**
ಸಂಧಿವಾತ ಮತ್ತು ಕೀಲುರೋಗ ತಜ್ಞರು
ಜೆಎಸ್‌ಎಸ್ ಆಸ್ಪತ್ರೆ, ಮೈಸೂರು.

ಆರೋಗ್ಯ ದಿನಾಚರಣೆ

# ವಿಶ್ವ ಸಂಧಿವಾತ ದಿನಾಚರಣೆ



**ಡಾ ರಶ್ಮಿ ಕುಂದಾಪುರ**
ವಿಭಾಗೀಯ ಸಂಪಾದಕರು

ಭಾರತದಲ್ಲಿ ಕನಿಷ್ಠ 60 ಮಿಲಿಯನ್ ಜನರು ಕೆಲವು ರೀತಿಯ ಸಂಧಿವಾತದಿಂದ ಬಳಲುತ್ತಿದ್ದಾರೆ ಎಂದು ಸಂಶೋಧಕರು ಅಂದಾಜಿಸಿದ್ದಾರೆ. ಸಂಧಿವಾತ ಮತ್ತು ಇತರ ಸಂಧಿವಾತ ರೋಗಗಳೊಂದಿಗಿನ ರೋಗಗಳು ಸಾಮಾನ್ಯವಾಗಿ ನಿರ್ಲಕ್ಷಿಸಲ್ಪಡುತ್ತವೆ ಮತ್ತು ವಯಸ್ಸಾದ ಪ್ರಕ್ರಿಯೆಯ ಭಾಗವೆಂದು ಭಾವಿಸಲಾಗಿದೆ. ಈ ತಪ್ಪು ಕಲ್ಪನೆಯಿಂದ ಅನೇಕ ರೋಗಿಗಳು ಚಿಕಿತ್ಸೆ ಪಡೆಯಲು ಪ್ರಯತ್ನಿಸುವುದಿಲ್ಲ. ಆದ್ದರಿಂದ, ಅಕ್ಟೋಬರ್ 12, 2023 ರಂದು ವಿಶ್ವ ಸಂಧಿವಾತ ದಿನದ ಸಂದರ್ಭದಲ್ಲಿ, ಸಂಧಿವಾತಕ್ಕೆ ಚಿಕಿತ್ಸೆ ನೀಡಬಹುದೆಂದು ನಾವು ಜಾಗೃತಿ ಮೂಡಿಸಲು ಬಯಸುತ್ತೇವೆ.

ಸಂಧಿವಾತ ರೋಗಗಳು ಕೆಲವು ಸಮಯದಲ್ಲಿ ಶ್ವಾಸಕೋಶಗಳು, ಹೃದಯ ಮತ್ತು ಮೂತ್ರಪಿಂಡಗಳಂತಹ ಅನೇಕ ಅಂಗಗಳ ಮೇಲೆ ಪರಿಣಾಮ ಬೀರಬಹುದು. ಹೀಗಾಗಿ, ದಿನದಿಂದ ದಿನಕ್ಕೆ ಜೀವನವು ಬದಲಾಗುವುದಲ್ಲದೆ, ಜೀವಿತಾವಧಿಯು ಕಡಿಮೆಯಾಗುತ್ತದೆ. 2010 ರಲ್ಲಿ, ಸ್ವಯಂ ನಿರೋಧಕ ಸಂಧಿವಾತದೊಂದಿಗಿನ ರೋಗವಾದ ರೂಮಟಾಯ್ಡ್ ಸಂಧಿವಾತವು ಜಾಗತಿಕವಾಗಿ ಸುಮಾರು 49,000 ಸಾವುಗಳಿಗೆ ಕಾರಣವಾಯಿತು. ರುಮಟೈಡ್ ಆರ್ತ್ರೈಟಿಸ್ ರೋಗಿಗಳು ಹೃದಯಾಘಾತದ 200% ಹೆಚ್ಚಿನ ಅಪಾಯವನ್ನು ಹೊಂದಿರುತ್ತಾರೆ, ಸುಮಾರು 150% ಹೆಚ್ಚಿನ ಪಾರ್ಶ್ವವಾಯು ಅಪಾಯವನ್ನು ಹೊಂದಿರುತ್ತಾರೆ, ಕ್ಯಾನ್ಸರ್ ಅನ್ನು ಅಭಿವೃದ್ಧಿಪಡಿಸುವ ಹೆಚ್ಚಿನ ಅಪಾಯವನ್ನು ಹೊಂದಿರುತ್ತಾರೆ ಮತ್ತು ಒಟ್ಟಾರೆಯಾಗಿ ಅವರ ದೇಹವು ವೇಗವಾಗಿ ವಯಸ್ಸಾಗುತ್ತದೆ (ಅವರು ನಿಜವಾದ ವಯಸ್ಸಿಗಿಂತ 10 ವರ್ಷ ಹಿರಿಯರು). ಈ ರೋಗಗಳು ಮಕ್ಕಳು ಮತ್ತು ಯುವ ವಯಸ್ಕರು ಮತ್ತು ಮಧ್ಯವಯಸ್ಕ ಜನಸಂಖ್ಯೆಯನ್ನು ಒಳಗೊಂಡಂತೆ ಯಾವುದೇ ವಯೋಮಾನದವರ ಮೇಲೆ ಪರಿಣಾಮ ಬೀರಬಹುದು ಮತ್ತು ಇದು ಬರೀ ವಯಸ್ಸಾದವರ ರೋಗವಲ್ಲ.

ಸಂಧಿವಾತಕ್ಕೆ ಕಾರಣವಾಗುವ 100 ಕ್ಕೂ ಹೆಚ್ಚು ವಿವಿಧ ರೋಗಗಳಿವೆ. ಸಾಮಾನ್ಯವಾದವುಗಳೆಂದರೆ ಅಸ್ಥಿಸಂಧಿವಾತ,



ರುಮೆಟಾಯ್ಡ್ ಸಂಧಿವಾತ, ಆಂಕೈಲೋಸಿಂಗ್ ಸ್ಪಾಂಡಿಲೈಟಿಸ್, ಸಿಸ್ಟಮಿಕ್ ಲೂಪಸ್ ಎರಿಥೆಮಾಟೋಸಸ್ (ಲೂಪಸ್) ಮತ್ತು ಸೋರಿಯಾಟಿಕ್ ಸಂಧಿವಾತ ಹಲವಾರು.




ಸಾಮಾನ್ಯ ಜನಸಂಖ್ಯೆಗೆ ಹೋಲಿಸಿದರೆ ಉರಿಯೂತದ ಸಂಧಿವಾತ ರೋಗಿಗಳಲ್ಲಿ ಖಿನ್ನತೆಯು ಎರಡು ಪಟ್ಟು ಸಾಮಾನ್ಯವಾಗಿದೆ. ಸಾಮಾನ್ಯ ಆಟೋಇಮ್ಯೂನ್ ಸಂಧಿವಾತವಾದ ರೂಮಟಾಯ್ಡ್ ಸಂಧಿವಾತದ ಚಿಕಿತ್ಸೆಯು ರೋಗಿಗಳಿಗೆ ವರ್ಷಕ್ಕೆ ಸುಮಾರು 53,000 ರೂಪಾಯಿ ವೆಚ್ಚವಾಗುತ್ತದೆ ಎಂದು ಅಂದಾಜಿಸಲಾಗಿದೆ. ಆರ್ಥಿಕ ಹೊರೆಯ ಜೊತೆಗೆ, ಕುಟುಂಬ ಜೀವನದ ಮೇಲೆ ಪ್ರಭಾವವು ಗಾಢವಾಗಿರುತ್ತದೆ, ಏಕೆಂದರೆ ಮಹಿಳೆಯರು ಪುರುಷರಿಗಿಂತ ಹೆಚ್ಚು ಪರಿಣಾಮ ಬೀರುತ್ತಾರೆ. ಮನೆಯ ಮಹಿಳೆ ದೀರ್ಘಕಾಲದ ಸಂಧಿವಾತ ಕಾಯಿಲೆಯಿಂದ ಬಳಲುತ್ತಿದ್ದರೆ, ಇಡೀ ಕುಟುಂಬವು ವಿಶೇಷವಾಗಿ ಮಕ್ಕಳು ಬಳಲುತ್ತಿದ್ದರೆ. ಹೆಂಗಸಿನೊಂದಿಗೆ ಆಸ್ಪತ್ರೆಗೆ ಹೋಗಲು ಮಕ್ಕಳು ಅಥವಾ ಗಂಡಂದಿರು ರಜೆ ತೆಗೆದುಕೊಳ್ಳಬೇಕಾಗುತ್ತದೆ, ಇದು ಜೇಬಿನಿಂದ ಖರ್ಚುಗಳನ್ನು ಹೆಚ್ಚಿಸುತ್ತದೆ, ಕೆಲಸದ ಸಮಯದ ನಷ್ಟ ಮತ್ತು ಉತ್ಪಾದಕತೆಯನ್ನು ಕಡಿಮೆ ಮಾಡುತ್ತದೆ.



ರೋಗವು ದುರ್ಬಲಗೊಳಿಸುವ ನೋವಿನಿಂದ ಕೂಡಿದೆ ಮತ್ತು ದಿನನಿತ್ಯದ ಚಟುವಟಿಕೆಗಳಲ್ಲಿ ಗಮನಾರ್ಹ ಹಸ್ತಕ್ಷೇಪವನ್ನು ಉಂಟುಮಾಡುತ್ತದೆ. ಸಂಧಿವಾತ ಹೊಂದಿರುವ ರೋಗಿಗಳು ಸಾಮಾಜಿಕ ಪ್ರತ್ಯೇಕತೆಯನ್ನು ಎದುರಿಸುವುದು ಮತ್ತು ಉದ್ಯೋಗವನ್ನು ನಿಲ್ಲಿಸುವುದು ಸಾಮಾನ್ಯವಾಗಿದೆ. ವಾಸ್ತವವಾಗಿ, ಭಾರತೀಯ ಸಂಶೋಧನೆಯ ಪ್ರಕಾರ ರುಮಟಾಯ್ಡ್ ಸಂಧಿವಾತದ 4 ರೋಗಿಗಳಲ್ಲಿ 3 ರೋಗಿಗಳು ಕಡಿಮೆ ಕೆಲಸದ ಸಾಮರ್ಥ್ಯವನ್ನು ಎದುರಿಸುತ್ತಾರೆ ಮತ್ತು 5 ರಲ್ಲಿ 1 ಜನರು ಶಾಶ್ವತವಾಗಿ ಸಂಪೂರ್ಣವಾಗಿ ಕೆಲಸ ಮಾಡುವುದನ್ನು ನಿಲ್ಲಿಸಬೇಕಾಯಿತು.

ಹೆಚ್ಚಿನ ಆರೋಗ್ಯ ವಿಮಾ ಯೋಜನೆಗಳಲ್ಲಿ ಸಂಧಿವಾತ ಒಳಗೊಂಡಿರುವುದಿಲ್ಲ. ರೋಗದಿಂದಾಗಿ ನೇರ ಮತ್ತು ಪರೋಕ್ಷ ಆರ್ಥಿಕ ಹೊರೆಯನ್ನು ರೋಗಿಯು ಮತ್ತು ಅವರ ಕುಟುಂಬವು ಭರಿಸಬೇಕಾಗುತ್ತದೆ. ಅವುಗಳಲ್ಲಿ ಹೆಚ್ಚಿನವು ದೀರ್ಘಕಾಲದ ಮತ್ತು ಚಿಕಿತ್ಸೆ ನೀಡಲಾಗದವು ಎಂದು ವರ್ಗೀಕರಿಸಲಾಗಿದೆ. ಆದ್ದರಿಂದ, ಭಾರತದಲ್ಲಿನ ವಿಮೆ ಮತ್ತು ಆರೋಗ್ಯ ರಕ್ಷಣೆಯ ವಿತರಣಾ ನಿಬಂಧನೆಗಳಲ್ಲಿನ ಪ್ರಸ್ತುತ ಅಭ್ಯಾಸಗಳು ಅವರಿಗೆ ಮರುಪಾವತಿ ಪ್ರಯೋಜನಗಳನ್ನು ಹೊರತುಪಡಿಸಿದೆ, ಇವುಗಳನ್ನು ವಿದೇಶದಲ್ಲಿ ಬಹುಪಾಲು ಮೂರನೇ ವ್ಯಕ್ತಿಯ ಪಾವತಿದಾರರು ಒದಗಿಸುತ್ತಾರೆ. ಬಡತನ ರೇಖೆಗಿಂತ ಕೆಳಗಿರುವ ಜನರಿಗಾಗಿ ಆರೋಗ್ಯ ಭಾಗ್ಯ, ಯಶಸ್ವಿನಿ, ಭಾಮಾಶಾ ಇತ್ಯಾದಿ ಯೋಜನೆಗಳಲ್ಲಿ ಸಂಧಿವಾತ ರೋಗವನ್ನು ಹೊರಗಿಡುವುದನ್ನು ಗಮನಿಸಲಾಗಿದೆ.

ಹಲವು ದಶಕಗಳ ಹಿಂದೆ ರೂಪಿಸಲಾದ ಈ ಮರುಪಾವತಿ ಮಾರ್ಗಸೂಚಿಗಳಿಗೆ ಇತ್ತೀಚಿನ ಕ್ರಾಂತಿಕಾರಿ




ರೋಗಿಗಳು ತಜ್ಞರನ್ನು (ರುಮಟಾಲಜಿಸ್ಟ್) ಭೇಟಿಯಾಗಲು ರೋಗಲಕ್ಷಣಗಳ ಪ್ರಾರಂಭದಿಂದ ಸರಾಸರಿ 2 ವರ್ಷಗಳ ವಿಳಂಬವನ್ನು ಎದುರಿಸುತ್ತಾರೆ ಎಂದು ತೋರಿಸಿದೆ!! ಈ ವರ್ಷ, ಭಾರತೀಯ ರುಮಟಾಲಜಿ ಅಸೋಸಿಯೇಷನ್, ವಿಜ್ಞಾನವು ಮುಂದುವರೆದಿದೆ ಮತ್ತು ಜನರು ಇನ್ನು ಮುಂದೆ ಸಂಧಿವಾತದ ನೋವಿನೊಂದಿಗೆ ಬದುಕಬೇಕಾಗಿಲ್ಲ ಎಂದು ಜನರಿಗೆ ಅರಿವು ಮೂಡಿಸಲು ಪ್ಯಾನ್-ಇಂಡಿಯಾ ಅಭಿಯಾನವನ್ನು ಮಾಡುತ್ತಿದೆ. ಹೀಗಾಗಿ, ಆ ದಿನದ ಎಲ್ಲಾ ಚಟುವಟಿಕೆಗಳ ಥೀಮ್ ಅನ್ನು "ಸಂಧಿವಾತ ಚಿಕಿತ್ಸೆ ನೀಡಬಹುದು" ಎಂದು ನಿರ್ಧರಿಸಲಾಗಿದೆ

ಇಂಡಿಯನ್ ರುಮಟಾಲಜಿ ಅಸೋಸಿಯೇಷನ್ (ಐ ಆರ್ ಎ) ಭಾರತದಲ್ಲಿ ಸಂಧಿವಾತ ತಜ್ಞರು ಮತ್ತು ಇತರ ಆರೋಗ್ಯ ವೃತ್ತಿಪರರ ವೃತ್ತಿಪರ ಸಂಸ್ಥೆಯಾಗಿದೆ.

ಚಿಕಿತ್ಸಕ ಮತ್ತು ನಿರ್ವಹಣಾ ತಂತ್ರಗಳನ್ನು ಪರಿಗಣಿಸಿ ಸಂಪೂರ್ಣ ಪುನರುಜ್ಜೀವನದ ಅಗತ್ಯವಿದೆ.

ಸಂಧಿವಾತ ಮತ್ತು ಸಂಧಿವಾತ ಅಸ್ವಸ್ಥತೆಗಳನ್ನು ಉಂಟುಮಾಡುವ ರೋಗಗಳು ಬಹಳಷ್ಟು ತಪ್ಪುಗ್ರಹಿಕೆಗಳಿಂದ ಮುಚ್ಚಿಹೋಗಿವೆ. ಈ ರೋಗಗಳ ನಿರ್ವಹಣೆಯಲ್ಲಿನ ಇತ್ತೀಚಿನ ಪ್ರಗತಿಗಳು ಚಿಕಿತ್ಸೆಯನ್ನು ಸುಲಭಗೊಳಿಸಿವೆ ಮತ್ತು ಚಿಕಿತ್ಸೆ ಪಡೆದ ರೋಗಿಗಳ ಜೀವನದ ಗುಣಮಟ್ಟವನ್ನು ಗಣನೀಯವಾಗಿ ಸುಧಾರಿಸಿದೆ. ಆದಾಗ್ಯೂ, ಅರಿವಿನ ಕೊರತೆಯು ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಯ ಕೊರತೆಗೆ ಕಾರಣವಾಗಿದೆ. ಇದು ರೋಗಿಗಳಿಗೆ ಸಾಕಷ್ಟು ಅನವಶ್ಯಕ ದುಃಖ ಮತ್ತು ತೊಂದರೆಗಳನ್ನು ಉಂಟುಮಾಡುತ್ತದೆ. ಆಗಾಗ್ಗೆ ಅವರು ಸೂಕ್ತ ಸಮಯದಲ್ಲಿ ಸಹಾಯವನ್ನು ಪಡೆಯುವುದಿಲ್ಲ ಮತ್ತು ವಿಳಂಬದಿಂದಾಗಿ ಹಾನಿಯಿಂದ ಬಳಲುತ್ತಿದ್ದಾರೆ.

ಸಂಧಿವಾತ ಮತ್ತು ಇತರ ಸಂಧಿವಾತ ಕಾಯಿಲೆಗಳಿಗೆ ಕಾರಣವಾಗುವ ಕಾಯಿಲೆಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಪ್ರಾಥಮಿಕ ಉದ್ದೇಶದಿಂದ, ವೈದ್ಯರು ಮತ್ತು ರೋಗಿಗಳು ಪ್ರತಿ ವರ್ಷ ಅಕ್ಟೋಬರ್ 12 ರಂದು ವಿಶ್ವ ಸಂಧಿವಾತ ದಿನವನ್ನು ಆಚರಿಸಲು ಪ್ರಾರಂಭಿಸಿದರು. ಪ್ರಪಂಚದಾದ್ಯಂತದ ಅನೇಕ ಸಂಸ್ಥೆಗಳು ಈ ದಿನದಂದು ಈ ರೋಗಗಳ ಬಗ್ಗೆ ಜಾಗೃತಿ ಮೂಡಿಸಲು ಚಟುವಟಿಕೆಗಳನ್ನು ಹೊಂದಿವೆ.

ವಿಶ್ವ ಸಂಧಿವಾತ ದಿನವನ್ನು ಹಲವು ವರ್ಷಗಳಿಂದ ಆಚರಿಸಲಾಗಿದ್ದರೂ ಸಹ, ಭಾರತದಲ್ಲಿನ ಸಂಶೋಧನೆಯು

ಸಂಧಿವಾತಶಾಸ್ತ್ರಜ್ಞರು, ಸಂಧಿವಾತ ಮತ್ತು ಕೀಲುಗಳು, ಸ್ನಾಯುಗಳು ಮತ್ತು ಮೂಳೆಗಳ ಇತರ ಕಾಯಿಲೆಗಳ ರೋಗನಿರ್ಣಯ ಮತ್ತು ಚಿಕಿತ್ಸೆಯಲ್ಲಿ ಅನುಭವಿ ವೈದ್ಯರು ಸಂಧಿವಾತ, ಸ್ವಯಂ ನಿರೋಧಕ ಕಾಯಿಲೆಗಳು, ಮಸ್ಕ್ಯುಲೋಸ್ಕೆಲಿಟಲ್ ನೋವು ಅಸ್ವಸ್ಥತೆಗಳು ಮತ್ತು ಆಸ್ಟಿಯೊಪೊರೋಸಿಸ್ಗೆ ಚಿಕಿತ್ಸೆ ನೀಡುತ್ತಾರೆ.

ಈ ಕಾಯಿಲೆಗಳನ್ನು ನಿರ್ವಹಿಸುವ ಇತರ ಆರೋಗ್ಯ ವೃತ್ತಿಪರರಲ್ಲಿ ಇಂಟರ್ನಿಸ್ಟ್‌ಗಳು, ಮೂಳೆ ಶಸ್ತ್ರಚಿಕಿತ್ಸಕರು, ರೋಗನಿರೋಧಕ ತಜ್ಞರು, ಶಿಶುವೈದ್ಯರು ಮತ್ತು ಫಿಸಿಯಾಟ್ರಿಸ್ಟ್‌ಗಳು ಸೇರಿದ್ದಾರೆ. ಫಿಸಿಯೋಥೆರಪಿಸ್ಟ್, ದೈಹಿಕ ಮತ್ತು ಔದ್ಯೋಗಿಕ ಚಿಕಿತ್ಸಕರು, ಸಂಧಿವಾತ ನರ್ಸ್ ಮುಂತಾದ ಅಲೈಡ್ ಆರೋಗ್ಯ ವೃತ್ತಿಪರರು ಸಂಧಿವಾತ ರೋಗಗಳ ರೋಗಿಗಳ ಆರೈಕೆಯಲ್ಲಿ ಸಹಾಯಕ ಬೆಂಬಲವನ್ನು ಒದಗಿಸುತ್ತಾರೆ.

ಐ ಆರ್ ಎ ಭಾರತದಲ್ಲಿ ಸಂಧಿವಾತದ ವಿರುದ್ಧದ ಹೋರಾಟವನ್ನು ಮುನ್ನಡೆಸುತ್ತದೆ. ಐ ಆರ್ ಎ ಧ್ಯೇಯ ಮತ್ತು ಗುರಿಗಳು ಭಾರತೀಯ ರೋಗಿಗಳಿಗೆ ಸಂಧಿವಾತ ಮತ್ತು ಇತರ ಮಸ್ಕ್ಯುಲೋಸ್ಕೆಲಿಟಲ್ ಕಾಯಿಲೆಗಳೊಂದಿಗೆ ಅತ್ಯಾಧುನಿಕ ಆರೈಕೆಯನ್ನು ಒದಗಿಸುವ ಮೂಲಕ ಸದಸ್ಯರ ವೃತ್ತಿಪರ ಅಭಿವೃದ್ಧಿಯನ್ನು ಮುಂದುವರೆಸುವ ಮೂಲಕ, ಸಂಧಿವಾತ ರೋಗಗಳ ಬಗ್ಗೆ ಅರಿವು ಮತ್ತು ತಿಳುವಳಿಕೆಯನ್ನು ಹೆಚ್ಚಿಸುವುದು, ರೋಗಿಗಳ ವಕಾಲತ್ತು ಮತ್ತು ಸಬಲೀಕರಣ ಮತ್ತು ಸಂಶೋಧನೆಯನ್ನು ಉತ್ತೇಜಿಸುವತ್ತ ಗಮನಹರಿಸುತ್ತವೆ.





# ಶಾಖೆಗಳಲ್ಲಿ ಕನ್ನಡ ಕಾರ್ಯಕ್ರಮಗಳ ಸೆಪ್ಟಂಬರ್-ಅಕ್ಟೋಬರ್ ವರದಿ

**ಡಾ ವೀಣಾ ಎಸ್ ಭಟ್**
ಪ್ರಸೂತಿ ಮತ್ತು ಸ್ತ್ರೀ ಆರೋಗ್ಯ ತಜ್ಞರು
ನಯನ ಆಸ್ಪತ್ರೆ, ಭದ್ರಾವತಿ. ಲೇಖಕರು ಮತ್ತು ವಿಭಾಗೀಯ ಸಂಪಾದಕರು


ಐ.ಎಂ.ಎ ಕರ್ನಾಟಕ ರಾಜ್ಯ ಶಾಖೆ ಕನ್ನಡ ವೈದ್ಯ ಬರಹಗಾರರ ಬಳಗದ ನಿರಂತರ ಕನ್ನಡ ಸಾಹಿತ್ಯಪರ ಚಟುವಟಿಕೆಗಳಿಗೆ ಕಳಸವಿಟ್ಟಂತೆ, ಈ ಬಾರಿ ಬಳಗದ ನಾಲ್ಕನೆಯ ರಾಜ್ಯ ಸಮ್ಮೇಳನ ಸೆಪ್ಟೆಂಬರ್ 2ಮತ್ತು 3ರಂದು, ಭಾರತೀಯ ವೈದ್ಯಕೀಯಸಂಘ ಶಿವಮೊಗ್ಗ ಶಾಖೆಯ ಸಹಯೋಗದೊಂದಿಗೆ ಮಲೆನಾಡಿನ ಹೆಬ್ಬಾಗಿಲಾದ ಶಿವಮೊಗ್ಗದಲ್ಲಿ ಸುಬ್ಬಯ್ಯ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ನಡೆಯಿತು. ಖ್ಯಾತ ಮನೋವೈದ್ಯರು ಹಾಗೂ ಹಿರಿಯ ವೈದ್ಯ ಸಾಹಿತಿಗಳುಆದ ಡಾ. ಕೆ.ಆರ್ ಶ್ರೀಧರ ಅವರ ಸರ್ವಾಧ್ಯಕ್ಷತೆಯಲ್ಲಿ ಅತ್ಯಂತ ಯಶಸ್ವಿಯಾಗಿ ಶಿವಮೊಗ್ಗದ ಶ್ರೇಷ್ಠ ವೈದ್ಯಸಾಹಿತಿ ದಿ. ಡಾ॥ ಚಂದ್ರಪ್ಪ ಗೌಡರ ಹೆಸರಿನ ಮಹಾದ್ವಾರ, ಅಂತರ್‌ರಾಷ್ಟ್ರೀಯ ಖ್ಯಾತಿಯ ಶ್ರೇಷ್ಠ, ಮನೋವೈದ್ಯರು, ವೈದ್ಯಸಾಹಿತಿಗಳು, ಚಲನಚಿತ್ರ ನಿರ್ಮಾಪಕರು, ಬಿ.ಸಿ.ರಾಯ್ ರಾಷ್ಟ್ರಪ್ರಶಸ್ತಿ ಪುರಸ್ಕೃತರುಆದ ಡಾ॥ ಅಶೋಕ್ ಪೈ ವೇದಿಕೆಯಲ್ಲಿ ಅತ್ಯಂತ ಅರ್ಥಪೂರ್ಣ ಹಾಗೂ ವಿಜೃಂಭಣೆಯಿಂದ ನಡೆದಿದ್ದು ಅತ್ಯಂತ ಅವಿಸ್ಮರಣೀಯ.

ಸೆಪ್ಟೆಂಬರ್ 2ರಂದು ಮುಂಜಾನೆ ಭುವನೇಶ್ವರಿಯ ಮೆರವಣಿಗೆಯಲ್ಲಿ ಸಭಾಧ್ಯಕ್ಷರನ್ನು ಸ್ವಾಗತಿಸಲಾಯಿತು.

ಡಾ. ರಾಜೇಂದ್ರ ಚೆನ್ನಿಯವರು ಸಮ್ಮೇಳನದ ಉದ್ಘಾಟನೆಯನ್ನು ನೆರವೇರಿಸಿದರು. ಕನ್ನಡ ವೈದ್ಯ ಸಾಹಿತ್ಯ ಇತರ ಭಾಷೆಗಳಿಗೆ ಅನುವಾದ ಆಗಬೇಕಾದ ಅಗತ್ಯತೆಯ ಕುರಿತು ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಡಾ.ಸಿ.ಆರ್.ಚಂದ್ರಶೇಖರ್, ಸುಬ್ಬಯ್ಯ ಮೆಡಿಕಲ್ ಕಾಲೇಜಿನ ನಿರ್ದೇಶಕರಾದ ಡಾ॥ ನಾಗೇಂದ್ರ ಎಸ್, ಡೀನ್ ಆಗಿರುವ ಡಾ.ಕೃಷ್ಣ ಪ್ರಸಾದ ಭಾಗವಹಿಸಿದ್ದರು. ರಾಜ್ಯಾಧ್ಯಕ್ಷರಾದ ಡಾ.ಶಿವಕುಮಾರ್ ಲಕ್ಕೋಳ್‌ಸರ್ ಅವರ ಗೌರವ ಉಪಸ್ಥಿತಿಯಲ್ಲಿ ನಡೆಯಿತು. ಸಮ್ಮೇಳನದ ಲೇಖನಗಳ ಸಾರಾಂಶಗಳನ್ನೊಳಗೊಂಡ ಸ್ಮರಣಸಂಚಿಕೆ “ಸಹ್ಯಾದ್ರಿ ವೈದ್ಯ ಸೌರಭ” ವನ್ನು ಸಮ್ಮೇಳನದಲ್ಲಿ ಬಿಡುಗಡೆಗೊಳಿಸಲಾಯಿತು.

ಸಮಾರಂಭದಲ್ಲಿ ಪ್ರತಿ ವರುಷ ಕೊಡುವ ಶ್ರೇಷ್ಠ ವೈದ್ಯ ಸಾಹಿತಿ ಪ್ರಶಸ್ತಿಯನ್ನು ಡಾ. ಸಿ.ಆರ್ ಚಂದ್ರಶೇಖರ್ ಬೆಂಗಳೂರು ಮತ್ತು ಡಾ. ವೀಣಾ ಎನ್ ಸುಳ್ಯ (ಮಹಿಳಾ ವಿಭಾಗ) ಅವರಿಗೆ ನೀಡಲಾಯಿತು. ಈ ಪ್ರಶಸ್ತಿಗಳನ್ನು ಪುಟ್ಟಣ್ಣ ಕುಲಾಲ್ ಪ್ರತಿಷ್ಠಾನ, ಮಂಗಳೂರು ಮತ್ತು ಪೃಥ್ವಿ ಮಕ್ಕಳ ಆಸ್ಪತ್ರೆ, ಬಳ್ಳಾರಿ ಅವರು ಕ್ರಮವಾಗಿ ಪ್ರಾಯೋಜಿಸಿದ್ದರು.

ಡಾ. ಕೆ.ಎಸ್. ಶ್ಯಾಮ್ ಪ್ರಸಾದ್ ಅವರ ಸ್ಮರಣಾರ್ಥ ಕೊಡುವ ಶ್ರೇಷ್ಠ ವೈದ್ಯೇತರ ಸಾಹಿತ್ಯ ಕೃತಿ ಪ್ರಶಸ್ತಿಯನ್ನು ಡಾ॥ ಹೆಚ್. ಎಸ್ ಅನುಪಮಾ ಅವರಿಗೂ ಶ್ರೇಷ್ಠ ವೈದ್ಯಕೀಯ ಸಾಹಿತ್ಯ ಕೃತಿ ಪ್ರಶಸ್ತಿಯನ್ನು ಡಾ. ಕರವೀರ ಪ್ರಭು ಕ್ಯಾಲಕೊಂಡ ಅವರಿಗೆ ನೀಡಲಾಯಿತು.




ಡಾ.ಸುನಂದಾ ಆರ್. ಕುಲಕರ್ಣಿ ಹಸ್ತಪ್ರತಿ ಕೃತಿ ಪ್ರಶಸ್ತಿಗಳಲ್ಲಿ ಶ್ರೇಷ್ಠ ವೈದ್ಯಸಾಹಿತ್ಯ ಹಸ್ತ ಪ್ರತಿ ಪ್ರಶಸ್ತಿಯನ್ನು ಡಾ. ಕೆ.ಎಸ್. ಪವಿತ್ರ ಹಾಗೂ ಶ್ರೇಷ್ಠ ವೈದ್ಯೇತರ ಸಾಹಿತ್ಯ ಹಸ್ತ ಪ್ರಶಸ್ತಿಯನ್ನು ಡಾ. ಅರುಣ ಯಡಿಯಾಳ್ ಅವರಿಗೆ ನೀಡಲಾಯಿತು.

ಸಮಾರಂಭದಲ್ಲಿ ವೈದ್ಯ ಲೇಖಕರ ಒಂಭತ್ತು ಕೃತಿಗಳು ಲೋಕಾರ್ಪಣೆಗೊಂಡವು.

1. ಕಣ್ಣು ಬೆರಗು ಬವಣೆ– ಡಾ॥ ಶ್ರೀ ಲಕ್ಷ್ಮಿ ಶ್ರೀನಿವಾಸ್

2. ಕಂಡದ್ದು ಕಡಲು– ಡಾ॥ ಪವಿತ್ರ ಕೆ.ಎಸ್

3. ಮಗಳಂಥ ಕವನಗಳು ನೂರು ಮತ್ತೊಂದು– ಡಾ॥ ರವಿ ರಾಜೇಶ್ವರ

4. ಮನೋದಿಗಂತ– ಡಾ॥ ಕೆ .ಆರ್ ಶ್ರೀಧರ್

5. ಅಮ್ಮನ ಚಾದರದ ಕಥೆ ಮತ್ತು ಇತರ ಕಥೆಗಳು– ಡಾ॥ ಶುಭ್ರತಾ ಕೆ.ಎಸ್

6. ಮೌಢ್ಯ ಮತ್ತು ಟೆಲಿವಿಷನ್ ಡಾ. ನಾ. ಸೋಮೇಶ್ವರ

7. ಆರೋಗ್ಯ ದೀವಿಗೆ– ಡಾ. ವಿನಯ ಶ್ರೀನಿವಾಸ್

8. ಸಮಗ್ರ ಆರೋಗ್ಯಕ್ಕೆ ಸಮೃದ್ಧ ವೈದ್ಯ ಸಾಹಿತ್ಯ– ಸಂಪಾದನೆ ಡಾ॥ ನಾ. ಸೋಮೇಶ್ವರ ಮತ್ತು ಸಿ. ಆರ್.ಚಂದ್ರಶೇಖರ್

9.ಕಣ್ಣಿನಲ್ಲಿ ಕಂಡ ಮೃತ್ಯು ಬಿಂಬ ಮತ್ತು ಇತರ ವೈದ್ಯಕೀಯ ಲೇಖನಗಳು. ಡಾ॥ ಹೆಚ್.ಎಸ್ ಮೋಹನ್.

ಹೀಗೆ 9 ಪುಸ್ತಕಗಳು ಒಂದೇ ವೇದಿಕೆಯಲ್ಲಿ ಲೋಕಾರ್ಪಣೆಗೊಂಡಿದ್ದು ಸಮ್ಮೇಳನದ ಹೆಗ್ಗಳಿಕೆಗೆ ಪಾತ್ರವಾಯಿತು. ಯಶಸ್ವಿಯಾಗಿ ಒಂದು ವರುಷ ಉಪಸಮಿತಿಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಬಂದ ಡಾ. ಶಿವಾನಂದ ಕುಬಸದ ಅವರಿಗೆ ಉಪಸಮಿತಿಯ ಸದಸ್ಯರು ಸನ್ಮಾನಿಸಿದರು. ಕನ್ನಡವನ್ನು ಉಳಿಸುವಲ್ಲಿ ನಮ್ಮದಾದ ಕೈಕಂಕರ್ಯವನ್ನು ಮಾಡುವ ಅಗತ್ಯತೆಯನ್ನು ಸುಬ್ಬಯ್ಯ ಆಸ್ಪತ್ರೆಯ ನಿರ್ದೇಶಕರಾದ ಡಾ. ನಾಗೇಂದ್ರ ಅವರು ಮನಗಾಣಿಸಿದರು.

ಡಾ. ಸಿ.ಆರ್.ಸಿ ಅವರು ಎಲ್ಲಾ ವೈದ್ಯರೂ ತಮ್ಮ ತಮ್ಮ ಅನುಭವಗಳನ್ನು ದಾಖಲಿಸುವಲ್ಲಿ ಹಿಂದೆ ಬೀಳಬಾರದು ಎಂಬ ಕರೆಯನ್ನು ಕೊಟ್ಟರು. ಭಾರತೀಯ ವೈದ್ಯಕೀಯ ಸಂಘದ ಒಗ್ಗಟ್ಟಿಗೆ ಬರಹಗಾರರ ಉಪಸಮಿತಿಯ ಕೊಡುಗೆಯನ್ನು ರಾಜ್ಯಾಧ್ಯಕ್ಷರಾದ ಡಾ. ಶಿವಕುಮಾರ್ ಲಕ್ಕೋಳ್ ಸ್ಮರಿಸಿದರು.

ಸಮ್ಮೇಳನದ ಅಧ್ಯಕ್ಷರಾದ ಡಾ. ಕೆ. ಆರ್. ಶ್ರೀಧರ್ ವೈದ್ಯಸಾಹಿತ್ಯ ನಡೆದು ಬಂದ ದಾರಿ ಬಗ್ಗೆ, ಮುಂದೆ ತೆಗೆದುಕೊಳ್ಳಬೇಕಾದ ಜವಾಬ್ದಾರಿಗಳ ಬಗ್ಗೆ ಅಭಿಪ್ರಾಯ ಮಂಡಿಸಿದರು.

ಶಿವಮೊಗ್ಗ ಶಾಖೆಯ ಅಧ್ಯಕ್ಷ ಡಾ. ಎಂ.ಎಸ್ ಅರುಣ್ ಧನ್ಯವಾದ ಸಮರ್ಪಿಸಿದರು. ಈ ಕೆಳಗಿನ ಗೋಷ್ಠಿಗಳು ನಡೆದವು.

ಗೋಷ್ಠಿ 1 ವೈದ್ಯ ಸಾಹಿತ್ಯ–ಸೃಜನಶೀಲತೆ ಮತ್ತು ಸವಾಲುಗಳು.

ವೈದ್ಯ ಸಾಹಿತ್ಯದಲ್ಲಿ ಸೃಜನಶೀಲತೆ ಎಂಬ ವಿಷಯದಲ್ಲಿ, ಡಾ. ರಮೇಶ್ ಬಾಬು ಉಪನ್ಯಾಸ ನೀಡಿದರು.

ವೈದ್ಯ ಸಾಹಿತ್ಯದ ಪ್ರಸ್ತುತ ಸವಾಲುಗಳ ಬಗ್ಗೆ ಡಾ. ಎಸ್.ಪಿ ಯೋಗಣ್ಣ ವಿಚಾರ ಮಂಡಿಸಿದರು.

ಡಾ. ಸಿ.ಆರ್. ಚಂದ್ರಶೇಖರ್ ಅವರು ಗೋಷ್ಠಿಯ ಅಧ್ಯಕ್ಷತೆವಹಿಸಿದ್ದರು.

ಗೋಷ್ಠಿ2




ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ವೈದ್ಯಕೀಯ /ಆರೋಗ್ಯ ಚಿಂತನೆ ಎಂಬ ವಿಷಯದಲ್ಲಿ ನಡೆಯಿತು. “ವಚನ ಸಾಹಿತ್ಯದಲ್ಲಿ” ಆರೋಗ್ಯದ ಬಗ್ಗೆ, ಡಾ. ಅವಿನಾಶ್ ಕವಿ, “ದಾಸ ಸಾಹಿತ್ಯದಲ್ಲಿ ಆರೋಗ್ಯ” ಎಂಬ ವಿಷಯದ ಬಗ್ಗೆ ಡಾ. ವೀಣಾ ಭಟ್ ಭದ್ರಾವತಿ, “ಜಾನಪದ ಸಾಹಿತ್ಯದಲ್ಲಿ ಆರೋಗ್ಯದ” ಬಗ್ಗೆ ಡಾ. ಶ್ರೀಶೈಲ ಮಾದಣ್ಣವರ್ ವಿಚಾರ ಮಂಡಿಸಿದರು. ಡಾ. ರವಿ ರಾಜೇಶ್ವರ್ ಅವರು ಗೋಷ್ಠಿಯ ಅಧ್ಯಕ್ಷತೆವಹಿಸಿದ್ದರು.

ಜನರು ವೈದ್ಯರಿಂದ ಬಯಸುವುದು ಏನನ್ನು?

ಎಂಬ ವಿಷಯದಲ್ಲಿ ಶ್ರೀಯುತ ಡುಂಡಿರಾಜ್ ಅವರು

ವಿಷಯ ಮಂಡಿಸಿದರು. ಡಾ. ಎಚ್ ಎಸ್ ಮೋಹನ್ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ವೈದ್ಯಬರಹಗಾರರ ಸಮಿತಿಯ ಕಾರ್ಯ ಚಟುವಟಿಕೆಗಳ ವಿಸ್ತರಣೆಯ ಬಗ್ಗೆ ಚರ್ಚೆಯು ನಡೆಯಿತು. ಈ ಅವಧಿಯನ್ನು ಡಾ. ಮಧುಸೂಧನ್ ಕಾರಿಗನೂರು ನಡೆಸಿಕೊಟ್ಟರು. ವಿದ್ಯಾರ್ಥಿಗಳಿಗಾಗಿ ರಸಪ್ರಶ್ನೆ ಕಾರ್ಯಕ್ರಮವನ್ನು ಕನ್ನಡ–ಕರ್ನಾಟಕ–ಕನ್ನಡಿಗ ಎಂಬ ಶೀರ್ಷಿಕೆಯ ಹಿನ್ನಲೆಯಲ್ಲಿ ಡಾ. ನಾ ಸೋಮೇಶ್ವರ ಅವರು ಯಶಸ್ವಿಯಾಗಿ ನಡೆಸಿಕೊಟ್ಟರು.

ಭಾರತೀಯ ವೈದ್ಯಕೀಯ ಸಂಘ ವಿವಿಧ ಸದಸ್ಯರಿಂದ ನಡೆಸಿಕೊಟ್ಟ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ ಎಲ್ಲರ ಮನಸೂರೆಗೊಂಡಿತು.

ಎರಡನೆಯ ದಿನದ "ಪರಿಸರ ಮತ್ತು ಆರೋಗ್ಯ" ಗೋಷ್ಠಿಯಲ್ಲಿ "ಆರೋಗ್ಯ ವೃದ್ಧಿಗಾಗಿ ಸಿರಿಧಾನ್ಯ" ಎನ್ನುವ ವಿಷಯದ ಬಗ್ಗೆ ಪ್ರೊ. ಬಿ ಎಂ.ಕುಮಾರಸ್ವಾಮಿ ಮತ್ತು "ಪರಿಸರ ಮಾಲಿನ್ಯ ಮತ್ತು ಆರೋಗ್ಯ" ಎಂಬ ವಿಷಯದ ಬಗ್ಗೆ ಡಾ. ಅರವಿಂದ ಪಟೇಲ್ ವಿಚಾರಗಳನ್ನು ಮಂಡಿಸಿದರು. ಈ ಗೋಷ್ಠಿಯ ಅಧ್ಯಕ್ಷತೆಯನ್ನು ಡಾ. ಸಂಜೀವ ಕುಲಕರ್ಣಿ ವಹಿಸಿದ್ದರು.

ವೈದ್ಯೇತರ ಸಂಘಟನೆಗಳೊಂದಿಗೆ ಸಹಕಾರ/ ಚಿಂತನೆ ಎಂಬ ಗೋಷ್ಠಿಯಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಡಾ. ವಸುಂಧರ ಭೂಪತಿ, ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಎಮ್. ರಮೇಶ್ ಅವರು ವಿಚಾರ ಮಂಡಿಸಿದರು. ಡಾ. ಕರವೀರ ಪ್ರಭು ಕ್ಯಾಲಗೊಂಡ ಈ ಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿದ್ದರು.

ಎರಡನೆಯ ದಿನದ ಮೂರನೆಯ ಗೋಷ್ಠಿಯಲ್ಲಿ "ಮಾಧ್ಯಮಗಳಲ್ಲಿ ಆರೋಗ್ಯ ವಿಚಾರಗಳ ಮಾಹಿತಿ" ಎನ್ನುವ ವಿಚಾರದ ಬಗ್ಗೆ ಡಾ. ಆರ್ ಪೂರ್ಣಿಮಾ ವಿಚಾರಗಳನ್ನು ಮಂಡಿಸಿದರು. "ವೈದ್ಯರಿಗಾಗಿ ತಂತ್ರಾಂಶ" ಎನ್ನುವ ವಿಚಾರದಲ್ಲಿ ಡಾ॥ ಶ್ರೀಕಾಂತ್ ಹೆಗಡೆಯವರು ಮಾತನಾಡಿದರು. ವಿಶೇಷ ಎನ್ನುವಂತೆ "ನಮ್ಮ ವೃತ್ತಿ ನಮ್ಮ ಹೆಮ್ಮೆ" ಎನ್ನುವ ವಿಷಯದಲ್ಲಿ ಡಾ. ಯೋಗಾನಂದ ರೆಡ್ಡಿ ಭಾವಪೂರ್ಣವಾಗಿ ಮಾತನಾಡಿದರು.

ಸಮ್ಮೇಳನದ ಅಂಗವಾಗಿ ನಡೆದ ಕವಿಗೋಷ್ಠಿಯಲ್ಲಿ 25 ಕವಿಗಳು ಕವನ ವಾಚನ ಮಾಡಿದರು. ಪ್ರಖ್ಯಾತ ಕವಯಿತ್ರಿಯಾದ ಶ್ರೀಮತಿ ಸ. ಉಷಾ ಅಧ್ಯಕ್ಷತೆಯನ್ನು ವಹಿಸಿದ್ದರು.

ಸಮಾರೋಪ ಸಮಾರಂಭದಲ್ಲಿ ಕನ್ನಡಸಾಹಿತ್ಯ ಪರಿಷತ್ತು ಶಿವಮೊಗ್ಗದ ಅಧ್ಯಕ್ಷರಾದ ಶ್ರೀ ಡಿ. ಮಂಜುನಾಥ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸಂಘಟನಾ ಅಧ್ಯಕ್ಷರಾಗಿ ಡಾ. ಗುರುದತ್ತ.ಕೆ.ಎನ್, ಸಂಘಟನಾ ಕಾರ್ಯದರ್ಶಿಗಳಾಗಿ ಡಾ. ವಿನಯ ಶ್ರೀನಿವಾಸ್, ಡಾ. ಶುಭ್ರತ ಹಾಗೂ ಶಿವಮೊಗ್ಗ ಶಾಖೆ ಅಧ್ಯಕ್ಷರಾದ ಡಾ. ಅರುಣ್ ಎಂ.ಎಸ್, ಕಾರ್ಯದರ್ಶಿಗಳಾದ ಡಾ. ರಕ್ಷಾ ಸಮ್ಮೇಳನದ ಯಶಸ್ವಿಗೆ ತಮ್ಮನ್ನು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಂಡಿದ್ದರು.




ಭಾರತೀಯ ವೈದ್ಯಕೀಯ ಸಂಘ ಕರ್ನಾಟಕ ರಾಜ್ಯ ಶಾಖೆ ಮತ್ತು ಕನ್ನಡ ವೈದ್ಯ ಬರಹಗಾರರ ಸಮಿತಿ ಹಾಗೂ ವಾಸವಿ ಸಾಹಿತ್ಯ ಕಲಾವೇದಿಕೆಯ ಸಹಯೋಗದಲ್ಲಿ ನಡೆಸಿಕೊಂಡು ಬರುತ್ತಿರುವ ಸಾಹಿತಿಗಳೊಂದಿಗೆ ಒಂದು ಸಂಜೆ ಕಾರ್ಯಕ್ರಮವು ಎಂದಿನಂತೆ ಹೊಸತನವನ್ನು ಕಾಯ್ದುಕೊಂಡು ನಿರಂತರವಾಗಿ ಮುಂದುವರೆಯುತ್ತಿದೆ. ಅದರ ಸಂಕ್ಷಿಪ್ತ ವರದಿ ಹೀಗಿದೆ.

20.8.23ರಂದು 102ನೇ ಕಾರ್ಯಕ್ರಮವಾಗಿ ಡಾ. ನಾ ಸೋಮೇಶ್ವರ ಥಟ್ಟಂತಹೇಳಿ ಖ್ಯಾತಿಯ ನಿರಂತರ ಕ್ರಿಯಾಶೀಲ ವ್ಯಕ್ತಿಯಾದ ಇವರು ನಡೆಸಿಕೊಟ್ಟ ಕಾಯಕಯೋಗಿಗಳು ಕಾರ್ಯಕ್ರಮ ತುಂಬಾ ಅದ್ಭುತವಾಗಿ ಮೂಡಿಬಂತು. ವೈದ್ಯ ಕ್ಷೇತ್ರಕ್ಕಾಗಿ ತಮ್ಮನ್ನು ತಾವು ಸಮರ್ಪಿಸಿಕೊಂಡು ಬಾಳಿ ಬದುಕಿದ ಅನೇಕ ವೈದ್ಯರನ್ನ ಪರಿಚಯಿಸಿದರು. ವೈದ್ಯ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಹೇಗೆ ಆಚರಿಸಬೇಕು ಎನ್ನುವುದನ್ನು ವಿಷದವಾಗಿ ತಿಳಿಸಿದರು.

103ನೇ ಕಾರ್ಯಕ್ರಮ ಡಾ. ವಿರುಪಾಕ್ಷ ದೇವರಮನೆ, ಮನೋವೈದ್ಯರು ಇವರು 27.8 .23ರಂದು ಮಾತು ಮೌನ ಸಂವಹನ ಸಂಬಂಧಗಳು ಈ ವಿಷಯವಾಗಿ ಮಾತನಾಡಿದರು. ನಮ್ಮ ದಿನನಿತ್ಯದ ಬದುಕಿನಲ್ಲಿ ಮಾತು, ಮೌನ ಅಂಗಿಕ ಚಟುವಟಿಕೆಗಳು ಹೇಗೆ ಸಂವಹನಕ್ಕೆ ಕಾರಣವಾಗುತ್ತದೆ ಎಂದು ಉದಾಹರಣೆ ಸಹಿತ ವಿವರಿಸಿದರು. ಇವರು ಬರೆದ ಅನೇಕ ಪುಸ್ತಕಗಳು ನೀನಿಲ್ಲದೆ ನನಗೇನಿದೆ, ಸ್ವಲ್ಪ ಮಾತನಾಡಿ ಪ್ಲೀಸ್ ಜನರ ಮನವನ್ನು ಗೆದ್ದಿದೆ.

10.9.23ರಂದು 104ನೇ ಕಾರ್ಯಕ್ರಮ ಡಾ. ವಿಶ್ವನಾಥ ಸುಂಕಸಾಳ, ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯ ಶೃಂಗೇರಿಯಲ್ಲಿ ಸಹಾಯಕ ಪ್ರಾಧ್ಯಾಪಕರಾಗಿರುವ ಇವರು ಭಾರತೀಯ ದರ್ಶನ ಶಾಸ್ತ್ರಗಳಲ್ಲಿ ಅವಸ್ಥಾತ್ರಯ ಮತ್ತು ಮನಸ್ಸು ಎನ್ನುವ ವಿಚಾರದಲ್ಲಿ ಪಾಂಡಿತ್ಯ ಪೂರ್ಣ ಭಾಷಣಮಾಡಿದರು. ಉಪನಿಷತ್ತುಗಳಲ್ಲಿ ಮನಸ್ಸಿನ ಬಗ್ಗೆ ಎಚ್ಚರ, ಕನಸು, ಆಳವಾದ ನಿದ್ದೆಯಲ್ಲಿ ಇರುವ ಬಗ್ಗೆ ವಿಚಾರಗಳನ್ನು ಮಂಡಿಸಿದರು.

17.9.23ರಂದು ಶ್ವಾಸಕೋಶ ತಜ್ಞರಾದ ಡಾ. ಅನಿರುದ್ಧ ಉಡುಪ ಇವರು ಸೂರ್ಯರಶ್ಮಿ ಮತ್ತು ಆರೋಗ್ಯ ಈ ವಿಚಾರದಲ್ಲಿ ತಮ್ಮ ವಿಚಾರಗಳನ್ನು ಮಂಡಿಸಿದರು. ಶಿವಮೊಗ್ಗದ ಮ್ಯಾಕ್ಸ್ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿರುವ ಇವರು ಯೋಗ, ಪ್ರಾಣಾಯಾಮ, ಆಹಾರ ಇವುಗಳ ಬಗ್ಗೆ ಆಳವಾದ ಸಂಶೋಧನೆಯನ್ನು ನಡೆಸುತ್ತಾ ಜನರ ಅರಿವನ್ನು ಹೆಚ್ಚಿಸುವಲ್ಲಿ ತಮ್ಮನ್ನು ಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ. ಸೂರ್ಯ ರಶ್ಮಿಯಿಂದ ಆಗುವ ಅನೇಕ ಲಾಭಗಳನ್ನು ಉದಾಹರಣೆ ಸಹಿತ ವಿವರಿಸಿದರು.

24.9.23ರಂದು ಡಾ. ಸುಧೀರ್ ಭಟ್ ಹೃದಯಶಸ್ತ್ರ ಚಿಕಿತ್ಸೆ ತಜ್ಞರು ಮ್ಯಾಕ್ಸ್ ಹಾಸ್ಪಿಟಲ್ ಶಿವಮೊಗ್ಗ ಇವರು "ಹೃದಯದ ಲಯ ಒಂದು ಪರಿಚಯ" ಎನ್ನುವ ವಿಷಯದಲ್ಲಿ ಹೃದಯದ ಆರೋಗ್ಯದ ಬಗ್ಗೆ ತೆಗೆದುಕೊಳ್ಳಬೇಕಾದ ಕಾಳಜಿಯ ಬಗ್ಗೆ ವಿವರಿಸಿದರು. ಅಲ್ಲದೆ ಹೃದಯದ ಕಾಯಿಲೆಗಳ ಚಿಕಿತ್ಸೆಯಲ್ಲಿ ನಡೆದು ಬಂದ ಹಾದಿಯ ಬಗ್ಗೆ ಒಂದು ಪಕ್ಷಿನೋಟ ಬೀರಿದರು.

1.10.2023ರಂದು ಬಿ ಎನ್ ಶಶಿಕಿರಣ್ ಬೆಂಗಳೂರು ಇವರಿಂದ ವ್ಯಕ್ತಿ ವಿಭೂತಿ, ಶತಾವಧಾನಿ ಆರ್. ಗಣೇಶ್ ಅವರ ಜೀವನ ಸಾಧನೆ ಮತ್ತು ವ್ಯಕ್ತಿತ್ವದ ಬಗ್ಗೆ ವಿಚಾರಗಳನ್ನ ತಿಳಿಸಿದರು. ಕನ್ನಡದ ಏಕೈಕ ಶತಾವಧಾನಿ, ಸಹಸ್ರಾವಧಾನಿಯಾದ ಆರ್. ಗಣೇಶ್ ಅವರ ಬದುಕಿನ ಅನೇಕ ವಿಚಾರಗಳನ್ನು ತಿಳಿಸಿ ನಮ್ಮೆಲ್ಲರನ್ನೂ ಮಂತ್ರಮುಗ್ಧಗೊಳಿಸಿದರು. ಮೆಕ್ಯಾನಿಕಲ್ ಇಂಜಿನಿಯರ್‌ಆದ ಶಶಿಕಿರಣ್ ಅವರು ಈಗ ಸಂಸ್ಕೃತ ಅಧ್ಯಯನವನ್ನು ಮಾಡುತ್ತಾ ಅನೇಕ ಸಂಸ್ಕೃತ ಕೃತಿಗಳನ್ನು ಕನ್ನಡಕ್ಕೆ, ಕನ್ನಡ ಕೃತಿಗಳನ್ನು ಸಂಸ್ಕೃತಕ್ಕೆ ಅನುವಾದ ಮಾಡಿರುವ ಹೆಮ್ಮೆಯ ಯುವ ಲೇಖಕರು.

8.10.23ರಂದು 108ನೇ ಕಾರ್ಯಕ್ರಮದಲ್ಲಿ ಡಾ. ಟಿ.ಸಿ ಪೂರ್ಣಿಮಾ, ಪಿಟೀಲುಚೌಡಯ್ಯ ಅವರ ವಂಶಸ್ಥರಾದ ಇವರು ಸಾಹಿತ್ಯ ಲೋಕದಲ್ಲಿ ಅನೇಕ ಕೊಡುಗೆಯನ್ನು ಇತ್ತು ಹೆಸರುವಾಸಿಯಾದವರು. ನಾದ, ನಕ್ಷತ್ರ, ಸಂಗೀತ, ರತ್ನ ಪಿಟೀಲುಚೌಡಯ್ಯ ಅವರ ಒಂದು ನೆನಪು ವಿಷಯದಲ್ಲಿ ಮಾತನಾಡುತ್ತಾ, ಸಂಗೀತ ಕ್ಷೇತ್ರದ ಅನೇಕ ದಿಗ್ಗಜರನ್ನು ನೆನಪಿಸಿದರು. ಚೌಡಯ್ಯ ಅವರ ಬದುಕಿನ ಅನೇಕ ವಿಚಾರಗಳನ್ನು ಮನೋಜ್ಞವಾಗಿ ಹಂಚಿಕೊಂಡರು.



15.10.23ರಂದು ವಿದ್ವಾನ್ ಜಗದೀಶ್ ಶರ್ಮಸಂಪ, ಸಂಸ್ಕೃತದಲ್ಲಿ ಆಳವಾಗಿ ಅಧ್ಯಯನ ನಡೆಸಿದ ಇವರು ಸಂಸ್ಕೃತ ಸಾಹಿತ್ಯ ಭಾಷೆ ಅಲಂಕಾರಗಳಲ್ಲಿ ಓತಪ್ರೋತವಾಗಿ ಮಾತನಾಡಬಲ್ಲ ಸಾಮರ್ಥ್ಯ ಹೊಂದಿದವರು. ಜನ ಮಾನಸದಲ್ಲಿ ಅಚ್ಚಳಿಯದೆ ಉಳಿದ ರಾಮಾಯಣ ಮಹಾಭಾರತಗಳು ಎನ್ನುವ ವಿಷಯದಲ್ಲಿ ಅನೇಕ ಒಳನೋಟಗಳನ್ನ ಬೀರುವಂತಹ ಸಂದರ್ಭಗಳನ್ನ ತೆರೆದಿಟ್ಟರು. ರಾಮಾಯಣ ಮಹಾಭಾರತ ಮನುಷ್ಯ ಹೇಗೆ ಬದುಕಬೇಕು, ಸತ್ಯ ಮತ್ತು ಆದರ್ಶಗಳಿಗೆ ನಿಷ್ಠೆಯಿಟ್ಟು ಬದುಕಿದ ಕಥೆ ಎನ್ನುವಂತ ವಿಚಾರಗಳನ್ನು ವಿಸ್ತರಿಸಿದರು.

ಖ್ಯಾತ ಶಸ್ತ್ರಚಿಕಿತ್ಸಾ ತಜ್ಞರಾದ ಹಾಗೂ ವೈದ್ಯಸಾಹಿತಿಗಳಾದ ಚಿಕ್ಕೋಡಿಯ ಡಾ॥ ದಯಾನಂದ ನೂಲಿ ಅವರ "ಮರುಳಶಂಕರ ದೇವರು" ಎಂಬ ಅನುಭವ ಯಾತ್ರೆಯ ಬೃಹತ್ ಕಾದಂಬರಿಗೆ ಅಡ್ವೈಸರ್ ಸಾಹಿತ್ಯ ಪ್ರಶಸ್ತಿ 2022 ಸಿಕ್ಕಿದ್ದು ವೈದ್ಯಸಂಕುಲಕ್ಕೆ ಹೆಮ್ಮೆಯ ಸಂಗತಿ. ಅದಲ್ಲದೇ "ಈ ಮರುಳಶಂಕರದೇವರು ಅನುಭವ ಯಾತ್ರೆ" ಮಹಾಕಾವ್ಯಕ್ಕೆ ಡಾ॥ ಪಂ. ಪುಟ್ಟರಾಜ ಸಾಹಿತ್ಯ ಪುರಸ್ಕಾರ ಅಕ್ಟೋಬರ್ 1/10/2023ರಂದು ಬೆಳಗಾವಿಯಲ್ಲಿ ಡಾ.ಪಂ ಪುಟ್ಟರಾಜ ಸೇವ ಸಮಿತಿ ಗದಗ್‌ವತಿಯಿಂದ ದೊರಕಿರುವುದು ಅಭಿನಂದನೀಯ.

ಬರಹಗಾರರ ಬಳಗದ ಹಿಂದಿನ ಅಧ್ಯಕ್ಷರಾದ ಡಾ॥ ಅರವಿಂದ್ ಪಟೇಲ್‌ರವರು ಅಕ್ಟೋಬರ್ 19ರಂದು ಪ್ರತಿಷ್ಠಿತ ದಸರಾ ಕವಿಗೋಷ್ಠಿಯಲ್ಲಿ ಭಾಗವಹಿಸಿದ್ದು ವಿಶೇಷವಾಗಿ ಉಲ್ಲೇಖನಿಯ.

ವಿಶ್ವ ಹೃದಯ ದಿನಾಚರಣೆಯ ಅಂಗವಾಗಿ ಡಾ॥ ಸಗರದರವರ ಹೃದಯ ಸಂಭಂದಿ ಕಾಯಿಲೆಗಳು ಕಾರಣ ಮತ್ತು ಪರಿಹಾರೋಪಾಯಗಳು ಎಂಬ ವಿಷಯದ ಬಗ್ಗೆ ಉಪನ್ಯಾಸ "ಹೇಳುತೇನೆ ಕೇಳ" ವಿಶೇಷ ಉಪನ್ಯಾಸ ಮಾಲೆಯಲ್ಲಿ 24/9/2023ರಂದು ಪ್ರಸಾರವಾಯಿತು. ಇದರ ಅಧ್ಯಕ್ಷತೆಯನ್ನು ಡಾ॥ ದಯಾನಂದ್ ನೂಲಿ ಅವರು ವಹಿಸಿದ್ದರು. ಅವರ ಹೃದಯ ಬಳಸಿರಿ, ಹೃದಯ ಅರಿಯಿರಿ ಎಂಬ ಮಾಹಿತಿ ಪೂರ್ಣ ಲೇಖನವೂ ಕೂಡಾ ವಿಶ್ವ ದಿನಾಚರಣೆಯ ಅಂಗವಾಗಿ ಪ್ರಕಟವಾಯಿತು.

ಆಕಾಶವಾಣಿ ರಾಯಚೂರಿನಿಂದ ದಿನಾಂಕ 6/9/2023ರಂದು ರಾಯಚೂರಿನ ನರರೋಗ ತಜ್ಞರಾದ ಡಾ॥ ನಾಗಭೂಷಣ್ ಅವರ ಜೊತೆ ಫಿಟ್ಸ್ ಮತ್ತು ಮೂರ್ಛೆರೋಗಕ್ಕೆ ಕಾರಣ ಮತ್ತು ಪರಿಹಾರ ಕುರಿತು ಸಂದರ್ಶನ ಪ್ರಸಾರವಾಯಿತು.

ಖ್ಯಾತ ಮನೋವೈದ್ಯರಾದ ಡಾ॥ ಸಿ.ಆರ್ ಚಂದ್ರಶೇಖರ್‌ರವರು ಪೋಲಿಸ್ ಸಿಬ್ಬಂದಿಗಳಿಗೆ ಸೆಪ್ಟಂಬರ್ 4ರಂದು ಆತ್ಮಹತ್ಯೆ ತಡೆಗಟ್ಟುವ ವಿಧಾನಗಳ ಬಗ್ಗೆ ತರಬೇತಿ ದೊರಕಿಸಿದರು. ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆಯ

3ನೇ ಪುಟದಿಂದ

ಸರಕಾರ ಪ್ರಯತ್ನಿಸಬೇಕು.

ಇತ್ತೀಚಿನ ಸಂಶೋಧನೆಯೊಂದರಲ್ಲಿ ತರಕಾರಿಗಳಲ್ಲಿ ಭಾರಿ ಲೋಹಗಳ ಅಂಶ ನಿಗದಿತ ಪ್ರಮಾಣಕ್ಕಿಂತ ಹೆಚ್ಚಿರುವುದು ಕಂಡು ಬಂದಿದೆ. ಬೆಂಗಳೂರಿನ ಸುತ್ತಮುತ್ತಲಿನಲ್ಲಿ ಬೆಳೆದ ಬೆಳೆಗಳಲ್ಲಿ ಇದು ಕಂಡು ಬಂದಿದೆ. ಈ ಬೆಳವಣಿಗೆ ಪರಿಸರ ಮಾಲಿನ್ಯದ ಪರಿಣಾಮವಾಗಿದೆ. ಪರಿಸರದ ಕಾಳಜಿಯ ಕುರಿತು ಪ್ರಜ್ಞೆ ಎಲ್ಲರಲ್ಲೂ ಮೂಡಿಸುವುದು ಅವಶ್ಯಕವಾಗಿದೆ. ನಾಗರಿಕತೆ ಬೆಳೆದಂತೆ ಪರಿಸರ ಸಂರಕ್ಷಣೆ ಕಡಿಮೆಯಾಗುತ್ತಿರುವುದು ವಿಷಾಧನೀಯ. ಇದು ಮುಖ್ಯವಾಗಿ ಬೆಳೆಯುತ್ತಿರುವ ಮಕ್ಕಳ ಆರೋಗ್ಯದ ಮೇಲೆ ಅನೇಕ ದುಷ್ಪರಿಣಾಮಗಳನ್ನು ಬೀರಲಿದೆ. ಸಾಂಕ್ರಾಮಿಕ ಅಲ್ಲದ ರೋಗಗಳಾದ ಹೃದಯಾಘಾತ, ಪಾರ್ಶ್ವವಾಯು, ಕ್ಯಾನ್ಸರ್, ಬಂಜೆತನಗಳಿಗೆ ಈ ಜೀವನಶೈಲಿ ಪ್ರಮುಖ ಕಾರಣವಾಗಿದೆ. ಮುಂದಿನ ಜನಾಂಗ ಸುಖಕರವಾಗಿರಬೇಕಾದರೆ ನಾವೆಲ್ಲಾ ಇಂದೇ ಎಚ್ಚರವಹಿಸುವ ಅವಶ್ಯಕತೆ ಇದೆ.

ಕೇಂದ್ರ ಸರಕಾರ ವಿಶೇಷ ಅಧಿವೇಶನದ ಮೂಲಕ ಇದುವರೆಗೆ ಚರ್ಚೆಗೆ ಮಾತ್ರ ಸೀಮಿತವಾಗಿದ್ದ ಮಹಿಳಾ ಮೀಸಲಾತಿಗೆ ಲೋಕಸಭೆ ಮತ್ತು ರಾಜ್ಯಸಭೆಯ ಅನುಮತಿಯನ್ನು ಪಡೆದಿರುವುದು ಐತಿಹಾಸಿಕ. ಇದು ಬೇಗನೆ ಜಾರಿಗೆ ಬರಬೇಕು ಎನ್ನುವುದು ಎಲ್ಲರ ಆಶಯ.

ಶಿವಮೊಗ್ಗದಲ್ಲಿ ನಾಲ್ಕನೆಯ ರಾಜ್ಯ ಸಮ್ಮೇಳನ ಸಮೃದ್ಧ ಅರೋಗ್ಯಕ್ಕಾಗಿ ವೈದ್ಯ ಸಾಹಿತ್ಯ ಘೋಷ ವಾಕ್ಯದೊಂದಿಗೆ ಸೆಪ್ಟೆಂಬರ್ 2 ಮತ್ತು 3 ರಂದು ಆಯೋಜಿಸಲಾಯಿತು. ಡಾ ಕೆ ಆರ್ ಶ್ರೀಧರ ಅವರ ಸರ್ವಾಧ್ಯಕ್ಷತೆಯಲ್ಲಿ ಸಮ್ಮೇಳನ ಯಶಸ್ವಿಯಾಗಿ ಜರುಗಿತು. ಕೃತಿ ಲೋಕಾರ್ಪಣೆ, ಚರ್ಚೆ, ವಿದ್ಯಾರ್ಥಿಗಳಿಗಾಗಿ ರಸ ಪ್ರಶ್ನೆ, ಪ್ರಶಸ್ತಿ ಪ್ರದಾನ ಕಾರ್ಯಕ್ರಮಗಳು ಕನ್ನಡ ಪರ ಚಿಂತನೆಗೆ ನಾಂದಿ ಹಾಡಿದವು.

27 ರಿಂದ 29 ರ ವರೆಗೆ ಬೀದರ್ ನಲ್ಲಿ ಆಯೋಜಿಸಲಾಗಿದ್ದ ಮೆಡಿಕಾನ್ 89 ಭಾರತೀಯ ವೈದ್ಯಕೀಯ ಸಂಘದ ಸದಸ್ಯರನ್ನು ಅಕರ್ಷಿಸಿ ಯಶಸ್ವಿಯಾಯಿತು. ಪ್ರಪ್ರಥಮ ಬಾರಿಗೆ ಈ ಸಮ್ಮೇಳನವನ್ನು ಆಯೋಜಿಸಿದ ಬೀದರ್ ಶಾಖೆಗೆ ಹಾರ್ದಿಕ ಅಭಿನಂದನೆಗಳು.

ದೀಪಾವಳಿಯ ಸಡಗರ ಪಟಾಕಿಯ ಗದ್ದಲ ಕೈ ಬೀಸಿ ಕರೆಯುತಿದೆ. ಪರಿಸರ ಮಾಲಿನ್ಯದ ಕುರಿತು ಗಮನ ಹರಿಸಿ ನಮ್ಮ ಹಬ್ಬಗಳನ್ನು ಆಚರಿಸೋಣ. ನಿಮ್ಮ ಅಭಿಪ್ರಾಯಗಳಿಗಾಗಿ ಕಾಯ್ದಿರುವ

ಅಂಗವಾಗಿ ಬೆಂಗಳೂರು ಆಕಾಶವಾಣಿ ಕೇಂದ್ರದಿಂದ ಡಾ॥ ಸಿ.ಆರ್ ಚಂದ್ರಶೇಖರ್ ಅವರ ಸಂದರ್ಶನ ಪ್ರಸಾರವಾಯಿತು.

21/09/2023ರಂದು ಆಕಾಶವಾಣಿಯಲ್ಲಿ ಪಾಲಿಸಿಸ್ಟಿಕ್ ಓವರಿಯನ್ ಸಿಂಡ್ರೋಮ್ ಬಗ್ಗೆ ವನಿತ ರಂಗದಲ್ಲಿ ಡಾ॥ ವೀಣಾ ಭಟ್‌ರವರ ಸಂದರ್ಶನ ರಾಜ್ಯದಾದ್ಯಂತ ಪ್ರಸಾರವಾಯಿತು.

ಅಥಣಿಯ ಹಿರಿಯ ವೈದ್ಯ ಸಾಹಿತಿಗಳು ಹಾಗೂ ಖ್ಯಾತ ವೈದ್ಯರಾದ ಡಾ॥ ಎ.ಎ ಪಾಂಗಿ ಅವರ "ಆಹಾರದಿಂದ ಆರೋಗ್ಯದೆಡೆಗೆ" ಪುಸ್ತಕ ನಿತ್ಯ ಸೇವಿಸುವ ಆಹಾರಪದಾರ್ಥಗಳ ಸಮಗ್ರ ಮಾಹಿತಿಗಳನ್ನೊಳಗೊಂಡ ಕೃತಿಯಾಗಿದ್ದು, 28/10/2023ರಂದು ಬೀದರ್‌ನಲ್ಲಿ ನಡೆಯುತ್ತಿರುವ ಐ.ಎಂ.ಎ ರಾಜ್ಯಸಮ್ಮೇಳನದಲ್ಲಿ ಬಿಡುಗಡೆಯಾಗಿದೆ ಎಂದು ತಿಳಿಸಲು ಹೆಮ್ಮೆ ಅನಿಸುತ್ತದೆ.

ತಾ.17– 9–23ರಂದು ಡಿ ಎಸ್ ಕರ್ಕಿ ಸಾಹಿತ್ಯ ವೇದಿಕೆ ಮತ್ತು ಸಾಹಿತ್ಯ ಭಂಡಾರದ ಆಶ್ರಯದಲ್ಲಿ ನಡೆದ ಮ. ಅನಂತಮೂರ್ತಿಯವರ ಸ್ಮರಣೆ ಮತ್ತು ಪುಸ್ತಕಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಡಾ॥ ಗೋವಿಂದ ಹೆಗಡೆ ಭಾಗವಹಿಸಿದ್ದರು. ನಿಡುಗಾಲದ ಸ್ನೇಹಿತ ಶ್ರೀ ಶಿವಾನಂದ ಕಳವೆ ಅವರ ಪರಿಸರ ಕಾಳಜಿ ಕುರಿತ ಮೌಲಿಕ ಮಾತು ಮತ್ತು ನಾ. ಮೊಗಸಾಲೆಯವರ ಆತ್ಮೀಯ ಪರಿಚಯ ಈ ಕಾರ್ಯಕ್ರಮದ ವಿಶೇಷವಾಗಿತ್ತು.



ತಾ. 5–10–23ರಂದು ಹಿರಿಯ ಸಾಹಿತಿ ದಂಪತಿಗಳಾದ ಡಾ. ಸಿದ್ದಲಿಂಗ ಪಟ್ಟಣಶೆಟ್ಟಿ ಮತ್ತು ಡಾ. ಹೇಮಾ ಪಟ್ಟಣಶೆಟ್ಟಿ ಅವರನ್ನು, ಡಾ. ಹೆಗಡೆ ಅವರು ಧಾರವಾಡದ ಅವರ ನಿವಾಸದಲ್ಲಿ ಭೇಟಿ ಮಾಡಿ ಆತ್ಮೀಯ ಮಾತುಕತೆ ನಡೆಸಿದರು. ಪುಸ್ತಕ ಪ್ರಕಾಶನ, ಅನುವಾದ, ಪಟ್ಟಣಶೆಟ್ಟಿ ಅವರ ವಿವಿಧ ಕೃತಿಗಳು– ಹೀಗೆ ಹಲವಾರು ಸಂಗತಿಗಳ ಬಗ್ಗೆ ಚಂದದ ಮಾತುಕತೆ ನಡೆಯಿತು.

ತಾ.8–10–23 ರಂದು ಗದಗದಲ್ಲಿ ಏರ್ಪಡಿಸಲಾಗಿದ್ದ, ಡಾ. ಕಾ.ವೆಂ ಶ್ರೀನಿವಾಸಮೂರ್ತಿ ಅವರು ಸ್ಥಾಪಿಸಿರುವ ಕಲಾಚೇತನ ಅಕಾಡೆಮಿಯ 26ನೇ ವಾರ್ಷಿಕೋತ್ಸವದಲ್ಲಿ ಡಾ. ಹೆಗಡೆ ಪಾಲ್ಗೊಂಡರು. ಹಿರಿಯ ಲೇಖಕ, ಡಾ. ಚಂದ್ರಶೇಖರ ವಸ್ತ್ರದ ಅವರ ಭೇಟಿ, ಆತ್ಮೀಯ ಮಾತುಕತೆ ಈ ಸಂದರ್ಭದ ವಿಶೇಷ.

ಮಹಿಳೆಯರ ವಿರುದ್ಧ ದೌರ್ಜನ್ಯ ಮತ್ತು ಮಾನಸಿಕ ಆರೋಗ್ಯ ಕೇಂದ್ರ ನಿಮಾನ್ಸ್‌ನ ಜೊತೆಗೂಡಿ 22/9/2023ರಂದು ವೆಬಿನಾರ್ ಸರಣಿ ಪ್ರಸಾರವಾಯಿತು. ಇದರಲ್ಲಿ ದೌರ್ಜನ್ಯ ಎದುರಿಸುತ್ತಿರುವ ಮಹಿಳೆಯರಲ್ಲಿ ಸ್ವಯಂ ಹಾನಿಯ ಅಪಾಯ ಕುರಿತಾಗಿ ಮಂಗಳೂರಿನ ಮಾನಸಿಕ ರೋಗತಜ್ಞೆಯಾದ ಅರುಣಾ ಯಡಿಯಾಳ್ ವಿಷಯ ಮಂಡಿಸಿದರು ಹಾಗೂ ನಿಮಾನ್ಸ್‌ನ ವೀಣಾ ಸತ್ಯನಾರಾಯಣ ಅವರು ಈ ದೌರ್ಜನ್ಯದಲ್ಲಿ ಅಪಾಯ ಕಡಿಮೆ ಮಾಡುವ ಬಗ್ಗೆ ತಿಳಿಸಿದರು.

ವಿಶ್ವಮಾನಸಿಕ ದಿನಾಚರಣೆಯ ಅಂಗವಾಗಿ ಶಿವಮೊಗ್ಗದ ಕ್ಷೇಮಾ ಟ್ರಸ್ಟ್‌ನಿಂದ ವಿಶಿಷ್ಟ ರೀತಿಯಲ್ಲಿ ರಾಜೇಂದ್ರನಗರದ ಅನಿಕೇತನ ಉದ್ಯಾನವನದಲ್ಲಿ ಡಾ॥ ಕೆ.ಆರ್ ಶ್ರೀಧರ್‌ರವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕರಿಗೆ ಆಯೋಜಿಸಿದ್ದ ಆರೋಗ್ಯ ಜಾಗ್ರತಿ ಕಾರ್ಯಕ್ರಮದಲ್ಲಿ ರಸಪ್ರಶ್ನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ರಸಪ್ರಶ್ನೆ ಕಾರ್ಯಕ್ರಮವನ್ನು ಕನ್ನಡ ಉಪನ್ಯಾಸಕರಾದ ಮಲ್ಲಿಕಾರ್ಜುನ್‌ವರವರು ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಡಾ॥ ಕೆ.ಎಸ್. ಪವಿತ್ರಾರವರ 56ನೇ ಕೃತಿಯಾದ ಜೀವನಶೈಲಿ ಪುಸ್ತಕವನ್ನು ಡಾ॥ ಕೆ.ಆರ್ ಶ್ರೀಧರ್‌ರವರು ಲೋಕಾರ್ಪಣೆಗೊಳಿಸಿದರು.

ಬರಹಗಾರರ ಬಳಗದ ಹಲವಾರು ಖ್ಯಾತ ವೈದ್ಯರುಗಳು ನಿರಂತರವಾಗಿ ಆರೋಗ್ಯ ಮಾಹಿತಿಗಳನ್ನೊಳಗೊಂಡ ವೈದ್ಯಕೀಯ ಲೇಖನಗಳನ್ನ, ಅಂಕಣಗಳನ್ನ ಮತ್ತು ಇತರ ವಿದ್ವತ್‌ಪೂರ್ಣ ಲೇಖನಗಳನ್ನ ಹಲವಾರು ನಿಯತಕಾಲಿಕಗಳಲ್ಲಿ ನಿರಂತರವಾಗಿ ಬರೆಯುತ್ತಾ ಕನ್ನಡಮ್ಮನ ಸೇವೆಗೈಯುತ್ತಿರುವುದು ಶ್ಲಾಘನೀಯ ಸಂಗತಿ.

ಎಂದಿನಂತೆ ಕನ್ನಡ ರಾಜ್ಯೋತ್ಸವ ಮತ್ತೆ ಬರುತ್ತಿದೆ

ಕೇವಲ ಆ ತಿಂಗಳಿಗಷ್ಟೇ ಸೀಮಿತವಾಗದೆ ನಮ್ಮ ಎಲ್ಲಾ ವೈದ್ಯ ಬರಹಗಾರ ಬಳಗದ ಸದಸ್ಯರು ಗಳಷ್ಟೇ ಅಲ್ಲದೇ ಕರ್ನಾಟಕದ ಎಲ್ಲಾ ವೈದ್ಯರುಗಳೂ ತಮ್ಮ ದೈನಂದಿನ ಚಟುವಟಿಕೆಗಳಲ್ಲಿ ಸದಾ ಕನ್ನಡವನ್ನು ಬಳಸುತ್ತಾ ಕನ್ನಡಪರ ಚಟುವಟಿಕೆಗಳನ್ನು ಪ್ರೋತ್ಸಾಹಿಸುತ್ತಾಕನ್ನಡ ರಾಜ್ಯೋತ್ಸವ ವನ್ನು ನಿತ್ಯೋತ್ಸವವನ್ನಾಗಿ ಆಚರಿಸಲು ಇತರರಿಗೂ ಮಾದರಿಯಾಗಲಿ ಎಂದು ಆಶಿಸುತ್ತಾ...



## ಕಾವ್ಯ ಸಂಪದ

**ಡಾ ತನುಶ್ರೀ ಹೆಗಡೆ**
ಗಣೇಶ ನೇತ್ರಾಲಯ, ಶಿರಸಿ



**ಡಾ. ಗೋವಿಂದ ಹೆಗಡೆ**
ವಿಭಾಗೀಯ ಸಂಪಾದಕರು

### ಗಜಲ್

ಜೀವದ ಪರಿಧಿಗೆ ಬಾನೆತ್ತರದ ಸರಳು ಪಂಜರದ ಹಕ್ಕಿಗೆ
ಭಾವದ ಪರಿಧಿಗೆ ಬಂಧನದ ನೆರಳು ಪಂಜರದ ಹಕ್ಕಿಗೆ

ಪುಟ್ಟದೊಂದು ಸಂಸಾರ ತೂಗುತಿದೆ ಹಸಿರ ಮಡಿಲಲ್ಲಿ
ಎದೆಗೂಡಲ್ಲಿ ಅಂಥದೇ ಕನಸ ನರಳು ಪಂಜರದ ಹಕ್ಕಿಗೆ

ಬೆಳಕಿನ ಕರೆಗೆ ನಿತ್ಯವೂ ಏಳುವುದು ಸುತ್ತಲ ಬಾಳಿನೆಚ್ಚರ
ತನ್ನ ಕೋಟೆಯಲಿ ಹಗಲಲೂ ಇರುಳು ಪಂಜರದ ಹಕ್ಕಿಗೆ

ರೆಂಬೆ-ಕೊಂಬೆ ಹೂವು-ಹಣ್ಣಿನ ಸೊಗವು ಬಾಂದಳದ ಪಕ್ಕಿಗೆ
ನಿಂತ ಮಡುವಲ್ಲೆ ನಿಟ್ಟುಸಿರಿನ ಹೊರಳು ಪಂಜರದ ಹಕ್ಕಿಗೆ

ರೆಕ್ಕೆ ಬಲಿತಿದೆ ಇಲ್ಲೂ ಮುಗಿಲಿಗೆ ಚಿಮ್ಮುವ ಬಲವಿದೆ ಇಲ್ಲೂ
ಬಿಡುಗಡೆಯ ಹಾಡಿಗೆ ಉಬ್ಬಿದ ಕೊರಳು ಪಂಜರದ ಹಕ್ಕಿಗೆ

ಹಂಬಲದ ಹುಯ್ಲು ಕೇಳಿದರೂ ಇಲ್ಲಿ ಕಿವಿಗೊಡುವವರಾರಿಲ್ಲ
ಮತ್ತದೇ ಭಯ ಹತಾಶೆಯ ಬಿಗಿ ಉರುಳು ಪಂಜರದ ಹಕ್ಕಿಗೆ

'ತನು' ವ ಸೆರೆಮನೆಯಲ್ಲಿ ಪ್ರಾಣಪಕ್ಷಿಯ ನಿಲ್ಲದ ಚಡಪಡಿಕೆ
ಇಹವ ಹಾರಿ ಪಾರಾಗುವ ಮರುಳು ಪಂಜರದ ಹಕ್ಕಿಗೆ

### ಹೇಳು

ನಿನ್ನೂರ ಮುಗಿಲಲ್ಲಿ ತೇಲಿಬಂತೇನು
ನನ್ನೂರ ಮೋಡ ದಾಟಿ
ನಿನ್ನೂರ ಗಾಳಿಯಲಿ ಸವಿ ತಂದಿತೇನು
ನನ್ನೂರ ಮಧುವ ತುಂಬಿ..?

ಇಲ್ಲಿ ಸೂರ್ಯನ ಬೆಳಕು ಚೆಲ್ಲಲಲ್ಲಿ
ನಕ್ಕಿತೇ ಮೊಗ್ಗು ತೂಗಿ ತೂಗಿ
ಚಂದಿರನು ಇಲ್ಲಿ ಮೈತುಂಬಿ ಹಾಡಲು
ಕುಣಿದವೇ ಚುಕ್ಕಿ ಚಂದ್ರಿಕೆಯ ಹೀರಿ..?

ನಿನ್ನೂರ ಹಾದಿಯ ತಿರುವಿನಲ್ಲೆಲ್ಲೊ
ಕಂಡಿತೇ ಒಂದಾರೂ ಹೆಜ್ಜೆ ಗುರುತು
ಅಲ್ಲಿ ಬಿಸಿಲಲ್ಲಿ ತೋಯ್ವ ಮರದಡಿಗೆಲ್ಲ
ತಂಪನೆರೆದ ನನ್ನೊಲವ ನೆರಳು..?

ಹಕ್ಕಿ ಇಂಚರದಲ್ಲಿ ನೀನು ಕೇಳಿದೆಯೇನು
ನನ್ನೆದೆಯ ಎಲ್ಲ ಆಗುಹೋಗು
ಇಲ್ಲಿ ಹೆಪ್ಪಾದ ವಿರಹವೇದನೆಗಳನು
ಸುರಿಸಿತೇ ನಿನ್ನಲ್ಲಿ ಮಳೆಯ ಸೋನೆ..?





**ಜ್ಯೋತಿಪ್ರಿಯ (ಡಾ ಅರವಿಂದ ಪಟೇಲ್)**
ಬಳ್ಳಾರಿ



**ಡಾ. ಗೋವಿಂದ ಹೆಗಡೆ**
**ವಿಭಾಗೀಯ ಸಂಪಾದಕರು**

# ಸಮತೆಯ ಕನಸು

ಮನುಷ್ಯ ಜಾತಿ ತಾನೊಂದೆ ವಲಂ
ಎಂದ ಪಂಪನ ನುಡಿಯು
ಕಾಡುತಿದೆ ,ಬಿಡದೆ ಕಾಡುತಿದೆ
ಅನುದಿನವೂ ಅನುಚಣವೂ ॥

ದಕ್ಷಿಣೆಯನಿಡಬೇಕು
ದಾಕ್ಷಿಣ್ಯದಲಿ ಬದುಕಬೇಕು,
ಕೊರಳು ನೀಡಬೇಕು
ತವರು ಬಿಡಬೇಕು,
ಕತ್ತಲಲೂ ಕಣ್ಣೀರು ಹರಿಸದೆ,
ಬಿಟ್ಟಮನೆಗೆ,ಕೊಟ್ಟಮನೆಗೆ ಬೆಳಕ ನೀಡಬೇಕು ॥

ತಾಯಿ ಗರ್ಭದಲಿಂದಲೇ ಡುಗುಡುಗು ,
ಹುಟ್ಟು ಕಂಡಂದಿನಿಂದ
ಮಸಣದವರೆಗೂ ಹಗ್ಗದ ಮೇಲಿನ ಪಯಣ ॥

ಪರಿಸರದ ಬವಣೆಗಳು
ಬದುಕಿನ ತಲ್ಲಣಗಳು
ಧರ್ಮಾತೀತ,ದೇಶಾತೀತ,
ಸ್ವಲ್ಪ ಹೆಚ್ಚು ,ಸ್ವಲ್ಪ ಕಡಿಮೆ ॥

ಪ್ರತಿಮೆ ರೂಪಕಗಳಿಗೇನೂ ಕಮ್ಮಿಯಿಲ್ಲವಿಲ್ಲಿ,
ಆದರೆ,
ಭೂದೇವಿ ಸಮ್ಮುಖದಲ್ಲೆ
ಮಾನಾಪಹರಣಗಳು,
ಕಟಕಟೆಯಲ್ಲಿಯೂ ಹಿಂಸೆ,
ಅಲ್ಲಲ್ಲಿ
ಅಗ್ನಿದೇವನ ಸ್ಪರ್ಶ
ಮೌನವಾದ ಜೀವಾತ್ಮಗಳು ॥

ಕೊಳಕು,ಕೀಳು ಅಭಿರುಚಿಯ
ಚಿತ್ರಗಳು,ವಿಚಿತ್ರ ಚಲನಚಿತ್ರಗಳು
ಪ್ರತಿರೋಧ ಕಾಣದೆ
ಬಿಕರಿಯಾಗುವ
ಅರೆನಗ್ನ ಜಾಹೀರಾತುಗಳು, ॥

ನಾಗರೀಕತೆಯ ಕಾಲಘಟ್ಟ
ಜೀವಶಾಸ್ತ್ರವನೂ ನಂಬದ
ಅನಾಗರಿಕತೆಯ ಬುಗ್ಗೆಗಳು
ಹೆಣ್ಣಿನ ಬುದ್ಧಿಯ ಬಗೆಗೆ ಅಮಾನವೀಯ
ದೇಸೀ ನುಡಿಗಟ್ಟುಗಳು ॥

ಹೆಣ್ಣು ಹೆಣ್ಣನು ,ಗಂಡು ಹೆಣ್ಣನು
ಹೆಣ್ಣು ಗಂಡನು ಅರಿತು
ಬದುಕುವ ದಿನದ
ಕನಸು ನನಸಿನ ಬಯಕೆಯಲಿ ಜಗದ ಜನರು ॥



## ಕಾವ್ಯ ಸಂಪದ

**ಡಾ. ದಿವಾಕರ ಗಡ್ಡಿ**
ಬಳ್ಳಾರಿ

### ಖಿನ್ನತೆ

ಅಂತರಾಳದ ಗುಟ್ಟು
ಬಿಟ್ಟು ಕೊಡಲೊಲ್ಲೆ,
ಹಾರುವ ಹಕ್ಕಿ ರೆಕ್ಕೆ
ಹರಿದು ಬಂಧಿ ಮನದಲ್ಲೆ!

ಪ್ರತಿಕ್ಷಣವು ತವಕ
ಗರಿಗೆದರಿ ಹಾರುವಾ ಆಸೆ
ಮಾಡಿದ ತಪ್ಪನ್ನೇ ಮತ್ತೆ
ಎಸಗುವೆ ಏಕೆ ಮನಸೆ!

ಮನಸ್ಸಿನ ವೇಗವದು
ಅಂಕೆಗೆ ಸಿಲುಕದ್ದು
ಕಗ್ಗಲ್ಲ ಜೀವನದಿ
ದೇಹವದು ನೆಗ್ಗಿಹುದು!

ತಳವಿಲ್ಲದ ಸುಳಿಯಲ್ಲಿ
ಸಿಕ್ಕು ನರಳಿದೆ ಜೀವ,
ಸಿಕ್ಕಾಗಿದೆ ಬದುಕಿನ ಸೂತ್ರ
ಸ್ವಾನುಕಂಪದಾ ಭಾವ!

ಮನದಾಳದ ನೋವ
ಹೇಳಬಯಸಿದೆ ಹೃದಯ
ಮುಳ್ಳಿನಂಚಿನ ಬದುಕು
ಕೇಳಲು ಯಾರಿಗೆ ಎಲ್ಲಿದೆ ಸಮಯ!

ನಾನ್ಯಾರೊ ನನ್ನವರು
ಯಾರೊ ಇಲ್ಲಿ ನಾಕಾಣೆ
ಗುಟ್ಟು ಬಿಟ್ಟೀಯ ಮನವೆ
ನಿನಗೆ ಇದೆ ನನ್ನಾಣೆ!

### ಜೀವನ

ಬಿಳಿಹಾಳೆಗಳ ಪುಸ್ತಕ
ತೆರೆದು ಇಟ್ಟಿದೆ ಇದಿರು,
ಓದುಗರು ನೂರಾರು
ಲೇಖಕರು ಹತ್ತಾರು!

ಬರೆದದ್ದು ಬಹಳಷ್ಟು
ಉಳಿಯುವುದೆ ಇಲ್ಲ,
ಸಮಯದ ಮಹಿಮೆ
ಶಾಯಿ ಮೆಲ್ಲನೆ ಮಾಸಿ,
ಬರೆದ ಬರೆಹ ಮಸುಕು
ಕಾಲದ ಜರಡಿಯಲಿ ಸೋಸಿ!
ಬರೆದದ್ದೆಲ್ಲ ಉಳಿಯಲೆ
ಬೇಕೆಂದಿಲ್ಲ,ಆದರೂ–
ಅಚ್ಚೊತ್ತಿದ್ದ ಕೆಲವು
ಎಷ್ಟು ಅಳಿಸಿದರೂ
ಮಾಸದೆ ಉಳಿದಿಹವೆಲ್ಲ!

ಪ್ರೀತಿ ಅಕ್ಕರೆಯ ಬರೆಹ
ಲೇಖನಕ್ಕಿಂತ ಲೇಖಕರು ಸನಿಹ,
ಮುನ್ನುಡಿಯಿಂದ ಬೆನ್ನುಡಿವರೆಗೆ,
ಕೊಂಚ ಸಿಹಿ ಕೊಂಚ ಕಹಿ
ಮೆಲುಕು ಹಾಕಲು ನೂರಾರು
ಪುಟಗಳಲಿ ನೆನಪುಗಳ ಬರವಣಿಗೆ!

ಲೇಖನಿಯ ಅಂಚು
ಕತ್ತಿಗಿಂತಲು ಮೊನಚು
ಕಟು ವಿಮರ್ಶೆಗಳ ಸಂಚು,
ಹಾಳೆಗಳು ಹರಿದಂತೆ ಭಾಸ,
ಹೃದಯದಲಿ ಸಿಡಿಗುಂಡು
ಕಣ್ಣೋರೈಸುವ ಕೋಲ್ಮಿಂಚು!

ಕಾಪಿಟ್ಟುಕೊಳ್ಳುವ ಹಾಳೆ
ಕಿತ್ತೆಸೆಯುವಂಥಹವು ನಾಳೆ
ನಿರ್ಧಾರ ನಮ್ಮದಾಗಿರಲಿ,
ಬರೆದ ಬರವಣಿಗೆ ಚೊಕ್ಕವಾಗಿದ್ದಲ್ಲಿ
ನೆನಪುಗಳ ಮೆರವಣಿಗೆ
ಸಿಹಿ ಜೇನು ಸವಿದಂತೆ
ಮರಳಿ ಮರಳಿ!



**ಡಾ ಗೋವಿಂದ ಹೆಗಡೆ**
ಅರಿವಳಿಕೆ ತಜ್ಞರು, ಹುಬ್ಬಳ್ಳಿ
ಲೇಖಕರು ಮತ್ತು ವಿಭಾಗೀಯ ಸಂಪಾದಕರು

ಕಾವ್ಯ ಸಂಪದ / ವಿಶ್ಲೇಷಣೆ

# ಊರಿಗೆ ಬಂದಾಗ: ಪ್ರಶ್ನೆ-ನಿರುತ್ತರಗಳ ನಡುವೆ

ಕಾವ್ಯದ ವಸ್ತು ಆಶಯಗಳಲ್ಲಿ, ಸಂವೇದನೆಗಳಲ್ಲಿ, ಪ್ರತಿಮೆ– ಪ್ರತೀಕ, ನಿರೂಪಣೆಯಲ್ಲಿ– ಹೀಗೆ ತಮ್ಮ ಕಾವ್ಯ –ಕಾರಣದಲ್ಲಿ ನಿರಂತರ ಪ್ರಯೋಗ ಮಾಡುತ್ತ ಬಂದಿರುವವರು ಕನ್ನಡದ ಮಹತ್ವ ಕವಿಗಳಲ್ಲಿ ಒಬ್ಬರಾದ ಡಾ ಕೆ ವಿ ತಿರುಮಲೇಶ್ ಅವರು. ಇದಕ್ಕೆ ಅವರ ಇತ್ತೀಚಿನ ಕವನ ಸಂಕಲನ 'ಅರಬ್ಬಿ'ಯಲ್ಲೂ ಸಾಕಷ್ಟು ನಿದರ್ಶನಗಳಿವೆ. ಸುಮಾರು ಎರಡು ನೂರಾ ಐವತ್ತು ಕವಿತೆಗಳುಳ್ಳ ಈ ಬೃಹತ್ ಸಂಕಲನದಲ್ಲಿ ಅವರ ಕಾವ್ಯದ, ಕಾಳಜಿಗಳ ವಿವಿಧ ಆಯಾಮಗಳು ನಮಗೆ ಸಿಗುತ್ತವೆ. 'ಊರಿಗೆ ಬಂದಾಗ' ಕವಿತೆಯನ್ನು ಈ ಕೃತಿಯಿಂದ ಆರಿಸಿಕೊಂಡಿದ್ದೇನೆ.

'ಊರಿಗೆ ಬಂದಾಗ' ಒಂದು ವಿಶಿಷ್ಟ ಕವಿತೆ. ತಾನು ಹುಟ್ಟಿ ಬೆಳೆದ ಊರಿಂದ ಹೊರಹೋಗಿ ಬದುಕನ್ನು ಕಟ್ಟಿಕೊಂಡ ಪ್ರತಿಯೊಬ್ಬ ವ್ಯಕ್ತಿ ಎದುರಿಸುವ ಅಥವಾ ಅನುಭವಿಸುವ ಸಂಗತಿಗಳನ್ನು ಕಟ್ಟಿಕೊಡುವ ಕವಿತೆ ಇದು. ಕವಿತೆಯ ಶೀರ್ಷಿಕೆ 'ಊರಿಗೆ ಬಂದಾಗ'ವನ್ನು ಗಮನಿಸುವ ಮೂಲಕ ನಮ್ಮ ಚರ್ಚೆಯನ್ನು ಆರಂಭಿಸಬಹುದು. ನಾವು ಸಾಮಾನ್ಯವಾಗಿ ಒಂದು ಊರಿನಿಂದ ಇನ್ನೊಂದಕ್ಕೆ 'ಹೋಗುವುದು' ಎನ್ನುತ್ತೇವೆ. ಅಲ್ಲಿ ಆದ ಸಂಗತಿಯನ್ನು ವಿವರಿಸಲು 'ಊರಿಗೆ ಹೋದಾಗ' ಎಂದು ಬಳಸುತ್ತೇವೆ. ಹಾಗಿರುವಾಗ ಇಲ್ಲಿ "ಬಂದಾಗ" ಎಂಬ ಬಳಕೆ ಏಕೆ? ಅಂದರೆ ಇದು ಊರಿನ ದೃಷ್ಟಿಕೋನದಿಂದ ಉಪಯೋಗಿಸಿದ ಶಬ್ದವೇ? ಹೊರಗೆ 'ಹೋದವನು' (ಮರಳಿ) 'ಬಂದಾಗ' ಎನ್ನುವುದೇ? ಹೀಗೆ ಯೋಚಿಸಿದಾಗ ಕೊಂಚ ತೆಳುವಾಗಿಯಾದರೂ ಇದು Parable of the prodigal son ಎಂಬ ಬೈಬಲ್ಲಿನ ಕತೆಯನ್ನು ನೆನಪಿಸಿತು. ಆ ಕತೆಯನ್ನು ಇಲ್ಲಿ ಊರಿಗೆ ಮರಳುವ ಮಟ್ಟಿಗೆ ಮಾತ್ರ ಸೀಮಿತಗೊಳಿಸಿಕೊಳ್ಳಬೇಕು.



ಹೀಗೆ ಊರಿಗೆ ಬಂದಾಗ ಕಾಣುವುದು, ಮರಳಿ ಅನುಭವಕ್ಕೆ ನಿಲುಕುವುದು ಏನು?

'ಅದೇ ಊರು ಅದೇ ಜನ ನನ್ನ ಜನ'

ಎಂದು ಆರಂಭವಾಗುತ್ತದೆ ಕವಿತೆ. 'ಅದೇ ಜನ' ಅವರು 'ನನ್ನವರು' ಎಂಬ ಪ್ರೀತಿ, ಅಭಿಮಾನವೂ ಇಲ್ಲಿ ದನಿಸಿದೆ.

'ಕೆಲವರಿಲ್ಲ ಕೆಲವರಿದ್ದಾರೆ' ಎಂದು ಊರಿನಲ್ಲಿ ಆದ ಸಾವು ನೋವನ್ನು ತಣ್ಣಗೆ ಹೇಳುವ ಕವಿತೆ 'ಹೊಸಬರೂ

ಗುರುತು ಹಿಡಿಯುತ್ತಾರೆ' ಎನ್ನುವ ಮೂಲಕ ಈ ಹೊರಗಿಂದ ಹೋದ ಊರ ಮನುಷ್ಯನನ್ನು ಊರು ಮತ್ತೆ ತನ್ನ ತೆಕ್ಕೆಗೆ ಸೆಳೆಯುವುದನ್ನು ಸೂಚಿಸುತ್ತಾರೆ.

'ಸಂಬಂಧಗಳು ಸುತ್ತುತ್ತವೆ ಬೇರು ಬಿಳಲು ಮೂಲಾಧಾರ'

ಇವನು ಇಂಥವನು, ಇವನು ಗೊತ್ತಲ್ವಾ ಇಂಥವರ ಮಗ, ಮೊಮ್ಮಗ, ಅಳಿಯ ಎಂದೆಲ್ಲ ಸಂಬಂಧಗಳು ಅನಾವರಣಗೊಳ್ಳುತ್ತವೆ ಅಲ್ಲವೇ? ಮುಂದಿನ ಸಾಲು ಇನ್ನೊಂದು ಆಯಾಮವನ್ನು ಜೋಡಿಸುತ್ತದೆ–

'ಇಲ್ಲದವರೂ ಇರುತ್ತಾರೆ ಇದ್ದವರ ನುಡಿಯಲ್ಲಿ'

ಇಲ್ಲದವರು ಅಂದರೆ ತೀರಿ ಹೋದವರು ಇದ್ದವರ/ ಉಳಿದವರ ಮಾತಿನ ಮೂಲಕ ಜೀವಂತವಾಗುವ ಚಿತ್ರ ಇಲ್ಲಿದೆ. ಇನ್ನೊಂದು ಆಯಾಮವನ್ನು ಕೂಡ ಇಲ್ಲಿ ಗಮನಿಸಬಹುದು. ಮೂಲಾಧಾರ ಎಂಬ ಹಿಂದಿನ ಸಾಲಿನ ಪದವನ್ನು ಜೋಡಿಸಿಕೊಂಡು,

ಮೂಲಾಧಾರ ಇಲ್ಲದವರೂ ಎಂದರೆ ಬದುಕಿನ ಆಧಾರವೇ ಇಲ್ಲದವರು ಕೂಡ ಉಳ್ಳವರ, ಸ್ಥಿತಿವಂತರ ನುಡಿಗಳಲ್ಲಿ ಇರುತ್ತಾರೆ. ಆ ಮೂಲಕ ಊರು, ಊರಿಗೆ ಬಂದವನಿಗೆ ಸಜೀವವಾಗುತ್ತದೆ.

ಊರು ತಲುಪಿದವರ ಸಾಮಾನ್ಯ ಅನುಭವ 'ಊರು ಹಾಗೇ ಇದೆ, ಅಂಥದೇನು ಬದಲಾಗಿಲ್ಲ' ಎನಿಸುವುದು. ಇದನ್ನೇ ಮುಂದೆ ಕಟ್ಟಿಕೊಡುತ್ತಾರೆ ತಿರುಮಲೇಶ್.

'ಎಲ್ಲ ಬದಲಾವಣೆಯಲ್ಲೂ ಏನೂ ಬದಲಾಗಿಲ್ಲ'
ಹಾಗಿದ್ದರೆ ಆಗಿಲ್ಲವೇ ಎಂದರೆ ಆಗಿದೆ.

ಎತ್ತಿನ ಗಾಡಿಗಳು ಮಾಯವಾಗಿ ಸ್ವಯಂ ಚಾಲಿತ ವಾಹನ ಬಂದಿದ್ದು..

ಮುಂದಿನ ಸಾಲು

'ಹುಲ್ಲುಛಾವಣಿ ಮನೆಗಳ ಬದಲು ತಾರಸಿ ಕಟ್ಟಡಗಳೆದ್ದಿವೆ'

ಹುಲ್ಲು ಛಾವಣಿ ಇದ್ದಾಗ *ಮನೆ* ಎನಿಸಿಕೊಂಡಿದ್ದು ತಾರಸಿ ಆದಾಗ *ಕಟ್ಟಡ" ಆಯಿತು! ಹೋಂ ಗೆ ಹೌಸ್ ಗೆ ಅಥವಾ ಬಿಲ್ಡಿಂಗ್ ಗೆ ಇರುವ ವ್ಯತ್ಯಾಸವನ್ನು ತುಂಬಾ ಸೂಕ್ಷ್ಮವಾಗಿ ದಾಟಿಸಿಬಿಡುತ್ತಾರೆ ತಿರುಮಲೇಶ್.

ವಿಸ್ತಾರವಾದ ಅಡ್ಕಗಳು ಅಲ್ಲಿ ಮೇಯುವ ದನಗಳು

ಈಗ ಕೇವಲ ನೆನಪು.

'ನೆನಪಲ್ಲಷ್ಟೇ ಮತ್ತೆ ಮತ್ತೆ ಆ ಮೆತ್ತನೆ ನೆಯ್ಮಳಿಯ ಮೇಲೆ ಹೊರಳಬಲ್ಲೆ ನಾನು'



ಅಡ್ಕ ವಿಶಾಲವಾದ ಗೋಮಾಳ. ಉತ್ತರ ಕನ್ನಡದಲ್ಲಿ ಬೇಣ/ ಬ್ಯಾಣ ಎನ್ನುತ್ತೇವೆ. ಮಳೆಗಾಲದಲ್ಲಿ ಕರಡ ಎಂದು ಕರೆಯಲ್ಪಡುವ ಹುಲ್ಲು ಇಲ್ಲಿ ಬೆಳೆಯುತ್ತದೆ. ಹುಲ್ಲು ತುಸುವೇ ಚಿಗುರಿದಾಗಿನ ದೃಶ್ಯ ನಯನ ಮನೋಹರ. ಇಡೀ ಬೇಣಕ್ಕೆ ಹಸಿರಿನ ಹೊದಿಕೆ ಹಾಕಿದಂತಿರುತ್ತದೆ. ಆ ನಯವಾದ ಹುಲ್ಲ ಹಾಸಿಗೆಯ ಮೇಲೆ ನಾನು ನೆನಪಿನಲ್ಲಿ ಮಾತ್ರ ಹೊರಳ ಬಲ್ಲೆ ಎನ್ನುವ ಮಾತಿನ ಮೂಲಕ ಹಿಂದಿನ ಕಾಲಕ್ಕೆ –ಬಾಲ್ಯ, ಯೌವನದ ದಿನಗಳಿಗೆ ಎನ್ನಲೂಬಹುದು– ಒಯ್ಯುತ್ತಾರೆ ತಿರುಮಲೇಶ್.

ಮುಂದಿನ ಸಾಲಿನಲ್ಲಿ ಹೇಳುತ್ತಾರೆ

'ಈಗ ಮುಳಿಯೇ ಇಲ್ಲ'

ಇಂದಿನ ಹುಲ್ಲು ಇಲ್ಲದ, ಅಡ್ಕಗಳು,ಗೋಮಾಳಗಳು ಕಾಣೆಯಾದ,ಈ ಎಲ್ಲವನ್ನೂ ರಿಯಲ್ ಎಸ್ಟೇಟ್ಗಳು, ಕಾರ್ಖಾನೆಗಳು, ಗಣಿಗಾರಿಕೆ ನುಂಗುತ್ತಿರುವ ದಾರುಣ ಪರಿಸ್ಥಿತಿಯನ್ನು ಹೇಳದೆಯೇ ಹೇಳುತ್ತಾರೆ.

ಹೀಗೆ ಒಟ್ಟಾರೆ ಊರಿನ ಭೌಗೋಳಿಕ ಸ್ಥಿತಿಯನ್ನು ಹೇಳಿದ ಕವಿತೆ ಮುಂದೆ ಮನುಷ್ಯ ಮನುಷ್ಯರ ನಡುವಿನ

ಸಂಬಂಧದ ಮಾತನಾಡುತ್ತದೆ. ಪರಸ್ಪರರ ನಂಟನ್ನು ಮತ್ತೆ ನವೀಕರಿಸಿಕೊಳ್ಳುವ ರೀತಿಯನ್ನು ಕಟ್ಟಿಕೊಡುತ್ತದೆ. ಈ ಸಾಲುಗಳನ್ನು ನೋಡಿ:

ಹೊಲಿಸೋದಕ್ಕೇನು ಇರದಿದ್ದರೂ
ದರ್ಜಿಯ ಬಳಿ ಕೂತು
ತಲೆಗೂದಲು ಬೆಳೆಯದಿದ್ದರೂ
ಕ್ಷೌರಿಕನ ಕಂಡು ಮಾತಾಡಿಸಿ
ಹಸಿವೆಯೇನೂ ಆಗಿರದಿದ್ದರೂ
ಹೋಟೆಲಿನ ಗೋಳಿಬಜೆ ತಿಂದು

ಈ ಸಾಲುಗಳ ಆಪ್ತತೆ, ಆರ್ದ್ರತೆ ಅನುಭವವೇದ್ಯ.

ವ್ಯಕ್ತಿಯಾಗಿ ತಿರುಮಲೇಶ್ ದೇವರ ಅಸ್ತಿತ್ವವನ್ನು ಅಷ್ಟಾಗಿ ನಂಬಿದವರಲ್ಲ. ಇದನ್ನು ಬೇರೆ ಬೇರೆ ರೀತಿಗಳಲ್ಲಿ ಬೇರೆ ಬೇರೆ ಕಡೆಯಲ್ಲಿ ಅವರು ದಾಖಲಿಸಿದ್ದಾರೆ ಕೂಡ. ಆದರೆ ಊರ ದೇವಸ್ಥಾನಕ್ಕೆ ಹೋಗುತ್ತಾರೆ ಕವಿ, ಕವಿತೆಯಲ್ಲಿ. ಊರಿನ ದೇಗುಲ ಬರಿಯ ದೇವ-ಸ್ಥಾನವಲ್ಲ. ಅದರೊಂದಿಗೆ ವ್ಯಕ್ತಿಗೆ ಇರುವುದು ಕರುಳಬಳ್ಳಿಯ ಸಂಬಂಧ. ನಂಬಿಕೆಯ ಪ್ರಶ್ನೆ ಅಲ್ಲಿ ವರ್ಜ್ಯ.

ಶರ್ಟಿನ ಹಾಗೆ ನನ್ನ ನಂಬಿಕೆಗಳನ್ನೂ ತೆಗೆದಿರಿಸಿದೆ

ಊರ ದೇವಳಕ್ಕೆ ಹೋಗಿ ಗುಂಡಕ್ಕೆ ತಲೆಬಾಗಿದೆ

ದೇವರಿಗೂ ಪೂಜಾರಿಗೂ ಸಲ್ಲಿಸಬೇಕಾದ್ದು ಸಲ್ಲಿಸಿದೆ.

ದಕ್ಷಿಣಕನ್ನಡದ, ಕೇರಳದ ಹೆಚ್ಚಿನ ದೇವಸ್ಥಾನಗಳಲ್ಲಿ ಪುರುಷರು ಶರ್ಟ್ ಹಾಕಿಕೊಂಡು ದೇವಸ್ಥಾನಕ್ಕೆ ಹೋಗುವಂತಿಲ್ಲ.

ಹಾಗಾಗಿ ಶರ್ಟನ್ನು ತೆಗೆದಿಟ್ಟು, ಅದರಂತೆಯೇ ನನ್ನ ನಂಬಿಕೆಯನ್ನು ಕೂಡ ತೆಗೆದಿರಿಸಿದೆ ಎನ್ನುತ್ತಾರೆ ಕವಿ.

*ದೇವರು* ಎಂಬ ದೊಡ್ಡ ಗ್ರಂಥವನ್ನೇ ಬರೆದು ದೇವರಿಲ್ಲವೆಂದು ಪ್ರತಿಪಾದಿಸಿದ ಹಿರಿಯ ಲೇಖಕ ಪ್ರೊ.ಎ ಎನ್ ಮೂರ್ತಿರಾಯರು ತಮ್ಮ 'ಅಕ್ಕಿಹೆಬ್ಬಾಳು' ಪ್ರಬಂಧದಲ್ಲಿ ಬರೆದಿದ್ದು ನೆನಪಾಯಿತು. ತಮ್ಮೂರಿನ ದೇವಳದ ಗರ್ಭಗುಡಿಯೊಳಗಿರುವ ದೇವರು 'ನರಸಿಂಹ'

'ದೇವರನ್ನೇ ನಂಬದ ತಮಗೂ ಎಷ್ಟು ಪ್ರಿಯನೆಂದು ಯಾರು ತಾನೆ ಬಲ್ಲರು?! ಎನ್ನುತ್ತಾರೆ ಅವರು. ಲಂಕೇಶ್ ಕೂಡ ಊರಿಂದ ಬಂದ ನಾಲ್ಕಾರು ತರುಣರ ಜೊತೆ ಮಾತನಾಡುತ್ತಿದ್ದಾಗ, ಮಾತಿನ ಮಧ್ಯೆ ಅವರು ಊರಿನ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡುತ್ತಿದ್ದಾರೆ ಎಂದುದನ್ನು ಕೇಳಿ ತಾವಾಗಿ ಒಂದಿಷ್ಟು ಹಣವನ್ನು ಕೊಟ್ಟು ಕಳಿಸಿದ್ದರು. 'ಲಂಕೇಶ್ ಪತ್ರಿಕೆ'ಯಲ್ಲಿ ಈ ಬಗ್ಗೆ ಟಿಪ್ಪಣಿ ಮಾಡಿದ್ದನ್ನು ಓದಿದ್ದೆ. ದೇವರನ್ನು ನಂಬುವ, ಬಿಡುವ ತಾತ್ವಿಕತೆ ಬೇರೆ; ಊರ ದೇವಾಲಯದ ಜೊತೆಗಿನ ಒಡಲ ಸಂಬಂಧ ಬೇರೆ ಎಂಬುದನ್ನು ತಿರುಮಲೇಶ್ ಕೂಡ ಇಲ್ಲಿ ಹೇಳುತ್ತಿದ್ದಾರೆಯೇ?

'ಕೊಳದ ಬದಿ ವಿಶ್ರಮಿಸಿ ಅದರ ತಿಳಿ ನೀರಲ್ಲಿ
ಮೋಡ ಹಾಯುವುದು ನೋಡಿದೆ ತಂಗಾಳಿಯೆಬ್ಬಿಸಿದ
ಕಿರುತೆರೆಗಳು ತಮ್ಮಷ್ಟಕ್ಕೇ ಸಾಗುತ್ತವೆ'

ಒಂದು ಸಹಜವಾದ ಚಿತ್ರವನ್ನು ಕೊಡುತ್ತಾ ಅಲ್ಲಿಯೂ ಒಂದು ಒಳನೋಟವನ್ನು ನೀಡುತ್ತಾರೆ ಇಲ್ಲಿ- ಮೋಡಗಳು ಸರಿಯುತ್ತವೆ... ಅವುಗಳ ಬಿಂಬವನ್ನು ನಾವು ಕಾಣುತ್ತೇವೆ, ಗ್ರಹಿಸುತ್ತೇವೆ.

ತಂಗಾಳಿಯಿಂದ ಉಂಟಾದ ಕಿರುತೆರೆಗಳು ತಮ್ಮಷ್ಟಕ್ಕೆ, ನಮ್ಮ ಹಂಗಿಲ್ಲದೆ ಸಾಗುತ್ತವೆ ಸರಿಯುತ್ತವೆ

ಹೀಗೆ ಕಾಲ ಸರಿದಾಗ ಆಗುವ ಪಲ್ಲಟ ಎಂಥದ್ದು? ಮುಂದಿನ ಸಾಲುಗಳಲ್ಲಿ-



ಪೂರ್ತಿ ಹಣ್ಣಾದ
ವೃದ್ಧೆಯೊಬ್ಬಳು ಅವಳು

ನನ್ನ ಅಮ್ಮನಂತೆಯೆ
ಇದ್ದಳು- ಮೊದಲು
ಹಸಿ ಸೆಗಣಿ ಹೆಕ್ಕಿಬೆರಣಿ
ತಟ್ಟುತ್ತಿದ್ದವಳು ಈಗ
ಕೈಲಾಗುತ್ತಿಲ್ಲ ಎಂದಳು

ಈಗವಳ ಮಗಳು
ಅದೇ ಕೆಲಸ ಮಾಡುವಳು
ವರ್ಷಗಳ
ಹಿಂದೆ ಅವಳೂ
ಮೃಗನಯನೆಯಾಗಿದ್ದಳು
ಈಗ ಅವಳ ಕಣ್ಣುಗಳ
ಸುತ್ತ ಕಪ್ಪಾಗಿದೆ
ಎಷ್ಟೆಲ್ಲವನ್ನು
ಅಡಕಗೊಳಿಸಿದ
ಸಾಲುಗಳು ಇವು!

ಪೂರ್ತಿ ಹಣ್ಣು ಮುದುಕಿ ಅಮ್ಮನಂತೆ ಕಾಣುವುದು, ಅವಳು ತನ್ನ ಮಾಮೂಲಿ ದಿನಚರಿಯಲ್ಲಿ ಕಳೆದುಹೋಗುತ್ತಾ ಈಗ ಅಶಕ್ತಳಾಗಿರುವುದು, ಅವಳ ಮಗಳ ಮೂಲಕ ಅದೇ ಜೀವನ ಚಕ್ರ ಮುಂದುವರಿದಿರುವುದು

ಜೊತೆಗೆ ಆಗ ಮೃಗನಯನೆಯಾಗಿದ್ದ (ಕವಿಯಲ್ಲಿ ಒಂದು ಸಣ್ಣ ಕ್ರಷ್‌ನ್ನು ಉಂಟುಮಾಡಿರಬಹುದಾದ) ಆ

ಹೆಣ್ಣು ಈಗ ಕಾಲನ ಆಘಾತದಲ್ಲಿ ಕಳೆಗುಂದಿರುವುದು...

ಕವಿತೆ ವಾಸ್ತವಕ್ಕೆ ಬರುತ್ತದೆ.ಎಲ್ಲರೂ ಕೇಳುತ್ತಾರೆ ಮಡದಿ ಮಕ್ಕಳ ಬಗ್ಗೆ,ಸಂಬಳ ಮನೆ ,ನಿವೃತ್ತಿಯ ಬಗ್ಗೆ. ಜೊತೆಗೆ ಕಕ್ಕುಲಾತಿಯಿಂದ ಹುಟ್ಟಿದ ಪ್ರಶ್ನೆ–

'ಇಲ್ಲೇ ಇರುತ್ತೀಯಾ ವಾಪಸು ಹೋಗುತ್ತೀಯಾ ಮತ್ತೆ ಬರುತ್ತೀಯಾ'

ಈ ಪ್ರಶ್ನೆಗಳಲ್ಲಿ ಇಲ್ಲಿಯೇ ಇರು, ಇದ್ದುಬಿಡು ಎಂಬ ಹೋಗಲೇಬೇಕಿದ್ದರೆ ಮತ್ತೆ ಬಾ ಎಂಬ ಧ್ವನಿಯನ್ನು ಗಮನಿಸಿ.

ಕವಿಗೆ ಗಂಟಲು ಕಟ್ಟುತ್ತದೆ. ಕೇಳುತ್ತಾರೆ–

"ನನ್ನ ಭಾವನಾವಲಯದ ಜೀವಿಗಳೆ



ಏನು ಉತ್ತರಿಸಲಿ"

ಈ ಎರಡು ಸಾಲುಗಳನ್ನು ಜೋಡಿಸಿರುವ ಕ್ರಮವನ್ನು ಗಮನಿಸಿ. ನಡುವಿನ ಅಂತರವನ್ನು, ಆ ಮೂಲಕ ಕವಿ ನೀಡುವ pauseಅನ್ನು ಗಮನಿಸಬೇಕು.

"ಎಲ್ಲಾ ಗೆದ್ದು ಬರುವೆನೆಂದು ನಿಷ್ಕಮಿಸಿದವನು ನಾನು

ಪ್ರತಿಸಲ ಬರುವಾಗಲೂ ಬರಿಗೈಲಿ ಬರುತಿದ್ದೇನಲ್ಲ"

ಒಂದು ಮಟ್ಟಕ್ಕೆ ಬದುಕನ್ನು ಕಟ್ಟಿಕೊಂಡ ಹಲವರ ಎದೆಗುದಿ ಇದು. ಊರಿಂದ ಬರುವಾಗ ದೊಡ್ಡ ದೊಡ್ಡ ಕನಸುಗಳನ್ನು ಹೊತ್ತು ಬರುತ್ತೇವೆ. ಅದರಲ್ಲಿ ಬಹಳಷ್ಟು ದುಡಿದು, ಏನೋ ದೊಡ್ಡದನ್ನು ಸಾಧಿಸಿ ಊರಿಗೂ *ಏನಾದರೂ* ಮಾಡುವ ಆಶಯ, ಸಂಕಲ್ಪ ಕೂಡ ಇರುತ್ತದೆ. ಆದರೆ ಹೆಚ್ಚಿನವರಿಗೆ ಅದು ಸಾಧ್ಯವಾಗುವುದಿಲ್ಲ. ಹಾಗಿದ್ದೂ ಊರು ತೋರಿಸುವ, ನೆಪ ಬೇಡದ ಅಕ್ಕರೆಗೆ ಏನೆಂದು ಉತ್ತರಿಸುವುದು?

ಈಗ ಕವಿತೆಯ ಕೊನೆಯ ಸಾಲುಗಳು–

"ಕ್ಷಮಿಸಿದಂತೆಯೆ ನನ್ನ ಉತ್ತರಗಳ

ಕ್ಷಮಿಸಲಾರಿರ ನನ್ನ ನಿರುತ್ತರಗಳ?"

ಉತ್ತರಿಸುವುದು ಕಷ್ಟ. ಹಾಗೂ ಉತ್ತರಿಸಿದಾಗ ಊರಿನ ಜನ ಅದನ್ನು ಅರ್ಥ ಮಾಡಿಕೊಂಡಿದ್ದಾರೆ, ಕ್ಷಮಿಸಿದ್ದಾರೆ.


ಆದರೆ ಮಾತು ಹೇಳಲು ಸಾಧ್ಯವಾಗುವುದು ಕೆಲವನ್ನು ಮಾತ್ರ. ಮಾತಿನಾಚೆಗಿನ 'ನಿರುತ್ತರಗಳನ್ನು ನೀವು ಕ್ಷಮಿಸಲಾರಿರ?' ಎಂದು ಕವಿತೆಯನ್ನು ಮುಕ್ತಾಯಗೊಳಿಸುತ್ತಾರೆ ಕವಿ. ದಟ್ಟವಾದ ವಿಷಣ್ಣತೆಯಲ್ಲಿ ನಮ್ಮನ್ನು ಅದ್ದುವ ಮಾತುಗಳಿವು.

ಬುದ್ಧಿ ಭಾವಗಳು ಪರಸ್ಪರ ಕೈ ಕೈ ಹಿಡಿದು ನಡೆಯುವ ಕವಿತೆ ತಿರುಮಲೇಶರದು.

ಎಷ್ಟೋ ಕಡೆ ಇಲ್ಲಿ ಭಾವಕ್ಕಿಂತ ಬುದ್ಧಿಯ ಕೈ ಮೇಲಾಯಿತೇನೋ ಅನ್ನಿಸುವುದುಂಟು.

ಊರಿನೊಡನೆಯ ಅನುಬಂಧದ ವಿವಿಧ ಮುಖಗಳನ್ನು, ಸಂದರ್ಭಗಳನ್ನು ಆಪ್ತವಾಗಿ, ಆರ್ದ್ರವಾಗಿ ಕಟ್ಟಿಕೊಡುವ ಈ ಕವಿತೆಯಲ್ಲಿ ನಿದಾನವಾಗಿ ಏಳುತ್ತ ಹೋಗುವ ವಿಷಾದದ ಅಲೆ ಕೊನೆಯಲ್ಲಿ ಅತ್ಯಂತ ದಟ್ಟವಾಗಿ ಆವರಿಸುವುದು, ಅನುರಣಿಸುವುದು, ಕವಿತೆಯನ್ನು ಸಾರ್ಥಕವಾಗಿಸಿದೆ; ಸ್ಮರಣೀಯವಾಗಿಸಿದೆ.

ಊರು ಬಿಟ್ಟು ಬದುಕುತ್ತಿರುವವರ ತಳಮಳವನ್ನು, *ನಿರುತ್ತರಗಳನ್ನು* ಅತ್ಯಂತ ಸಮರ್ಥವಾಗಿ ಕಟ್ಟಿಕೊಟ್ಟಿದ್ದಕ್ಕಾಗಿ ತಿರುಮಲೇಶರಿಗೆ ಧನ್ಯವಾದಗಳು.



**ಡಾ ಅಣ್ಣಯ್ಯ ಕುಲಾಲ್ ಉಳ್ತೂರು**
ವಿಭಾಗೀಯ ಸಂಪಾದಕರು


ಕೃತಿ ಪರಿಚಯ


# ಕನ್ನಡ ವೈದ್ಯ ಬರಹಗಾರರ ನಾಲ್ಕನೇ ಸಮ್ಮೇಳನದಲ್ಲಿ


## ಬಿಡುಗಡೆಯಾದ ಕೃತಿಗಳ ಮಾಹಿತಿ

### ಆರೋಗ್ಯ ಸುಧೆ

**ಡಾ. ವಿನಯ ಶ್ರೀನಿವಾಸ**
ಗೀತಾಂಜಲಿ ಪುಸ್ತಕ ಪ್ರಕಾಶನ
ಬೆಲೆ: 250
9449886390




### ಅಮ್ಮನ ಚಾದರದ ಕತೆ
ಮತ್ತು ಇತರ ಪ್ರಬಂಧಗಳು


**ಡಾ|| ಕೆ. ಎಸ್. ಶುಭ್ರತಾ**
ವಿಕ್ರಂ ಪ್ರಕಾಶನ ಬೆಂಗಳೂರು
ಬೆಲೆ: 150 ರೂ
9740994008

### ಕಣ್ಣು ಬೆರಗು ಬವಣೆ

**ಡಾ. ಶ್ರೀ ಲಕ್ಷ್ಮೀ ಶ್ರೀನಿವಾಸ್**
ಸ್ನೇಹ ಬುಕ್ ಹೌಸ್
ಬೆಂಗಳೂರು
984514062

### ಮನೋ ದಿಗಂತ

**ಡಾ. ಕೆ.ಆರ್.ಶ್ರೀಧರ್**
ಸ್ನೇಹ ಪ್ರಿಂಟರ್ಸ್ ಬೆಂಗಳೂರು
9845062549




## ಸಮಗ್ರ ಆರೋಗ್ಯಕ್ಕೆ ಸಮೃದ್ಧ ವೈದ್ಯ ಸಾಹಿತ್ಯ

**ಸಂಪಾದಕರು: ಡಾ.ಸಿ.ಆರ್.ಸಿ ಚಂದ್ರಶೇಖರ್**

**ಡಾ. ನಾ ಸೋಮೇಶ್ವರ**

ವಿಕ್ರಂ ಪ್ರಕಾಶನ ಬೆಂಗಳೂರು

9740994008







## ಮೌಢ್ಯ ಮತ್ತು ಟೆಲಿವಿಷನ್

**ಡಾ. ನಾ ಸೋಮೇಶ್ವರ**

ವಿಕ್ರಂ ಪ್ರಕಾಶನ ಬೆಂಗಳೂರು

9740994008


## ಮಗಳಂಥ ಕವನಗಳು


**ಡಾ.ರವಿ ರಾಜೇಶ್ವರ್**

ಸಂಸ್ಕೃತಿ ಬುಕ್‌ಏಜೆನ್ಸಿಸ್

ಬೆಲೆ:152 ರೂ

9945966979





## ಕಂಡದ್ದು ಕಡಲು

**ಡಾ ಕೆ ಎಸ್ ಪವಿತ್ರ**

ಶುಭದ ಎಂಟರ್ ಪ್ರೈಸಸ್

ಬೆಲೆ 230 ರೂ

984506259




## ಕಣ್ಣಿನಲ್ಲಿ ಕಂಡ ಮೃತ್ಯು ಬಿಂಬ ಮತ್ತು ಇತರ ವೈದ್ಯಕೀಯ ಲೇಖನಗಳು

**ಡಾ ಎಚ್ ಎಸ್ ಮೋಹನ್**

ಬೆಲೆ 225 ರೂ

ಪ್ರಿಸಂ ಬುಕ್ಸ್ ಪ್ರೈಲಿ, ಬೆಂಗಳೂರು



ಅನಿವಾಸಿ ಲೋಕ

# ಕ್ಷ-ಕಿರಣ ವಿಭಾಗ ಮತ್ತು ಭಾರತ.

**ಡಾ ರಾಜಶ್ರೀ ಪಾಟೀಲ**
ರೇಡಿಯೋಲಾಜಿಸ್ಟ್
ಲೈಸಿಸ್ಟರ್, ಯು ಕೆ



**ಡಾ ಶಿವಶಂಕರ ಮೇಟಿ**
ವಿಭಾಗೀಯ ಸಂಪಾದಕರು


ಕ್ಷ–ಕಿರಣ ವಿಭಾಗದ ಇತಿಹಾಸ ಅತೀ ಹಳೆಯದಾದದ್ದೇನಲ್ಲ , ಇದರ ಆರಂಭವಾದದ್ದು ವಿಲ್ ಹೆಲ್ಮ್ ರಾಂಟೇಜೆನ್ 1895 ರಲ್ಲಿ ಮೊದಲ ಬಾರಿಗೆ ಕ್ಷ ಕಿರಣಗಳನ್ನ ಆವಿಷ್ಕಾರ ಮಾಡಿದಾಗಿನಿಂದ. ಆದರೆ ಈ ವಿಭಾಗದಲ್ಲಿ ಅತೀ ಹೆಚ್ಚು ಬೆಳವಣಿಗೆ ಕಂಡುಬದ್ದದ್ದು 1970 ರಿಂದ 1980 ದಶಕದಲ್ಲಿ , ಆದ್ದರಿಂದ ಇದನ್ನ ಕ್ಷ –ಕಿರಣ ವಿಭಾಗದ ಸುವರ್ಣ ದಶಕವೆಂದು ಕರೆಯಲಾಗುತ್ತದೆ .

ಕ್ಷ–ಕಿರಣ ತಜ್ಞರು ಅಂದರೆ ರೇಡಿಯೊಲೊಜಿಸ್ಟ್ ಒಬ್ಬ ರೋಗಿಯ ಚೀಕಿತ್ಸೆ ಅದರಲ್ಲೂ ರೋಗವನ್ನ ಪತ್ತೆ ಹಚ್ಚುವ ಮತ್ತು ಚಿಕಿತ್ಸೆಯ ಮೇಲೆ ನಿಗಾ ಇಡುವ ಕೆಲಸದಲ್ಲಿ ಅತೀ ಮುಖ್ಯ ಪಾತ್ರ ವಹಿಸುತ್ತಾರೆ. ಬಹುಶಿಸ್ತೀಯ (multidisciplinary)ತಂಡಗಳ ಸಭೆಗಳಲ್ಲಿ ರೋಗಿಯ ಚೀಕಿತ್ಸೆ ನಿರ್ಧರಿಸುವ ನಿಟ್ಟಿನಲ್ಲಿ ಇವರ ಪಾತ್ರ ಬಹುದೊಡ್ಡದು . ಇದನ್ನ ಮೀರಿ ವೈದ್ಯಕೀಯ ಲೋಕದ ಸಂಶೋಧನೆ ಯಶಸ್ಸಿಗೆ ಇವರ ಪಾತ್ರ ಮಹತ್ವದ್ದಾಗಿದೆ . ಇತ್ತೀಚಿನ ದಿನಗಳಲ್ಲಿ ಕೃತಕ ಬುದ್ಧಿಮತ್ತೆ ಯನ್ನ ಅಳವಡಿಸಿ ಕ್ಷ–ಕಿರಣ ತಜ್ಞರ ಕೆಲಸದೊತ್ತಡವನ್ನ ಹಗುರ ಮಾಡುವ ಮತ್ತು ಪರಿಣಾಮಕಾರಿಯಾಗಿಸುವ ನಿಟ್ಟಿನಲ್ಲಿ ಅತೀ ಹೆಚ್ಚು ಸಂಶೋಧನೆಗಳು ನಡೆಯುತ್ತಿವೆ.

ಇತಿಹಾಸದ ಪ್ರಕಾರ ಕ್ಷ –ಕಿರಣ ವಿಭಾಗ ತಾಂತ್ರಿಕತೆಯ ಮೇಲೆ ಅತೀ ಹೆಚ್ಚು ಅವಲಂಬಿತವಾದ ವಿಭಾಗ. ಇದರಿಂದಾಗಿ ಸತತ ಬೆಳವಣಿಗೆ ಅವಶ್ಯ ಮತ್ತು ಅನಿವಾರ್ಯ. ಇದರ ಅಭಿವೃದ್ಧಿ ಇಡೀ ವೈದ್ಯಲೋಕದ ಅಭಿವೃದ್ಧಿ ಎಂದರೆ ಅತಿಶಯೋಕ್ತಿ ಏನಲ್ಲ.

ಭಾರತ ದೇಶ ಮತ್ತು ಕ್ಷ –ಕಿರಣ ವಿಭಾಗಳೆಂಬ ಎರಡು ದೈತ್ಯ ಅಧ್ಯಾಯಗಳ ಬಗ್ಗೆ ಬರೆಯಲು ನಾನು ಅರ್ಹಳೆ ಎಂದು ಪ್ರಶ್ನೆ ಬಂದಾಗ, ಭಾರತದಲ್ಲಿ ತರಬೇತಿ ಪಡೆದು, ಭಾರತದಾಚೆ ಕೆಲಸ ಮಾಡುತ್ತಿರುವ ಕ್ಷ ಕಿರಣ ತಜ್ಞೆ ಎಂಬುದು ಸಾಲದೇ ಎಂದು ಸಮಜಾಯಿಸಿ ಕೊಟ್ಟು ಶುರುಮಾಡಿದೆ. ಸಂಶೋಧನೆ ಮತ್ತು ಅನುಭವದಿಂದ ಗ್ರಹಿಸಿದ ಜ್ಞಾನದೊಂದಿಗೆ ನನ್ನ ಅನಿಸಿಕೆಗಳನ್ನ ಸೇರಿಸಿ ನಿಮ್ಮ ಮುಂದೆ ಮಂಡಿಸುತ್ತಿರುವೆ.







ಪರದೇಶಿಯರ ಆಳ್ವಿಕೆಯಲ್ಲಿ ನಲುಗಿ ಬರೀ 77 ವರ್ಷಗಳ ಹಿಂದಷ್ಟೇ ಸ್ವಾತಂತ್ರ್ಯ ಪಡೆದ ಅತೀ ದೊಡ್ಡ ಪ್ರಜಾಪ್ರಭುತ್ವ ದೇಶವಾದ ಭಾರತದ ಅಭಿವೃದ್ಧಿ ಅದರಲ್ಲೂ ಇತ್ತೀಚಿನ ದಿನಗಳಲ್ಲಿ ತಾಂತ್ರಿಕ ಮತ್ತು ವಿಜ್ಞಾನ ಲೋಕದಲ್ಲಿನ ಯಶಸ್ಸು ವಿಶ್ವವೇ ಹುಬ್ಬೇರಿಸುವಂತದು. ಆದರೆ ಆರೋಗ್ಯ ವಿಭಾಗಲ್ಲಿ, ವಿಶ್ವದ, ಅದರಲ್ಲೂ ಪಾಶ್ಚಿಮಾತ್ಯ ದೇಶಗಳಿಗೆ ಹೋಲಿಸಿದರೆ ಇನ್ನೂ ಸಾಕಷ್ಟು ಬೆಳವಣಿಗೆಗಳ ಅವಶ್ಯಕತೆ ಸ್ಪಷ್ಟವಾಗುತ್ತದೆ . ಭಾರತದಲ್ಲಿ ಆರೋಗ್ಯ ಮತ್ತು ಚಿಕಿತ್ಸಾ ಸೌಲಭ್ಯಗಳನ್ನ ಸರ್ಕಾರ ಸ್ವಲ್ಪ ಮಟ್ಟಿಗೆ ಒದಗಿಸಿದರೆ ಖಾಸಗಿ ಸಂಸ್ಥೆಗಳು ಶೇಕಡಾ 70 ರಷ್ಟು ಸೌಲಭ್ಯಗಳನ್ನ ಒದಗಿಸುತ್ತಿವೆ . ಇದರಿಂದಾಗಿ ಸೌಲಭ್ಯಗಳು ಏಕರೂಪವಾಗಿಲ್ಲ.

ಯಾವುದೇ ದೇಶ ತನ್ನ ಪ್ರಜೆಗಳ ಹಿತಾಸಕ್ತಿ ವಹಿಸುವದಾದರೆ ಆರೋಗ್ಯ ಇಲಾಖೆಯ ಅಭಿವೃದ್ಧಿ ಅದರಲ್ಲೂ ಕ್ಷ –ಕಿರಣ ವಿಭಾಗದ ಬೆಳವಣಿಗೆಗೆ ಆದ್ಯತೆ ಕೊಡುವುದು ಅವಶ್ಯವಾಗಿದೆ .


ಇತ್ತೀಚಿನ ದಿನಗಳಲ್ಲಿ ಅತೀ ವೇಗದಲ್ಲಿ ಬೆಳವಣಿಯತ್ತ ದಾಪುಗಾಲು ಹಾಕುತ್ತಿರುವ ಭಾರತಕ್ಕೆ, ಪಾಶ್ಚಿಮಾತ್ಯ ದೇಶಗಳಿಗೆ ಹೋಲಿಸಿದರೆ ಬರುವ ದಶಕ ಭವಿಷ್ಯದ ಸವಾಲುಗಳನ್ನ ಎದುರಿಸುವಲ್ಲಿ ಮತ್ತು ಇರುವ ಅವಕಾಶಗಳನ್ನ ಉಪಯೋಗಿಸುವಲ್ಲಿ ಬಹಳ ಮುಖ್ಯವಾದದ್ದು ಮತ್ತು ಕುತೂಹಲವನ್ನ ಮೂಡಿಸುವಂತದು.

ಭಾರತದ ಜನಸಂಖ್ಯೆಗೆ ಹೋಲಿಸಿದರೆ ಕ್ಷ–ಕಿರಣ ತಜ್ಞರ ಸಂಖ್ಯೆಯ ಅಸಮತೋಲನ ಸ್ಪಷ್ಟವಾಗಿ ಕಂಡುಬರುತ್ತದೆ, ಇತ್ತೀಚಿನ ಅಧ್ಯಯನದ ಪ್ರಕಾರ ಭಾರತದಲ್ಲಿ 1:100,000 (ಯುನೈಟೆಡ್ ಕಿಂಗ್ಡಮ್ 8.5 : 100,000) ಇದರಿಂದಾಗಿ ಕಾಯಿಲೆ ನಿವಾರಣೆ ಕೇಂದ್ರಿತವಾದ ಸೇವೆ ಒದಗಿಸುವಲ್ಲಿ ಪ್ರಾಮುಖ್ಯತೆ ಹೆಚ್ಚಾಗಿದೆ. ಅದರಲ್ಲೂ ಒದಗಿಸುವ ಸೇವೆ, ರೋಗಿಯ ಹಣಕಾಸು ಪರಿಸ್ಥಿತಿಯ ಮೇಲೆ ಅವಲಂಬಿತವಾಗಿರುವದರಿಂದ , ಸೇವೆ ಅತ್ಯುತ್ತಮವಾದದಕ್ಕಿಂತ ಅವಶ್ಯಕತೆಯನ್ನ ಪೂರೈಸುವದರ ಕಡೆಗೆ ಮಹತ್ವ ಜಾಸ್ತಿ. ಆದರೆ ಬದಲಾಗುತ್ತಿರುವ ಭಾರತದ ಹಣಕಾಸು ಪರಸ್ಥಿತಿ ಆಶಾದಾಯಕವಾಗಿದೆ.

ಭವಿಷ್ಯದ ಕಡೆಗೆ ಗಮನ ಹರಿಸಿದಾಗ ಶೈಕ್ಷಣಿಕ ಕ್ಷ–ಕಿರಣ ವಿಭಾಗದ ಬೆಳವಣಿಗೆ ಅತೀ ಅವಶ್ಯಕವಾಗಿದ್ದು. ಅದರಲ್ಲೂ ಕಿರಿಯ ವೈದ್ಯರ ತರಬೇತಿ ಬಹುಮುಖ್ಯವಾದದ್ದು. ಆದರೆ ಸೇವೆ ಕೇಂದ್ರೀಕೃತವಾಗಿಲ್ಲದ್ದರಿಂದ ಮತ್ತೂ ಸೌಲಭ್ಯಗಳ ಅಭಾವದಿಂದ ತರಬೇತಿಯ ಗುಣಮಟ್ಟದಲ್ಲಿ ಏರಿಳಿತ ಸಾಮಾನ್ಯವಾಗಿದೆ. ಅದರಲ್ಲೂ ವಿಶಾಲ ಜ್ಞಾನಾಧಾರಿತ ತರಬೇತಿ ಸಿಗುವದು ಕಠಿಣವಾಗಿದೆ . ತರಬೇತಿಯ ಜೊತೆಗೆ ಪರೀಕ್ಷಾ ವಿಧಾನದ ಬದಲಾವಣೆ ಅತೀ ಅವಶ್ಯವಾಗಿದೆ. ಪಾಶ್ಚಿಮಾತ್ಯ ದೇಶಗಳು ಅವಶ್ಯಕತೆಗೆ ಮತ್ತು

ಹೊಸ ಆವಿಷ್ಕಾರಗಳಿಗೆ ತಕ್ಕಂತೆ ಪರೀಕ್ಷಾ ವಿಧಾನವನ್ನ ಬದಲಾಯಿಸಿದ್ದಾರೆ ಆದರೆ ಭಾರತದಲ್ಲಿ ವಿಶ್ವಕೋಶವನ್ನ ಬಾಯಿಪಾಠ ಮಾಡುವದನ್ನ ಪರೀಕ್ಷಿಸುವ ವಿಧಾನ ಇನ್ನೂ ಚಾಲ್ತಿಯಲ್ಲಿದೆ. ನಮಗೆ ವಿಶ್ವಕೋಶ ಗೊತ್ತಿರುವ ವೈದ್ಯರಿಗಿಂತ ರೋಗಿಯನ್ನ ತಾರ್ಕಿಕವಾಗಿ ಯೋಚಿಸಿ, ಸಂಪೂರ್ಣವಾಗಿ ಮತ್ತು ಸುರಕ್ಷಿತವಾಗಿ ಚಿಕಿತ್ಸೆ ನೀಡಬಲ್ಲ ವೈದ್ಯರ ಅವಶ್ಯಕತೆ ಇದೆ . ಅದರಿಂದ ತರಬೇತಿ ಮತ್ತು ಪರೀಕ್ಷಾ ವಿಧಾನದ ಬದಲಾವಣೆಗೆ ಹೆಚ್ಚು ಗಮನ ಕೊಡುವದು ಸೂಕ್ತ .

ತಾಂತ್ರಿಕತೆಯ ಬಗ್ಗೆ ಯೋಚಿಸಿದರೇ ಪ್ರಪಂಚದಾದ್ಯಂತ ಕೊನೆಯ ದಶಕದಲ್ಲಿ ಕ್ಷಿಪ್ರ ಬೆಳವಣಿಗೆ ಕಂಡುಬಂದ್ದಿದ್ದು ಮತ್ತು ಅದರ ಅಳವಡಿಕೆಯೂ ಆಗಿದೆ, ಉದಾಹಣೆಗೆ ಮ್ಯಾಮೋಗ್ರಫಿ, ಹೈ ಎಂಡ್ ಮಲ್ಟಿಡಿಟೆಕ್ಟರ್ ಸಿಟಿ ಸ್ಕ್ಯಾನ್ ಮತ್ತೂ ಹೈ ಫೀಲ್ಡ್ ಸ್ಟ್ರೆಂಗ್ತ್ ಎಂಆರ್ ಐ ಗಳು . ಹೊಸ ಆವಿಷ್ಕಾರಗಳನ್ನ ಭಾರತ ದೇಶ ಅತೀ ಬೇಗ ಅಳವಡಿಸಿಕೊಂಡಿದ್ದು, ಆದರೆ ಸೌಲಭ್ಯದ ಲಭ್ಯತೆ ಬರೀ ದೊಡ್ಡ ಪಟ್ಟಣಗಳಿಗೆ ಮೀಸಲಾಗಿದ್ದು ಅದನ್ನ ಸಮಾನವಾಗಿ ಸಾರ್ವತ್ರಿಕವಾಗಿ ಸಿಗುವಂತೆ ಮಾಡುವದರ ಕಡೆ ಗಮನ ಕೊಡಬೇಕಾಗಿದೆ.



ಕ್ಷ –ಕಿರಣ ಆಧಾರಿತ ಪರೀಕ್ಷೆಗಳಿಗೆ ಡಿಜಿಟಲ್ ಟೆಕ್ನಾಲಜಿಗಳು ಅಂದರೆ ಪಿಕ್ಚರ್ ಮತ್ತು ಕಮ್ಯುನಿಕೇಷನ್ ಸಿಸ್ಟಮ್ (PACS) ಮತ್ತು ರೇಡಿಯಾಲಜಿ ಇನ್ಫರ್ಮೇಷನ್ ಸಿಸ್ಟಮ್ (RIS) ನಂಥ ಸೌಲಭ್ಯಗಳ ಅನುಷ್ಠಾನ ಸೇವೆಯನ್ನ ಪರಿಣಾಮಕಾರಿಯಾಗಿ ಮಾಡುವದಲ್ಲದೆ ಉಪಯುಕ್ತತೆಯನ್ನ ಹೆಚ್ಚಿಸುತ್ತದೆ. ಭಾರತ ದೇಶದ ಬೃಹತ್ ಗಾತ್ರ ಮತ್ತು ಜನಸಂಖ್ಯೆಯಿಂದಾಗಿ ಮತ್ತು ಖಾಸಗಿ ಸಂಸ್ಥೆಗಳ ಆಧಾರಿತ ಸೇವೆಯಿಂದಾಗಿ ಪಾಶ್ಚಿಮಾತ್ಯ ದೇಶಗಳಿಗೆ ಹೋಲಿಸಿದರೆ ಡಿಜಿಟಲ್ ಸೇವೆ ಅಳವಡಿಸಿಕೊಳ್ಳುವದರಲ್ಲಿ ಅಂದಾಜು ಒಂದು ದಶಕ ಭಾರತ ಹಿಂದುಳಿದಿದೆ. ಇತ್ತೀಚಿನ ದಿನಗಳಲ್ಲಿ ಬದಲಾವಣೆ ಗತಿಯನ್ನ ಹೆಚ್ಚಿಸಿರುವದು ಸಂತೋಷಕಾರಿಯಾಗಿದೆ.

ಕೋವಿಡ್ ಸಾಂಕ್ರಾಮಿಕತೆಯ ತದನಂತರ ಟೆಲಿ ರೇಡಿಯಾಲಜಿ ಪಾಶ್ಚಿಮಾತ್ಯ ದೇಶಗಳಲ್ಲಿ ಪರ್ಯಾಯ ಪದ್ಧತಿಯಾಗಿ ಮಾರ್ಪಾಡಾಗಿದೆ. ಭಾರತದಲ್ಲಿ ಇದು ಇತ್ತೀಚಿಗೆ ತನ್ನ ಗತಿಯನ್ನ ಹೆಚ್ಚಿಸಿದೆ. ಇದರ ಕ್ಷಿಪ್ರ ಅನುಷ್ಠಾನ ಬೃಹತ್ ಭಾರತಕ್ಕೆ ಅತೀ ಉಪಯುಕ್ತವಾಗಲಿದೆ, ಅದರಲ್ಲೂ ಗ್ರಾಮೀಣ ಪ್ರದೇಶಗಳಿಗೆ ಇದರ ಉಪಯೋಗ ಲಾಭಕಾರಿಯಾಗಲಿದೆ .

ಪಾಶ್ಚಿಮಾತ್ಯ ದೇಶಗಳಲ್ಲಿ ರೋಗನಿರ್ಣಯ ಅವಲಂಬಿತ ಪರೀಕ್ಷೆಗಳೊಂದಿಗೆ , ತಪಾಸಣೆ ಆಧಾರಿತ ಪರೀಕ್ಷೆಗಳಿಗೂ ಒತ್ತು ಕೊಡಲಾಗಿದೆ. ಭಾರತದಲ್ಲಿ ತಪಾಸಣೆ ಆಧಾರಿತ ಪರೀಕ್ಷೆಗಳ ಉಪಯೋಗ ಇತ್ತೀಚಿನ ದಿನಗಳಲ್ಲಿ ಸ್ವಲ್ಪ ಮಟ್ಟಿಗೆ ಆಗುತ್ತಿರುವದು ಆದರೆ ಸಾಮಾನ್ಯ ಜನರ ಕೈಗೆ ಇನ್ನೂ ಎಟುಕದ ಸೌಲಭ್ಯವಾಗುಳಿದಿದೆ.

ಇದಕ್ಕೆ ಸರ್ಕಾರದ ಸಹಕಾರ ಅವಶ್ಯವಾಗಿದೆ. ದೇಶದ ಇತ್ತೀಚಿನ ಆರ್ಥಿಕ ಬೆಳವಣಿಗೆ ಮುಂಬರುವ ದಿನಗಳಲ್ಲಿ ತಪಾಸಣೆ ಆಧಾರಿತ ಪರೀಕ್ಷೆಗಳ ಉಪಯೋಗ ಹೆಚ್ಚಸಲಿದೆ ಎನ್ನುವದು ನನ್ನ ಅಭಿಪ್ರಾಯ.

ಸೇವೆಯ ಬಳಕೆ ಹೆಚ್ಚಾದಂತೆ ಅದರ ಗುಣಮಟ್ಟ ಕಾಯ್ದುಕೊಳ್ಳುವದು ಅವಶ್ಯವಾಗಿದೆ. ರಾಜ್ಯದಿಂದ ರಾಜ್ಯಕ್ಕೆ, ಸಂಸ್ಥೆಯಿಂದ ಸಂಸ್ಥೆಗೆ ತರಬೇತಿಯಲ್ಲಿ, ಸೌಲಭ್ಯಗಳಲ್ಲಿ ಮತ್ತು ಗುಣಮಟ್ಟದಲ್ಲಿ ವ್ಯತ್ಯಾಸವಿರುವದರಿಂದ ಸೇವೆಯನ್ನು ದೇಶಾದ್ಯಂತ ಪ್ರಮಾಣೀಕರಿಸುವದು, ರೋಗಿಯ ಚಿಕಿತ್ಸೆಯ ಮತ್ತು ವೈದ್ಯಲೋಕದ ಸಾಮರ್ಥ್ಯದ ದೃಷ್ಟಿಯಿಂದ ಅವಶ್ಯವಾಗಿದೆ.

ಇದರ ಜೊತೆಗೆ ಈಗಾಗಲೇ ತಜ್ಞರಾಗಿ ಸೇವೆ ಸಲ್ಲಿಸುತ್ತಿರುವ ವೈದ್ಯರಿಗೆ ಪಾಶ್ಚಿಮಾತ್ಯ ದೇಶದಲ್ಲಿರುವಂತೆ ತರಬೇತಿ ಮತ್ತು ಸೇವೆಯ ಸತತ ಪರಿಶೀಲನೆ ಮತ್ತು ಪ್ರಮಾಣೀಕರಣ ಅವಶ್ಯ.

ಇಂಟರ್ನೆಟ್ ಮತ್ತು ಮಾಹಿತಿ ತಂತ್ರಜ್ಞಾನ ಚಾಲಿತ ರೇಡಿಯೋಲೋಜಿ ವಿಭಾಗ ಹೊಸ ಯುಗಕ್ಕೆ ಕಾಲಿಡುತ್ತಿರುವದರಿಂದ ಜಾಗತಿಕ ಅಂತರ ಕಡಿಮೆಯಾಗುತ್ತಿದೆ. ಪಾಶ್ಚಿಮಾತ್ಯ ದೇಶದಲ್ಲಿರುವದೆಲ್ಲವು ಶ್ರೇಷ್ಠ ವೆಂಬುದು ನನ್ನ ಅಭಿಪ್ರಾಯವಲ್ಲ ಆದರೆ ನಮ್ಮಲ್ಲಿ ಇರುವ ಒಳ್ಳೆಯ ಸೇವೆಗಳನ್ನ ಬೆಳೆಸಿಕೊಂಡು ಹೊಸ ಆವಿಷ್ಕಾರಗಳನ್ನ ಅಳವಡಿಸಿಕೊಂಡು ಸೇವೆಯನ್ನು ಉತ್ತುಗಂಕೆ ತಲುಪುವ ಗುರಿ ಭಾರತ ಕ್ಷ –ಕಿರಣ ತಂಡದ್ದಾಗ ಬೇಕೆನ್ನುವದು ನಮ್ಮ ಆಶಯ.



# ಪದಬಂಧ – 12

**ಡಾ. ರಮೇಶ ಬಾಬು ಕೆ**
ನಿವೃತ್ತ ಪ್ರಾಧ್ಯಾಪಕರು, ಹುಬ್ಬಳ್ಳಿ

| | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|
| 1 | | 2 | | 3 | | 4 | 5 | | 6 | 7 | | 8 | | 9 | | 10 |
| | | | | 11 | 12 | | | | 13 | | 14 | | | | | |
| 15 | | | | | | | | | | | | | | 16 | | |
| | | | 17 | | | | | | | | | | 18 | | | |
| 19 | 20 | | | 21 | | 22 | | 23 | | 24 | | 25 | | | 26 | |
| | | | | 27 | | | | | | 28 | | | | | | |
| 29 | | | | | | | 30 | | | | | | | | | 31 |
| 32 | | 33 | | 34 | | 35 | | | | 36 | | 37 | | 38 | | |
| | | 39 | | | | 40 | | | 41 | | | 42 | | | | |
| 43 | | | | 44 | | | | 45 | | 46 | | | | 47 | | |
| | | | | | | | 48 | | | | | | | | | |
| | 49 | | | 50 | | 51 | | | | 52 | | 53 | | | 54 | |
| 55 | | | 56 | | | 57 | | | | | | 58 | 59 | | | 60 |
| | | | | | 61 | | | | | | 62 | | | | | |
| 63 | | 64 | | | | | 65 | | 66 | | | | | 67 | | |
| | | | | 68 | | 69 | | | 70 | 71 | | 72 | | | | |
| 73 | | | | | | 74 | | | | | | 75 | | | | |

**ಸುಳಿವುಗಳು**

**ಎಡದಿಂದ ಬಲಕ್ಕೆ:**
೧. ಒಳ್ಳೆಯ ರೀತಿಯಲ್ಲಿ ಖರ್ಚಾದುದು (೫) ೪. ಭಾಷಣಕಾರ (೫) ೮. ಪಾಪದ ಸೋಂಕೇ ಇಲ್ಲದ (೫) ೧೧. ವಿಚಾರ ಮಾಡುವವನು (೪) ೧೩. ಮರದಲ್ಲಿ ದೊರಕುವ ಅಮೂಲ್ಯ ಮಣೀಯೇ (೪) ೧೫. ಕುದುರೆ ಸವಾರ (೩) ೧೬. ಉತ್ತರ ಕನ್ನಡದವರ ನಮೂನೆ (೩) ೧೯. ಜೊತೆಯಾಗಿ ಬಾಳುವುದು (೫) ೨೨. ಮಾಮರವೆಂದರೂ ಸರಿಯೇ (೫) ೨೫. ಎಲ್ಲವನ್ನೂ ಕೊಡುವವನು (೫) ೨೭. ಗಂಗೆಯ ಜೊತೆಯಲ್ಲಿ ಬರುವವಳು (೩) ೨೮. ಇದು ನೂರು ತರಹವೇ (೩) ೩೦. ವಿಶ್ರಾಂತಿ (೩) ೩೨. ಹೋಮದ ಜೊತೆ ಬರುವ ಒಂದು ವಿಧಿ (೩) ೩೪. ಪ್ರಯಾಸವಲ್ಲ, ಒಂದು ಬಗೆಯ ಪಯಣ (೩) ೩೬. ಚಿಟ್ಟೆಯಂತಹುದೇ ಕೀಟ (೩) ೩೮. ಸರದ ಮಧ್ಯೆ ಇರುವ ಬಿಲ್ಲೆ (೩) ೩೯. ಪುರುವಿನ ತಂದೆ (೩) ೪೦. ಮನ್ಮಥನ ಮಡದಿ (೨) ೪೧. ತಂದೆ (೨) ೪೨. ಹೊಟ್ಟೆಕಿಚ್ಚು (೩) ೪೩. ಮನ್ಮಥ (೩) ೪೪. ಹಸು ಒಂದು – – – ಹಾಕುವ ಪ್ರಾಣಿ (೩) ೪೫. ಹೊಸತು (೩) ೪೭. ಪ್ರಾಯಕ್ಕೆ ಬಂದ ಹಸು ಅಥವಾ ಎಮ್ಮೆ (೩) ೪೮. ಬೀಳ್ಕೊಡುಗೆ (೩) ೫೦. ನಾಯಿ (೩) ೫೨. ಬಿಳಿಚಿಕೊಂಡ ಸ್ಥಿತಿ (೩) ೫೫. ನಗರವನ್ನು ಪಾಲಿಸುವವನು (೫) ೫೭. ಮಂಜಿನಿಂದ ಕೂಡಿದ ಪ್ರದೇಶ (೫) ೫೮. ಕೊಳ್ಳುವ ಮಾರಾಟ ಮಾಡುವ ಕ್ರಿಯೆ (೫) ೬೩. ವೈಭವಾ ಜೀವನ (೩) ೬೭. ರವಿಕೆ (೩) ೬೮. ಅತ್ಯಂತ ರುಚಿಕರ ಅಡುಗೆಯನ್ನು ಬಣ್ಣಿಸುವ ಪದ (೪) ೭೦. – – – – ಪ್ರಿಯ ಸಾಂಬರೂಪಿಣಿ (೪) ೭೩. ನೃತ್ಯದ ಮೂಲಕ ದೇವರ ಸೇವೆ (೫) ೭೪. ಶಬ್ದಭಂಡಾರ (೫) ೭೫. ಆಕಾಶದಲ್ಲಿ ಸಂಚಾರ (೫

**ಮೇಲಿನಿಂದ ಕೆಳಕ್ಕೆ:** ೧. ಯುದ್ಧದ ತರಬೇತಿ (೫) ೨. ವ್ಯಸ್ತ (೩) ೩. ಗುಹೆ (೨) ೪. ಎದೆ (೨) ೫. ಹೂವಿನ ಎಸಳು (೩) ೬. ಯುದ್ಧ (೩) ೭. ಹಸ್ತ (೨) ೮. ಬೀಳುವುದು (೨) ೯. ಹಲ್ಲು (೩) ೧೦. ತಪಸ್ಸಿನಲ್ಲಿ ಮಗ್ನ (೫) ೧೨. ವಾಹನವನ್ನು ಓಡಿಸುವವನು (೩) ೧೪. ಇದು ನನಸಲ್ಲ ಕೇವಲ – – – (೩) ೧೭. ದಿನದ ಎಂಟನೆಯ ಒಂದು ಭಾಗ (೨) ೧೮. ಕೋಗಿಲೆ (೨) ೨೦. ಧನ (೨) ೨೧. – – ವಿನಯಗಳು ವಿದ್ಯಾವಂತರ ಲಕ್ಷಣ (೨) ೨೨. ಮರ್ಯಾದೆ (೨) ೨೩. ದಸರಾ (೪) ೨೪. ಸೂರ್ಯ (೨) ೨೫. ಜೊತೆಗೆ (೨) ೨೬. ಬಾಯಾರಿಕೆ (೨) ೨೯. ಸಾಹಸಗಳಿಂದ ಕೂಡಿದ (೫) ೩೧. ತೆನಾಲಿ ರಾಮ ಇಂತಹ ಕವಿ (೫) ೩೩. ಕಣ್ಣು (೩) ೩೪. ವಿಗ್ರಹ (೩) ೩೫. ಸರಂಜಾಮು (೩) ೩೬. ಬೀಳುವಿಕೆ (೩) ೩೭. ಹೊರಡುವುದು (೩) ೩೮. ಅತ್ಯುತ್ಕೃಷ್ಟ (೩) ೪೫. ಇವನಿಗೆ ಅದೇ ಧ್ಯಾನ (೪) ೪೯. ಇವನೂ ಕೂಡಾ ಮನ್ಮಥನೇ (೨) ೫೦. ಗಿಳಿ (೨) ೫೧. ಸಿಹಿಯಲ್ಲ (೨) ೫೨. ಪಾನೀಯ (೨) ೫೩. ನೇರವಲ್ಲದ (೨) ೫೪. ಗಾಳಿ (೨) ೫೫. ಮಗನನ್ನು ಪಡೆ–ಯದೇ ಇರುವವನು (೫) ೫೬. ಕುಶನ ಸಹೋದರ (೨) ೫೯. ಮಸೂರ (೩) ೬೧. ಕಡಲೇಬೇಳೆ ಇಂತಹ ಒಂದು ಧಾನ್ಯ (೨) ೬೨. ಎಣ್ಣೆ ತಯಾರಕ ಧೀರ್ಘವಾಗಿದ್ದಾನೆ (೩) ೬೪. ಸಮ (೩) ೬೫. – – – ಸಿಂಗಾರಿ, ಮೈ ಡೊಂಕಿನ ವೈಯಾರಿ (೩) ೬೬. ಕರ್ನಾಟಕ ಸಾಹಿತ್ಯ ಪರಿಷತ್ತು ಹ್ರಸ್ವವಾಗಿದೆ. (೩) ೬೭. ಕಟ್ಟ ಜನ (೩) ೬೮. ತುರಿಕೆ (೨) ೬೯. ಪುಣ್ಯವಲ್ಲ (೨) ೭೧. ಮತ್ತು (೨) ೭೨. ಒಡವೆ (೨)

**ಪದಬಂಧ ೧೧ ರ ಸರಿಯುತ್ತರಗಳು:**

ಎಡದಿಂದ ಬಲಕ್ಕೆ: ೧.ಮಹಾಭಾರತ, ೪.ಕುಮಾರ ವ್ಯಾಸ, ೮.ಕಾಮಿತಫಲ, ೧೧.ಪರಾಜಯ, ೧೩.ಪರಮಾಣು, ೧೫.ಪ್ರಸವ, ೧೬.ನಸುಕು, ೧೯.ನವಪಲ್ಲವ, ೨೨.ಕೊಲೆಪಾತಕಿ, ೨೫.ಹೊಸಚಿಗುರು, ೨೭.ನಮೂನೆ, ೨೮.ವಿಕಲ, ೩೦.ಪ್ರವಾಹ, ೩೨.ಮನವಿ, ೩೪.ಮಕರ, ೩೬.ಸುಗಮ, ೩೮.ಚಮಚ, ೩೯.ಕಾರಣ, ೪೦.ಸಿರಾ, ೪೧.ಸದಾ, ೪೨.ಸವಾರ, ೪೩.ಪ್ರವಾಸ, ೪೪.ಕಟುಕ, ೪೬.ಮರಣ, ೪೭.ಕಪೋಲ, ೪೮.ಸಮಾನ, ೫೦.ಅಡವಿ, ೫೨.ನೇಸರ, ೫೫.ಕಡಲೆಬೀಜ, ೫೭.ಪ್ರಮಾಣಪತ್ರ, ೫೮.ಚಿರಯೌವನ, ೬೩.ಕನಕ, ೬೭.ಪದವಿ, ೬೮.ಪುರವಣಿ, ೭೦.ಪ್ರಚಾರಕ, ೭೩.ಸರಳಸೂತ್ರ, ೭೪.ರಗಳೆಕವಿ, ೭೫.ಸಮರಭಯ.

ಮೇಲಿನಿಂದ ಕೆಳಕ್ಕೆ: ೧.ಮಹಾಪ್ರಸಾದ, ೨.ಭಾರ್ಗವ, ೩.ತಪ, ೪.ಕುಜ, ೫.ಮಾಯಕ, ೬.ವ್ಯಾಪಕ, ೭.ಸರ, ೮.ಕಾಣು, ೯.ತಪನ, ೧೦.ಲವಕುಶರು, ೧೨.ರಾಜಸ, ೧೪.ಮಾಸಿಕ, ೧೭.ಗೊಲ್ಲ, ೧೮.ಮಾಸ, ೨೦.ವರ, ೨೧.ವನ, ೨೨.ಕೊನೆ, ೨೩.ಪಾರಿವಾಳ, ೨೪.ಕಿವಿ, ೨೫.ಹೊಲ, ೨೬.ಗುರು, ೨೯.ಸಮಯಪ್ರಜ್ಞೆ, ೩೧.ವಾಚನಾಲಯ, ೩೩.ವಿಕಾರ, ೩೪.ಮಣಕ, ೩೫.ರಸಿಕ, ೩೬.ಸುದಾಮ, ೩೭.ಮಸಣ, ೩೮.ಚರಕ, ೪೫.ರಾಮಾಯಣ, ೪೯.ಬೇಡ, ೫೦.ಅಜ, ೫೧.ವಿಪ್ರ, ೫೨.ನೇತ್ರ, ೫೩.ರುಚಿ, ೫೪.ಭಾವ, ೫೫.ಕನಕದಾಸ, ೫೬.ಬೀಡು, ೫೯.ರಜೆ, ೬೦.ನಯವಿನಯ, ೬೧.ಪ್ರಖರ, ೬೨.ಮತ್ಸರ, ೬೪.ಕವಳ, ೬೫.ಗಾಣಿಗ, ೬೬.ಕಮುಕ, ೬೭.ಪಗಾರ, ೬೮.ಪುತ್ರ, ೬೯.ವರ, ೭೧.ಚಾವಿ, ೭೨.ಕಸ.





## ಚಿತ್ರ ಸಂಪದ

**ಡಾ. ಅರವಿಂದ ಪಟೇಲ್**
ವಿಭಾಗೀಯ ಸಂಪಾದಕರು

**ಡಾ ಪ್ರಿಯಾ ಭಾಲ್ಕಿ**
ವಿಭಾಗೀಯ ಸಂಪಾದಕರು



**ಡಾ. ಅರವಿಂದ ಪಟೇಲ್**
ನೊಣ ಹಿಡುಕ



**ಡಾ. ಅರವಿಂದ ಪಟೇಲ್**
ಗುಲಾಬಿ ಗುಬ್ಬಿ

## ಚಿತ್ರ ಸಂಪದ



**ಡಾ ಸುನಂದಾ ಆರ್ ಕುಲಕರ್ಣಿ**
ನಿವೃತ್ತ ಪ್ರಾಧ್ಯಾಪಕರು
ಸ್ತ್ರೀ ಆರೋಗ್ಯ ಮತ್ತು ಪ್ರಸೂತಿ ತಜ್ಞೆ, ಧಾರವಾಡ









## ಚಿತ್ರ ಸಂಪದ

**ಡಾ ನಾಗರಾಜ ಚಿಂದನೂರು**





